# ನಮ್ಮ ಸುತ್ತಿನ ಜನಪದ ಕಥನಗೀತೆಗಳು



ಜಯಲಕ್ಷ್ಮೀ ಸೀತಾಪುರ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
೧೪/೩, ನೃಪತುಂಗ ರಸ್ತೆ, ಬೆಂಗಳೂರು-೫೬೦ ೦೦೨

# ನಮ್ಮ ಸುತ್ತಿನ ಜನಪದ ಕಥನಗೀತೆಗಳು

ಸಂಪಾದಕಿ

ಶ್ರೀಮತಿ ಜಯಲಕ್ಷ್ಮೀ ಸೀತಾಪುರ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

೧೪/೩, ನೃಪತುಂಗ ರಸ್ತೆ, ಬೆಂಗಳೂರು–೫೬೦ ೦೦೨

*NAMMA SUTTINA JANAPADA KATHANA GEETHEGALU*
*A collection of Folk tales in Kannada, Collected and Edited by Smt. Jayalakshmi Seethapura, Published by Karnataka Jaanapada and Yakshagana Academy, Nripatunga Road, Bangalore-560 002.*
pp. xviii + 160

ಮೊದಲ ಮುದ್ರಣ : ೧೯೯೪

© ಹಕ್ಕುಗಳನ್ನು ಕಾದಿರಿಸಲಾಗಿದೆ

ಬೆಲೆ : ರೂ. ೩೦-೦೦

ಮುಖಪುಟ ವಿನ್ಯಾಸ : ಬಿ. ಜಿ. ಕನಕೇಶಮೂರ್ತಿ

ಮುದ್ರಕರು : ಜಯಲಕ್ಷ್ಮಿ ಪ್ರಿಂಟರ್ಸ್
೧೪ನೇ ತಿರುವು, ರಾಮಾನುಜ ರಸ್ತೆ, ಮೈಸೂರು-೪

# ಅರ್ಪಣೆ

ಜನಪದ ಸಾಹಿತ್ಯದ ತುಂಬು ಕಣಜವಾದ
ವಕ್ತೃವೃಂದಕ್ಕೆ ಪ್ರೀತಿಅಭಿಮಾನದಿಂದ

# ಪ್ರಧಾನ ಸಂಪಾದಕರ ಮಾತು

ಕನ್ನಡದಲ್ಲಿ ಜನಪದ ಕಾವ್ಯಗಳ ಹೇರಳವಾದ ಸಂಗ್ರಹ ಸಾಕಷ್ಟು ಬೆಳಕಿಗೆ ಬಂದಿದೆ. ಅನೇಕ ವೈವಿಧ್ಯಮಯವಾದ ಖಂಡಕಾವ್ಯಗಳು, ಮಹಾಕಾವ್ಯಗಳು ಕನ್ನಡದಲ್ಲಿ ದೊರಕಿರುವುದು ತುಂಬಾ ಅಭಿಮಾನದ ವಿಷಯ. ಅನೇಕ ಕಥನಸಾಹಿತ್ಯ ಗಳಿಗೆ ಕರ್ನಾಟಕದಾದ್ಯಂತ ಸಾರಾಂಶಗಳು ಲಭ್ಯವಾಗುತ್ತದೆ. ಉತ್ತರದೇವಿಕತೆ ಇದಕ್ಕೆ ಒಳ್ಳೆಯ ಉದಾಹರಣೆ. ಸ್ತ್ರೀ ಪಾತ್ರಗಳನ್ನು ಕೇಂದ್ರವಾಗಿಟ್ಟುಕೊಂಡು ಅನೇಕ ಕಥನಗೀತೆಗಳನ್ನು ನಮ್ಮ ಮಹಿಳೆಯರು ರಚಿಸಿ ಹಾಡಿಕೊಂಡು ಬಂದಿದ್ದಾರೆ. ಇವು ಗಳಲ್ಲಿ ಸ್ತ್ರೀಲೋಕದ ಅನೇಕ ಸಮಸ್ಯೆಗಳು ಪ್ರತಿಬಿಂಬಿತವಾಗಿವೆ. ಈ ಹಾಡುಗಳೆಲ್ಲ ಒಂದಲ್ಲ ಒಂದು ದೃಷ್ಟಿಯಿಂದ ನಾನಾ ಸಮಸ್ಯೆಗಳ ಸುತ್ತ ಹೆಣೆದುಕೊಂಡು ವೈವಿಧ್ಯತೆ ಯಿಂದ ಕೂಡಿರುತ್ತವೆ. ಇಂತಹ ಅಪೂರ್ವ ಕಥನಗೀತೆಗಳ ಸಾಲಿನಲ್ಲಿ ಶ್ರೀಮತಿ ಜಯಲಕ್ಷ್ಮಿ ಸೀತಾಪುರ ಅವರು ಸಂಪಾದಿಸಿ ಕೊಟ್ಟಿರುವ ನಮ್ಮ ಸುತ್ತಿನ ಜನಪದ ಕಥನಗೀತೆಗಳು ಒಂದು ಒಳ್ಳೆಯ ಕೊಡುಗೆಯಾಗಿದೆ.

ಶ್ರೀಮತಿ ಸೀತಾಪುರ ಅವರು ಜಾನಪದ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿದ್ದಾರೆ. ಮಂಡ್ಯ, ಹಾಸನ, ಮೈಸೂರು ಜಿಲ್ಲೆಗಳಲ್ಲಿ ಅಪಾರ ಸಾಹಿತ್ಯ ಸಂಗ್ರಹಮಾಡಿದ್ದಾರೆ. ಭಾಗವಂತಿಕೆ ಸಂಪ್ರದಾಯವನ್ನು ಕುರಿತು ವಿವರವಾಗಿ ಅಧ್ಯಯನ ಮಾಡಿದ್ದಾರೆ. ಅವರ ನಮ್ಮ ಸುತ್ತಿನ ಜನಪದ ಕಥನಗೀತೆಗಳು ಈಗಾಗಲೇ ಬೆಳಕು ಕಂಡಿರುವ ನೂರಾರು ಕಥನಗೀತೆಗಳ ಸಾಲಿಗೆ ವಿಶಿಷ್ಟ ಕೊಡುಗೆಯಾಗಿದೆ ಇಂತಹ ಅತ್ಯುತ್ತಮವಾದ ಜಾನಪದ ಗ್ರಂಥವೊಂದನ್ನು ಸಂಪಾದಿಸಿಕೊಟ್ಟ ಅವರಿಗೆ ಅಕಾಡೆಮಿಯ ಪರವಾಗಿ ಕೃತಜ್ಞತೆಗಳು.

ಈ ಗ್ರಂಥವನ್ನು ಶೀಘ್ರವಾಗಿ ಹಾಗೂ ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ಜಯಲಕ್ಷ್ಮಿ ಪ್ರಿಂಟರ್ಸ್ ಮಾಲಿಕರಾದ ಶ್ರೀ ಜಯಣ್ಣ ಹಾಗೂ ಅವರ ಶ್ರೀಮತಿ ಮಂಜುಳ ಅವರಿಗೂ ಸುಂದರವಾದ ಮುಖಪುಟ ವಿನ್ಯಾಸವನ್ನು ರಚಿಸಿಕೊಟ್ಟ ಶ್ರೀ ಬಿ. ಜಿ. ಕನಕೇಶಮೂರ್ತಿಯವರಿಗೂ ಕರಡು ತಿದ್ದುವುದರಲ್ಲಿ ನೆರವಾದ ಡಾ. ಅಕ್ಕಮಹಾದೇವಿಯವರಿಗೂ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಜೀ. ಶಂ. ಪರಮಶಿವಯ್ಯ

# ನನ್ನೆರಡು ಮಾತು

ಜನಪದ ಕ್ಷೇತ್ರದಲ್ಲಿ ನನಗೆ ಚಿಕ್ಕಂದಿನಿಂದಲೇ ಆಸಕ್ತಿ. ನನ್ನ ಸುತ್ತಲಿನ ಜನಪದ ಪರಿಸರ ಗ್ರಾಮವಾಸಿಯಾದ ನನಗೆ ಉತ್ತೇಜಿತ ನಂದನವನ. ಈ ಹರಕೆ ಆಚಾರ್ಯ ಜೀ. ಶಂ. ಪರಮಶಿವಯ್ಯ ಅವರಿಂದ ಮತ್ತೂ ಉದ್ದೀಪನಗೊಂಡು ಈ ಕ್ಷೇತ್ರದಲ್ಲಿ ನನ್ನನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳಲು ಅವಕಾಶವಾಯಿತು. ಡಾ. ಜೀ. ಶಂ. ಪರಮಶಿವಯ್ಯ ಅವರು ನನ್ನಂತಹ ಅನೇಕರಿಗೆ ಪ್ರೋತ್ಸಾಹದ ಹಸ್ತ ನೀಡಿದವರು. "ಕರ್ಪೂರ ಸುಟ್ಟರೆ ಭಸ್ಮವುಂಟೆ" ಎನ್ನುವ ಮಾತಿನಂತೆ ಕಂಡೂ ಕಾಣದಂತೆ, ಪೂರ್ಣವಾದ ಪ್ರೌಢ ನೆಲೆಯನ್ನು ಕಾಣುವವರೆಗೂ ಎಲ್ಲರಿಗೂ ತಿಳಿಯ ಹೇಳುವ ಅವರ ಹೃದಯ ಶ್ರೀಮಂತಿಕೆಯನ್ನು ಯಾರೂ ನೆನೆಯಬೇಕು.

ಹಳ್ಳಿಯಲ್ಲೇ ಹುಟ್ಟಿ ಬೆಳೆದು ಪ್ರೌಢ ಶಾಲೆಯವರೆಗೂ ಅಲ್ಲೇ ವಿದ್ಯಾಭ್ಯಾಸ ನಡೆಸಿದ ನನಗೆ ಪೌರಾಣಿಕ ನಾಟಕಗಳು, ಜನಪದ ಕಲೆ, ಕ್ರೀಡೆ, ಸಾಹಿತ್ಯ ಇವುಗಳಲ್ಲಿ ಅನನ್ಯವಾದ ಪಾಲುಗಾರಿಕೆ. ಗ್ರಾಮದೇವತೆ ಹಬ್ಬ ಹರಿದಿನಗಳಲ್ಲಿ ನಮ್ಮೂರಿನ ಹಾಗೂ ನೆರೆಯೂರುಗಳಲ್ಲಿ ಸೂರೆಯಾಗುತ್ತಿದ್ದ ಜಾನಪದ ಸಂಪತ್ತನ್ನು ನನ್ನ ಮನ ನನಗರಿವಿಲ್ಲದೆಯೇ ಕೊಳ್ಳೆಹೊಡೆಯುತ್ತಿತ್ತು. ಒಂದೊಂದೇ ಈಚಲ ಗರಿ ಮಲಗುವ ಚಾಪೆಯಾಗುವಂತೆ ದಟ್ಟವಾದ ಆಸಕ್ತಿ ಮೂಡಿ ಈ ಕ್ಷೇತ್ರದಲ್ಲಿ ಒಲವು ಮೂಡಲು ಪ್ರೇರಕವಾಯಿತು.

ಜನಪದ ಸಾಹಿತ್ಯ ಪ್ರಕಾರಗಳಲ್ಲಿ ಕಥನಗೀತೆಗಳು ಪ್ರಮುಖವಾದ ಆಕರ್ಷಣೆಯನ್ನು ಪಡೆದುಕೊಂಡಿವೆ. ಆದರೆ ಇವುಗಳ ಸಂಗ್ರಹಕಾರ್ಯ ಸಾಕಷ್ಟು ನಡೆದಿದ್ದರೂ ಹೇಳಿಕೊಳ್ಳುವಷ್ಟರ ಮಟ್ಟಿಗೆ ನಡೆದಿಲ್ಲ. ತ್ಯಾಗ ಬಲಿದಾನಗಳ ಮೂಲನಿಷ್ಠೆಗೆ ಒಳಗಾದ ಈ ಕಥನಗೀತೆಗಳಲ್ಲಿ ಹೆಣ್ಣು ಮಕ್ಕಳಲ್ಲಿ ಮೀಸಲಾದ ವಿಶೇಷ ಕಥಾನಕಗಳು ನಾಯಕಿ ಪ್ರಧಾನವಾದವು. ಶ್ರಮದ ಬದುಕನ್ನು ಸಾಗಿಸುವ ಹಳ್ಳಿಗಾಡಿನ ಸ್ತ್ರೀಯರು ತಮ್ಮ ಜೀವನದ ಅವಿಭಾಜ್ಯ ಅಂಗವಾಗಿ ಹಾಡುವುದನ್ನು ರೂಢಿಸಿಕೊಂಡು ಬಂದವರು. ಸುಮಧುರ ಕಂಠದಿಂದ ಹಾಡಿ ತಮ್ಮ ಬಾಳನ್ನು ಸಾರ್ಥಕಪಡಿಸಿಕೊಂಡಿದ್ದಾರೆ. ಮೌಲ್ಯವುಳ್ಳ ಕಥಾ ಚೌಕಟ್ಟಿನಲ್ಲಿ ದೋಣಿಯ ಹುಟ್ಟು ಏರುಪೇರಿಲ್ಲದೆ ನಡೆದು ವ್ಯತ್ಯಾಸವಾದಾಗ ಅದು ಸದಾ ಬಡಿಯುವುದು ಹೆಣ್ಣಿಗೆ ಎಂಬುದು ಸಾರ್ವಕಾಲಿಕ ಸತ್ಯವೆನಿಸುತ್ತದೆ. ಇಂದು ಕೂಡ ತಾಯಿ ಪಾತ್ರದಲ್ಲಿ ಹೆಣ್ಣು ಹೆಣ್ಣೇ ಎಂಬುದನ್ನು ಯಾರೂ ಮರೆಯುವಂತಿಲ್ಲ. ಈ ಹಾಡ್ಗತೆಗಳನ್ನು ಸ್ತ್ರೀಯರು ಮಾತ್ರವಲ್ಲದೆ ಪುರುಷರು ಹಾಡುತ್ತಾರೆ ಎನ್ನುವುದಕ್ಕೆ ಪ್ರಸ್ತುತ ಕೃತಿಯಲ್ಲಿ ನಿದರ್ಶನವಿದೆ.

ಈ ಕಥನಗೀತೆಗಳನ್ನು ಕೃತಿಯ ರೂಪದಲ್ಲಿ ಹೊರತರುವಲ್ಲಿ ಉದಾತ್ತತೆಯನ್ನು ತೋರಿರುವ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಿಗೂ ರಿಜಿಸ್ಟ್ರಾರರಿಗೂ ಹಾಗೂ ಸಿಬ್ಬಂದಿ ವರ್ಗದವರಿಗೂ ಕೃತಜ್ಞತೆಗಳನ್ನು ನಮ್ರತೆಯಿಂದ ಸಲ್ಲಿಸುತ್ತೇನೆ.

ಜಯಲಕ್ಷ್ಮೀ ಸೀತಾಪುರ

# ಪ್ರಸ್ತಾವನೆ

ಜನಪದ ಸಾರಸ್ವತ ಲೋಕದಲ್ಲಿ ಜನಪದ ಕಥನಗೀತೆಗಳದು ಒಂದು ವಿಶಿಷ್ಟವಾದ ಸ್ಥಾನ. ಅವುಗಳು ಜನಪದರ ಮೇಲೆ ಮಹತ್ತರ ಪ್ರಭಾವ ಬೀರಿವೆ. ಪೀಳಿಗೆಯಿಂದ ಪೀಳಿಗೆಗೆ ರವಾನಿಸಲ್ಪಡುವ ಜನಪದ ಸಾಹಿತ್ಯ ಅಪೂರ್ವವಾದ ಸಾಂಸ್ಕೃತಿಕ ನೆಲೆಯೇ ದಿಟ. ಕಥನಗೀತೆಗಳ ಪರಿಮಿತಿಯಲ್ಲಿ ಹೇಳಬೇಕಾದ ಸತ್ವವನ್ನು ಬಹು ಸುಂದರವಾಗಿಯೇ ಚಿತ್ರಿಸುವ ನಮ್ಮ ಜನಪದರ ಜಾಣ್ಮೆಯನ್ನು ಯಾರೂ ಮೆಚ್ಚಬೇಕು. ಸ್ತ್ರೀಲೋಕದ ನೋವಿನ ನುಡಿಗಳನ್ನು, ಬತ್ತಳಿಕೆಯಿಂದ ಹೊರತೆಗೆದು ಹೂಡುವ ಬಿರುಸು ಬಾಣದಂತೆ ಪರಿಗಣಿಸದೆ, ತಮ್ಮನ್ನು ತಾವು, ತಾನೆ ಉರಿಸಿಕೊಂಡು ಇತರರಿಗೆ ಬೆಳಕು ನೀಡುತ್ತಾ ಸಾರ್ಥಕ ಪಡೆದುಕೊಳ್ಳುವ ಹಣತೆಯಂತೆ ಬದುಕುವವರೇ ಅಪಾರ ಮಂದಿ. ತಮ್ಮ ಜೀವಿತದ ಕಾಲವೆಲ್ಲ ಹಾಗೆಯೇ ಎಂದು ಒಪ್ಪಿಕೊಂಡವರು, ಹಾಗೊಂದು ವೇಳೆ ಅಪರೂಪಕ್ಕೊಂದು ಉತ್ತಮ ಉದಾಹರಣೆಯಾಗಿ ಸ್ತ್ರೀಯರಲ್ಲಿ ಸುಖಿಯಿದ್ದಲ್ಲಿ ಅದ ಕೇಳಿ ಅಥವಾ ನೋಡಿ ಅಸೂಯೆಪಡದೆ, "ಯೋಗಿ ತಂದದ್ದು ಯೋಗಿಗೆ, ಜೋಗಿ ತಂದದ್ದು ಜೋಗಿ"ಗೆ ಎಂದು ನಂಬಿ ಸಮಾಧಾನದಿಂದ ಬದುಕಿದವರು ತ್ಯಾಗಬಲಿದಾನಗಳಿಗೆ ಹೆಸರಾದ ಅಪಾರ ಸಂಖ್ಯೆಯ ಜನಪದ ಕಥನಗೀತೆಗಳು ನಮ್ಮಲ್ಲಿ ಲಭ್ಯವಾಗುತ್ತವೆ. ಒಟ್ಟಾರೆ ಅವುಗಳನ್ನೆಲ್ಲ ಕಲೆಹಾಕಿ ನಮ್ಮ ಸಂಸ್ಕೃತಿಯ ಜೀವನದರ್ಶನವನ್ನು ತಿಳಿಯಲು ಶ್ರಮಿಸಬೇಕು. ನಂಬಿಕೆ ನಡಾವಳಿಗಳು, ಸೌಂದರ್ಯಾಭಿರುಚಿ, ಆಚಾರವಿಚಾರಗಳು, ರೀತಿನೀತಿಗಳು, ಬನಿಯಾದ ಗ್ರಾಮೀಣ ಸೊಗಡಿನಿಂದ ಕೂಡಿದ ಭಾಷಾಶ್ರೀಮಂತಿಕೆ, ಸಾಮಾಜಿಕ ಸಾಂಸ್ಕೃತಿಕ ಜೀವನ ಚಿತ್ರದ ಒಳಗು ಹೊರಗಿನ ವರ್ಣನೆ ಇತ್ಯಾದಿಗಳು ಆಮೂಲಾಗ್ರವಾಗಿ ನಮಗೆ ಲಭ್ಯವಾಗುತ್ತವೆ. ಅಂಥ ನಿಟ್ಟಿನಲ್ಲಿ ಕೆಲವು ಕಥನಗೀತೆಗಳನ್ನು ಪ್ರಸ್ತುತ ಕೃತಿಯಲ್ಲಿ ಕಾಣಬಹುದಾಗಿದೆ.

ಜನಪದ ಸಾಹಿತ್ಯ ಕ್ಷೇತ್ರದಲ್ಲಿ ತ್ಯಾಗ ಬಲಿದಾನಗಳಿಗೆ ಕೊರತೆಯಿಲ್ಲ. ಅದರಲ್ಲೂ ಹೆಣ್ಣು ಮಕ್ಕಳ ಪಾತ್ರ ಬಹು ಹಿರಿದಾದದ್ದು. ಅಂತಹ ಒಂದು ಸಾಲಿನಲ್ಲಿ ನಿಲ್ಲಬಲ್ಲ ವಿಶಿಷ್ಟವಾದ ಕಥಾ ಚೌಕಟ್ಟನ್ನು ಒಳಗೊಂಡ 'ಹೊನ್ನಮ್ಮ' ಕಥನಗೀತೆಯೂ ಒಂದು. ಅತ್ತೆ ನಾದಿನಿಯರ ಕಿರುಕುಳ ಹೊಸದೇನೂ ಅಲ್ಲದಿದ್ದರೂ ಮಾನವೀಯ ಗುಣಗಳಿಗೆ ಮುಳ್ಳಿನ ಪಂಜರವನ್ನು ಕವಚುವ ಗುಣವುಳ್ಳವರೂ ಪ್ರಪಂಚದಲ್ಲಿ ಇರುವವರೆಗೂ ಹೊನ್ನಮ್ಮನಂತಹ ಸಹನಾಶೀಲೆಯರಿಗೆ ಕಷ್ಟ ತಪ್ಪಿದ್ದಲ್ಲ. ಹಾಗೆಯೇ ಹೊನ್ನಮ್ಮನಂತಹವರ ಕೀರ್ತಿಯೂ ಇಮ್ಮಡಿಸುವುದರಲ್ಲಿ ಅನುಮಾನವಿಲ್ಲ.

ಹೊನ್ನಮ್ಮ ಎರಡನೆಯ ಮಗುವಿಗೆ ಮೂರು ತಿಂಗಳ ಬಸುರಿ ಇರುವಾಗಲೆ ಗಂಡ ದಂಡಿಗೆ ಹೋಗುತ್ತಾನೆ. ತದನಂತರ 6 ತಿಂಗಳಲ್ಲಿ ಆಕೆ ಪಡಬಾರದ ಕಷ್ಟಪಡುತ್ತಾಳೆ. ಒಮ್ಮೆ ಬಸುರಿಯ ಬಯಕೆಯಾಗುತ್ತದೆ ಹೊನ್ನಮ್ಮನಿಗೆ. ಅತ್ತೆಯನ್ನುದ್ದೇಶಿಸಿ ನಾನು ಮೀನನ್ನು ತಿನ್ನಬೇಕು ತೌರಿಗೆ ಹೋಗುತ್ತೇನೆ ಎಂದಾಗ ಇವಳ ಇರುವಿಕೆಯನ್ನೆ ಸಹಿಸದ ಇವರು ತವರಿಗೆ ಹೋದರೆ ನೆಮ್ಮದಿಯಾಗುತ್ತಾಳೆಂದು, ನಾವೇ ಮೀನು ಹಿಡಿಯುವ ಎಂದು ಅವರನ್ನು ಕರೆದುಕೊಂಡು ಕೂಳಿಯನ್ನು ತೆಗೆದುಕೊಂಡು ಹೊರಡುತ್ತಾರೆ. ಹಳ್ಳದಲ್ಲಿ ಮೀನು ಹಿಡಿಯುವಾಗ ಆಕಸ್ಮಿಕವಾಗಿ ಕೂಳಿಗೆ ನುಗ್ಗುವ ಮಿಡಿನಾಗರವನ್ನು ತಂದು ಅವಳಿಗೆ ಗೊತ್ತಿಲ್ಲದೆಯೇ ಉಣಬಡಿಸುತ್ತಾರೆ. ಸತ್ಯವಂತೆಯಾದ ಹೊನ್ನಮ್ಮ ದುರಂತ ಸಾವನ್ನಪ್ಪುತ್ತಾಳೆ. ಕೆಟ್ಟ ಸ್ವಪ್ನದಿಂದ ಎಚ್ಚೆತ್ತ ಗಂಡ ಓಡೋಡಿ ಬರುತ್ತಾನೆ. ಪತಿರಾಯ ಬರುವಷ್ಟರಲ್ಲಿ ಮೊದಲ ಕಂದಮ್ಮನಿಗೂ ಅಂತ್ಯ ಕಾಣಿಸಿರುತ್ತಾರೆ. ಈ ಸಂದರ್ಭದಲ್ಲಿ ಬಳಸುವ ಹಾಡುಗಾರ್ತಿಯ ವರ್ಣನಾವೈಖರಿ ಕರುಳು ಮಿಡಿಯುವಂತಹದ್ದು. ತಿನ್ನಲು ಕಳ್ಳೆ ಬೆಲ್ಲವನ್ನು ಕಂದನಿಗೆ ನೀಡಿ "ನೆತ್ತಿಗೆ ನೆತ್ತಿ ಗೂಟ, ಎದೆಗೆ ಎದೆ ಗೂಟ" ಬಡಿದರು ಎಂದಾಗ ಎಂತಹ ತಾಯಿಗೂ ದಿಗಿಲಾಗಿ ಮೂರ್ಛೆ ಬರುತ್ತದೆ.

ಮಗ ಬಂದ ಸಂದರ್ಭದಲ್ಲಿ ತಾಯಿತಂಗಿಯರು ತೋರುವ ನಟನೆಯ ಮಾತು "ಸೊರಗಿಹೋಗಿದ್ದೀ ಮಗನೆ" "ಬಡವಾಗಿದ್ದೀಯಲಾ ಅಣ್ಣಯ್ಯಾ"ಎಂಬ ನಯವಂಚಕತನದ ಪ್ರತಿರೂಪದ ಹೆಣ್ಣುಗಳನ್ನು ಕಂಡಾಗ ಯಾರಿಗೂ ರೋಷ ಉಕ್ಕಿ ಬರುವಂತಾಗುತ್ತದೆ. ಈ ಸನ್ನಿವೇಶದಲ್ಲಿ ಕತೆಗಾರ್ತಿಯ ಕಲಾನೈಪುಣ್ಯತೆ ಮೆಚ್ಚುವಂತಹದು. ಮಡಿವಾಳ, ಬಳೆಗಾರ, ಅಕ್ಕಸಾಲಿಗರ ಬಳಿ ಹೋಗಿದ್ದಾಳೆ ಎನ್ನುವಲ್ಲಿ ಸುಳ್ಳಿನ ಸರಮಾಲೆಯನ್ನೇ ಸೃಷ್ಟಿಸುವ ತಾಯಿತಂಗಿಯರ ಮಾತನ್ನು ನಂಬಿ ಅವರಲ್ಲಿಗೆ ಹೋಗಿ ವಿಚಾರಿಸಿದಾಗ ಆ ಜನಗಳು ಆಕೆ ಎಂದೂ ಒಬ್ಬಳೇ ಬರುವವಳಲ್ಲ ಎನ್ನುತ್ತಾರೆ. ಇದರಿಂದ ಆಕೆಯ ಸೌಜನ್ಯ ಗುಣವನ್ನು ಊರು ಅರಿತಿರುತ್ತದೆ ಎಂಬುದು ನಮ್ಮ ಗಮನಕ್ಕೆ ಬರುತ್ತದೆ. ಅನಂತರದಲ್ಲಿ ಅವರ ಒತ್ತಾಯಕ್ಕೆ ಮಣಿದು ಕಾಲಿಗೆ ನೀರು ಹಾಕಲು ಮೆಟ್ಟಿನ ಕಲ್ಲು ಬಳಿ ಬಗ್ಗಿದಾಗ ಆ ನೀರು ಕುಡಿದ ಮಗು ಗುಟುಕು ಜೀವ ಪಡೆದು ಅಪ್ಪ ಎನ್ನುವ ಕರೆ ಕ್ಷೀಣ ಧ್ವನಿಯಲ್ಲಿ ಅವನನ್ನು ಮುಟ್ಟುತ್ತದೆ. ಅನುಮಾನ ಬಂದ ತಂದೆ ಕಲ್ಲು ಚಪ್ಪಡಿ ಸರಿಸಿ ನೋಡಿದ ತಕ್ಷಣವೇ ಅವನ ಎದೆ ಹಾರುತ್ತದೆ. ಕಂದ ಮುದುಡಿ ಬಿದ್ದಿರುತ್ತಾನೆ ರಕ್ತದ ಮಡುವಿನಲ್ಲಿ. ಸಂಕಟದಿಂದ ಬಾಚಿ ತಬ್ಬಿ ಅವನಿಗೆ ಶುಶ್ರೂಷೆ ಮಾಡಿ ಪಡುವ ಬವಣೆ ಹೇಳತೀರದು. ತದನಂತರವೇ ಮಗನಿಂದ ವಿಚಾರ ತಿಳಿದು ಹೆಂಡತಿಯನ್ನು ಸತ್ಯದಿಂದ ಬದುಕಿಸಿಕೊಂಡ. ದುಃಖವೆಲ್ಲ ಕ್ರೌರ್ಯದ ಕಡೆಗೆ ತಿರುಗಿ ತಾಯಿ ಮತ್ತು ತಂಗಿಯರನ್ನು ಸರ್ವ ಜನರ ಮುಂದೆ ಅವರ ತಪ್ಪುಗಳನ್ನು ಪ್ರತಿಪಾದಿಸಿ ಅವರನ್ನು ಸಿಗಿದು ಬಾಗಿಲಿಗೆ ತೋರಣ ಮಾಡುತ್ತಾನೆ. ಜನರ ಮನ್ನಣೆಯಿಂದ ಇವರ ಕುಟುಂಬ ಸುಖವಾಗಿ ಬಾಳುತ್ತದೆ.

'ಕೆಂಚಮ್ಮ' ಕಥನಗೀತೆಯಲ್ಲಿ ಬಸುರಿಯ ಬಯಕೆಯ ಬಗೆಗೆ ಪೌಷ್ಟಿಕಾಂಶವುಳ್ಳ ಸೀಬೆ ಇತ್ಯಾದಿ ಫಲ ತರಕಾರಿಗಳ ವರ್ಣನೆಯಿಂದಲೇ ಪ್ರಾರಂಭವಾಗುವ ಈ ಕತೆಯಲ್ಲಿ ಬಸುರಿಯ ಆಹಾರದ ಬಗೆಗೆ ಸಾಕಷ್ಟು ಮಾಹಿತಿಯೂ ದೊರೆಯುತ್ತದೆ. ಅನಂತರ ಪ್ರಸವ ವೇದನೆಯನ್ನು ಅನುಭವಿಸುವ ಹೊತ್ತಿನಲ್ಲಿ

ಹೊತ್ತು ಹೊತ್ತಿಗೂ ಕತ್ತೀಲಿ ಕಡಿದಂಗೆ
ತಾಳಲಾರೆ ಮಾವಯ್ಯ ತಡಿಲಾರೆ । ಮಾವಯ್ಯ
ಮುಳ್ಳೂರ ಸೂಲಗಿತ್ತಿ ಕರಸಯ್ಯ
ಏರಿಏರಿದ ಬ್ಯಾನೆ ಈಟೀಲಿ ಇರಿದಂಗೆ
ನಿಂತಲ್ಲಿ ನಿಲಲಾರೆ ಕುಂತಲ್ಲಿ ಕೂರ್ಲಾರೆ । ಮಾವಯ್ಯ
ಹೊನ್ನೂರ ಸೂಲಗಿತ್ತಿ ಕರೆಸಯ್ಯ ॥

ಇದಕ್ಕಿಂತಲೂ ಪ್ರಸವ ವೇದನೆಯನ್ನು ನೀಡುವಲ್ಲಿ ಸಮರ್ಥವಾದ ಹೋಲಿಕೆ ಇನ್ನಾವುದೇ ಸಾಹಿತ್ಯದಲ್ಲಿ ಗೋಚರಿಸದು. ಅದಕ್ಕಾಗಿ ಸೂಲಗಿತ್ತಿಯರ ಭೇಟಿಯಲ್ಲಿ ಕ್ರಮತೆ, ಮಾವನ ಆತಂಕ, ಸುಖಪ್ರಸವವಾದರೆ ಸೂಲಗಿತ್ತಿಯರಿಗೆ ಕೊಡುವ ಸಂಭಾವನೆ ರೂಪದ ಕಾಣಿಕೆಗಳ ಪಟ್ಟಿ ಅದ್ಭುತವಾದ ವರ್ಣನೆಯಿಂದ ಕೂಡಿದೆ. ಬಸುರಿ ಬಯಕೆಯ ಐಭೋಗದ ಕುಕ್ಕೆ ತಿಂಡಿ ತಿನಿಸುಗಳ ಅಂದ ಚೆಂದ, ಶಾಸ್ತ್ರ ವಿಧಿ ವಿಧಾನದ ತಾಳ್ಮೆಯ ತಳಹದಿಯೇ ಇಲ್ಲಿದೆ. ದುರಂತವೆಂದರೆ ಮಾವ ಎಂದೋ ಕೊಟ್ಟ ಮಾತಿಗೆ ದೇವಗನ್ನೆಯರ ನುಡಿಗೆ ತನ್ನ ಒಂದು ತಿಂಗಳ ಕುಡಿಯ ಜೊತೆ ಕೆರೆಗೆ ಹಾರವಾಗುವುದು. ಹಿರಿ ಸೊಸೆ ತನ್ನ ಋಣವನ್ನು ಈ ರೀತಿಯಾಗಿ ತೀರಿಸಿ ಮುಕ್ತಿ ಪಡೆಯುತ್ತಾಳೆ.

'ಕೇದಿಗೆ' ಇದೊಂದು ಸ್ವಾರಸ್ಯಕರ ಪ್ರಣಯ ಕತೆ. ಬೆಂಕಿ ತರಲು ನೆರೆಮನೆಗೆ ಹೋದ ಕೇದಿಗೆ ಮನೆಯೊಡತಿ ಬೆರಣಿ ತಟ್ಟುತ್ತಿದ್ದುದರಿಂದ ನನ್ನ ಕೈ ಸಗಣಿಯಾಗಿದೆ' ನೀನೇ ಹೋಗಿ ತೆಗೆದುಕೋ ಎನ್ನುತ್ತಾಳೆ. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಇದು ಸಹಜವಾದ ಕ್ರಿಯೆ. ಕೇದಿಗೆ ಒಳಗೆ ಹೋದಾಗ ಸದೃಢಕಾಯ ರೂಪಸ್ಥ ಒಬ್ಬಾತ ಮಲಗಿರುವುದನ್ನು ನೋಡಿ ಅವನ ಮೇಲೆ ಮೋಹಗೊಂಡು ಪ್ರಣಯದಾಟಕ್ಕೆ ತಾನೇ ಸ್ವಾಗತಿಸಿ ತನ್ನ ಮನೆಗೆ ಕರೆಯುತ್ತಾಳೆ. ಆತ ಕೇದಿಗೆ ಅತ್ತೆ ಗಂಡ ಮೈದುನರ ಬಗೆಗೆ ಅಂಜಿಕೆ ವ್ಯಕ್ತಪಡಿಸಿದಾಗ ಅದ್ಯಾವುದೂ ನಿನಗೆ ಬೇಡ ಬಾ ಎನ್ನುತ್ತಾಳೆ. ಅವನಿಗೋಸ್ಕರವೇ ಸೊಗಸಾಗಿ ಅಡಿಗೆ ಮಾಡುತ್ತಾಳೆ. ಊಟಕ್ಕೆ ಬಡಿಸುವ ಸಂದರ್ಭದಲ್ಲಿ ಕೇದಿಗೆಯ ಅತ್ತೆ ಮಾವ ಮೈದುನ ನಾದಿನಿಯರು ಎಲ್ಲರೂ ಬಂದು ಒಬ್ಬೊಬ್ಬರಾಗಿ ಕದ ತಟ್ಟುತ್ತಾರೆ. ಅವಳು ಅವರೆಲ್ಲರಿಗೂ ಒಂದೊಂದು ಸಬೂಬು ಹೇಳುತ್ತಾಳೆ. ಕಡೆಗೆ ಆಕೆಯ ಗಂಡನೆ ಬಾಗಿಲು ಒದ್ದು ಮುರಿಯುತ್ತಾನೆ. ಒಳಗೆ ಹೋಗಿ ನೋಡಿ ಕಣ್ಣಿನಲ್ಲಿ ಕೆಂಡ ತುಂಬಿಕೊಳ್ಳುತ್ತಾನೆ. ತತ್‌ಕ್ಷಣವೇ ಕೋಪದಿಂದ ಆಕೆಯನ್ನು ತುಂಡರಿಸಿ

ಒಂದು ಕೆರೆಗೆ ಎಸೆಯುತ್ತಾನೆ. ಆತನನ್ನು ತುಂಡರಿಸಿ ಬಾವಿಗೆ ಹಾಕುತ್ತಾನೆ. ಹೀಗೆ ಈಕೆಯ ಕತೆ ದುರಂತದಲ್ಲಿ ಪರ್ಯವಸಾನವಾಗುತ್ತದೆ.

ಪ್ರಬಲವಾದ ಕಾರಣವೇ ಕಾಣದ 'ಹೊನ್ನಾಲಿ' ಕಥನ ಗೀತೆಯಲ್ಲಿ ತಡವಾಗಿ ಎದ್ದ ಸಣ್ಣ ತಪ್ಪಿಗಾಗಿ ಪ್ರಾಣಾರ್ಪಣೆ ಮಾಡಿಕೊಳ್ಳುವ ಮುಗ್ಧ ಹೆಣ್ಣಾಗಿ ಹೊನ್ನಾಲಿ ಕಂಡು ಬರುತ್ತಾಳೆ. ಈ ದುರಂತದ ಹಿನ್ನೆಲೆ ಸಾಂಸಾರಿಕ ಹೊಂದಾಣಿಕೆಯ ಕೊರತೆ ಮಾತ್ರ. ಮನೆಗೆಲಸವನ್ನು ಅಚ್ಚುಕಟ್ಟಾಗಿ ಮಾಡಿಯೂ ಹೊಸ ಸೊಸೆಯಾದ ಈಕೆ ಕೆಲವು ಗೊತ್ತಿಲ್ಲದ ಕೆಲಸಗಳಿಗಾಗಿ ಅತ್ತೆ ನಾದಿನಿ ಓರಗಿತ್ತಿಯರನ್ನು ಸಹಕರಿಸಲು ಕೇಳಿ ಕೊಂಡಾಗ ಇವರ್ಯಾರೂ ಸಹಕರಿಸದಿರುವುದು ಚಿಂತಾಜನಕ. ಅನಂತರ ಗದ್ದೆಗೆ ಬುತ್ತಿ ಹೊತ್ತುಕೊಂಡು ಹೋದಾಗಲೂ ಅಲ್ಲಿ ಮಾವ ಮೈದುನ ಗಂಡ ಎಲ್ಲರೂ ಬಹುಶಃ ತಡ ವಾಗಿ ಬಂದುದಕ್ಕಾಗಿಯೇ ಊಟ ಬೇಡ ಎನ್ನುತ್ತಾರೆ. ಆದರೆ ಸ್ಪಷ್ಟವಾದ ಕಾರಣ ಗೋಚರಿಸದೆ ಹೊತ್ತು ಮೀರಿ ಅಡಿಗೆ ತಂದ ಕಾರಣವೇ ಇರಬೇಕು. ಮನೆಯೊಳಗಿನ ಸ್ಥಿತಿಹಾಗೆ, ಗದ್ದೆಯೊಳಗಿನ ಪರಿಸ್ಥಿತಿ ಹೀಗೆ. ಕಟ್ಟಿಕೊಂಡ ಗಂಡನಾದರೂ ಸಹಕರಿಸಲಿಲ್ಲ ವಲ್ಲ ಎಂದು ಕಡು ನೊಂದು ಮನೆಗೆ ಬರುತ್ತಾಳೆ. ಬಂದು ಅಟ್ಟಕ್ಕೆ ಏಣಿಯನ್ನು ಹಾಕಿ ಕೊಂಡು ನೂಲಿನ ಹಗ್ಗದಿಂದ ಈ ಸಾಧ್ವಿ ನೇಣು ಹಾಕಿಕೊಳ್ಳುತ್ತಾಳೆ. ಮನೆಗೆ ಬಂದ ಗಂಡ ಇವಳ ಜೊತೆ ಸಹಗಮನವಾಗಲು ಅಣಿಯಾಗುತ್ತಾನೆ. ಈ ಸಂದರ್ಭದಲ್ಲಿ ತಾಯಿ ಹೇಳುವ "ಸೊಸೆ ಸತ್ತರೆ ಸೋಬಾನ ಮಗ ಸತ್ತರೆ ಮನೆಹಾಳು" ಎನ್ನುವ ನುಡಿಯನ್ನು ಕಡೆಗಣಿಸಿ ಆತ ಅವಳ ಜೊತೆ ಚಿತೆಯಾಗುತ್ತಾನೆ.

'ಆಳು ಕೂಗಿನ ಹಕ್ಕಿ' ಅಕ್ಕನ ಮಗಳನ್ನೇ ಹಟಹಿಡಿದು ಮದುವೆ ಮಾಡಿಕೊಂಡ ಏಳು ಜನ ಅಣ್ಣ ತಮ್ಮಂದಿರಲ್ಲಿ ಕಿರಿಯವನು. ಸುಂದರಿಯಾದ ಇವನ ಹೆಂಡತಿಯ ಮೇಲೆ ಅಣ್ಣಂದಿರಿಗೆಲ್ಲ ಕಾಮುಕ ಕಣ್ಣು. ಅವನ ಮದುವೆಯಾದ ಮರುದಿನವೆ ಆತನನ್ನು ದುರಾಲೋಚನೆಯಿಂದ ಕಾಡಿಗೆ ಬೇಟೆಗೆ ಕರೆಯುತ್ತಾರೆ. ತಾಯಿ ಎಷ್ಟು ಹೇಳಿದರೂ ಕೇಳದೆ ಈತನನ್ನು ಕರೆದುಕೊಂಡು ಹೋಗುತ್ತಾರೆ. ಅಣ್ಣಂದಿರ ಮನಸನ್ನು ಅರಿತ ಅವನು ತಾಯಿಗೆ ಹೇಳುತ್ತಾನೆ—'ಇಂದಿಗೆ ನಾನು ಎರವಾದೆ ನನ್ನ ಹೆಂಡ್ತಿ ಕರೆಸವ್ವ, ಪಾದಪೂಜೆ ಮಾಡ್ಸವ್ವ' ಎಂದು. ನನ್ನ ಮರೆತು ಬಿಡು, ಶೋಕ ಮಾಡಬೇಡ ಎಂದು ಹೇಳಿ ಹೊರಟುಹೋಗುತ್ತಾನೆ. ಕಾಡಿಗೆ ಹೊರಟ ತಮ್ಮನನ್ನು ದಂಡಕಾರಣ್ಯದಲ್ಲಿ ಹುಲಿ ಇರುವ ಜಾಗಕ್ಕೆ ಬಿಟ್ಟು ಅಣ್ಣಂದಿರೆಲ್ಲಾ ಮರೆಯಾಗಿಬಿಡುತ್ತಾರೆ. ಈತ ಹುಲಿ ಯನ್ನು ಕೇಳಿಕೊಂಡು ಅಣ್ಣಂದಿರ ಮೋಸವನ್ನು ತಿಳಿಸಿ ಬದುಕಿಕೊಳ್ಳುತ್ತಾನೆ. ಈಗಾದರೂ ಈತ ಸಾಯಲಿಲ್ಲವೆಂದು ಆತನ ಸಹೋದರರು ಒಂದು ದೊಡ್ಡ ಮರಕ್ಕೆ ಹತ್ತಿಸಿ ಅದರ ಕೊಂಬೆರೆಂಬೆಗಳೆಲ್ಲವನ್ನೂ ಕತ್ತರಿಸಿ ಹಾಕುತ್ತಾರೆ. 'ಇಂದಿಗೆ ನಿನ್ಹೆಂಡ್ತಿ ಮುಂಡೆ' ಎಂದು ಹೇಳಿ ಅವರೆಲ್ಲ ಮನೆಗೆ ವಾಪಸ್ಸಾಗುತ್ತಾರೆ. ಅನಂತರ ಅವನು ಆಳುಕೂಗಿನ ಹಕ್ಕಿಯಾಗಿ ಏಳು ಜನ ಅಣ್ಣಂದಿರನ್ನು ಬಲಿ ತೆಗೆದುಕೊಳ್ಳುತ್ತಾನೆ.

'ನೀಲಮ್ಮ'ನ ಕತೆಯಲ್ಲಿ ಒಬ್ಬ ಶ್ರೀಮಂತ ಗೌಡನಿಗೆ ಏಳುಜನ ಗಂಡುಮಕ್ಕಳು. ದೊಡ್ಡ ಬಾಳಾಟವನ್ನು ನೋಡಿದ ಜನರಾದರೂ ಆಡಿಕೊಂಡರು–ಎಷ್ಟು ಐಶ್ವರ್ಯ ವಿದ್ದರೇನು ಬಂತು ಒಂದು ಕೆರೆ ಕಟ್ಟಿ ಪುಣ್ಯಕಟ್ಟಿಕೊಳ್ಳದಿದ್ದ ಮೇಲೆ ಎಂಬುದಾಗಿ. ಈ ನುಡಿಗಾಗಿ ಗೌಡ ಒಂದು ಕೆರೆಯನ್ನೇನೊ ಲಕ್ಷ ರೂಪಾಯಿ ಖರ್ಚುಮಾಡಿ ಕಟ್ಟಿಸಿದ. ಆದರೆ ಜನ ಗೋವು, ಪಕ್ಷಿಗಳಿಗೆ ಒಂದು ಹನಿ ನೀರು ದೊರಕಲಿಲ್ಲ. ಎಂಥ ನಿಜಗಾರ ಕಟ್ಟಿಸಿದ್ನಪ್ಪ ಎನ್ನುವ ಮಾತಾಯಿತು. ಈ ಯೋಚನೆಯಲ್ಲಿ ಮಲಗಿದ್ದ ನೀಲೇಗೌಡನಿಗೆ ಸ್ವಪ್ನದಲ್ಲಿ ನಿನ್ನ ಹಿರೇ ಸೊಸೆಯನ್ನು ಬಲಿಕೊಟ್ಟರೆ ನೀರು ಬರುತ್ತದೆ ಎಂದಾಗಾಯಿತು. ಇದೇ ಸಮಯದಲ್ಲಿ ನೀಲಮ್ಮನ ಗಂಡ ದಂಡಿಗೋಗುತ್ತಾನೆ. 'ನನ್ಹೆಂಡ್ತಿ ಬಿಮ್ಮನ್ನೆ ಅಪ್ಪ, ನನ್ನ ತಮ್ಮದೀರು ಮೂರ್ಖರು ನೀನು ಜೋಪಾನವಾಗಿ ನೋಡಿಕೋ' ಎಂದು ಹೇಳಿ ಹೊರಟ.

ಅಂದಿನಿಂದಲೂ ನೀಲೇಗೌಡನಿಗೆ ನಿದ್ರೆ ಬರದು ಊಟ ಸೇರದು. ಹಿರಿ ಸೊಸೆ ಚಿನ್ನದಂಥವಳು. ಈ ಮಾತು ಅವಳಿಗೆ ಹೇಳುವುದು ಹೇಗೆ ? ಎಂದುಕೊಳ್ಳುವಾಗಲೇ ಮಾವಯ್ಯನನ್ನು ಸೊಸೆ ಊಟಕ್ಕೆ ಕರೆದು ಅವರ ಚಿಂತೆಗೆ ಕಾರಣವೇನೆಂದು ಕೇಳು ತ್ತಾಳೆ. ಮಾವ ಸುದ್ದಿ ತಿಳಿಸಿದ ತಕ್ಷಣವೇ ಒಪ್ಪಿ ತನಗೆ ವೀಳ್ಯ ಕೊಡಲು ಕೇಳುತ್ತಾಳೆ. ಹಾಗೆಯೇ ತವರಿಗೆ ಒಮ್ಮೆ ಹೋಗಿ ಬಂದು ಬಿಡುತ್ತೇನೆ ಎಂದು ಅಪ್ಪಣೆ ಪಡೆದು ತೌರಿ ಗೋಗುತ್ತಾಳೆ. ಎಂದೂ ಸುಮ್ಮನೆ ಬಾರದಿದ್ದ ಮಗಳು ತಂಗಿಯನ್ನ ಕಂಡು ತಾಯಿ ತಂದೆ ಹಾಗೂ ಅಣ್ಣಂದಿರು ಬಂದ ಕಾರಣವನ್ನು ಕೇಳುತ್ತಾರೆ. ಆಕೆ ತಾಳ್ಮೆಯಿಂದ ಸುಮ್ಮನೆ ಯೋಗಕ್ಷೇಮ ನೋಡಿಕೊಂಡು ಹೋಗಲು ಬಂದೆನೆಂದು ತಿಳಿಸುತ್ತಾಳೆ. ಈ ಸಂದರ್ಭದಲ್ಲಿ ತನ್ನ ಬದುಕಿನ ಅಂತ್ಯ ತನಗೆ ತಿಳಿದಿದ್ದರೂ ಬಹು ಗಂಭೀರವಾಗಿಯೇ ಅದನ್ನು ಕೊನೆಗಾಣಿಸಲು ಸಿದ್ಧವಿರುವ ಈಕೆಯ ಸಂಯಮವನ್ನು ಯಾರೂ ಸ್ಮರಿಸ ಬೇಕು. ತ್ಯಾಗಮಯಿ ನೀಲಮ್ಮ ಮಾವನ ಮನೆಗೆ ತೌರಿನ ಆತಿಥ್ಯವನ್ನು ಸ್ವೀಕರಿಸಿ ಹಿಂದಿರುಗುತ್ತಾಳೆ. ಮಾವನವರಿಗೆ ಪೂಜಾ ಸಾಮಗ್ರಿಗಳನ್ನು ತರಲು ಹೇಳಿ ಹೊಸ ಸೀರೆಯುಟ್ಟು ಕೆರೆಗೆ ಹಾರವಾಗಲು ಅಣಿಯಾಗಿ ವಾಲಗ ಸಮೇತ ಹೊರಡುತ್ತಾಳೆ. ಈ ಸನ್ನಿವೇಶದಲ್ಲಿ ಕತೆ ಹೆಣೆಯುವ ಕತೆಗಾರ್ತಿಯ ಕಲಾತ್ಮಕತೆಯನ್ನು ಮೆಚ್ಚಬೇಕು. ಕೆರೆಯ ನೀರು ಪೂಜೆ ಸಲ್ಲಿಸಿದ ನಂತರ ಹರಿದು ತುಂಬುವ ಪರಿಯನ್ನು ಪಾದದಿಂದ ತಲೆಯವರೆಗೂ ವರ್ಣಿಸುತ್ತಾಳೆ. ಈ ಹೊತ್ತಿನಲ್ಲಿ ಪಾರ್ವತಿಪರಮೇಶ್ವರರು ಈಕೆಯನ್ನು ಅಂಗೈಯಲ್ಲಿ ಹಿಡಿದು ನೆಲಮಾಳಿಗೆ ಮಾಡಿ ಅನುಕೂಲವಾಗಿ ಬದುಕುವ ವ್ಯವಸ್ಥೆಯನ್ನು ಮಾಡುವ ಪರಿಯನ್ನು ನೋಡಿದರೆ ಹಳ್ಳಿಗರಿಗೆ ನಾವು ಒಂದು ಪುಣ್ಯದ ಕೆಲಸವನ್ನು ಮಾಡಿದರೆ ಅದಕ್ಕೆ ಭಗವಂತನ ದಯೆ ಇದ್ದೇ ಇರುತ್ತದೆ ಎಂಬ ನಂಬಿಕೆ ಇಮ್ಮಡಿ ಯಾಗುತ್ತದೆ. ತಿಳುವಳಿಕೆ ಬಂದ ಮೇಲೆ ಮಗು ತನ್ನ ತಂದೆ ಎಲ್ಲಿ ಎಂದು ಪ್ರಶ್ನಿಸುತ್ತಾನೆ. ಅದೇ ಸಮಯಕ್ಕೆ ತನ್ನ ಮಡದಿಯನ್ನು ನೆನೆದುಕೊಂಡು ಪತಿರಾಯ

ಆರು ದಿನದ ಹಾದಿಯನ್ನು ಮೂರು ದಿನದಲ್ಲಿ ನಡೆದು ಕಾತರದಿಂದ ಓಡೋಡಿ ಬರುತ್ತಾನೆ. ಕೆರೆಯ ಮಾರ್ಗವಾಗಿ ಬಂದ ಅವನಿಗೆ ಕೆರೆ ತುಂಬಿರುವುದನ್ನು ನೋಡಿ ಸಂತೋಷವಾಗುತ್ತದೆ. ಅದರ ಮಧ್ಯೆ ಸುಂದರವಾಗಿ ನಗುತ್ತಿರುವ ತಾವರೆಯನ್ನು ನೋಡಿ ಮುಟ್ಟಲು ಹೋಗುತ್ತಾನೆ. 'ಮುಟ್ಟಬೇಡಪ್ಪಯ್ಯ ತಾತನ ಕರೆಸಯ್ಯ ನಾನೆಲ್ಲಾನು ಹೇಳುತಿನಿ' ಎನ್ನುವ ಆ ಹೂವು ಬಂಧು ಬಳಗದವರನ್ನೆಲ್ಲಾ ಕರೆಸು ಎನ್ನುವ ಕೋರಿಕೆ ಮೇರೆಗೆ ತಂದೆ ಎಲ್ಲರನ್ನೂ ಕರೆಸುತ್ತಾನೆ. ಬಳಗದವರೆಲ್ಲಾ ಕೆರೆ ಏರಿ ಸುತ್ತ ನಿಂತಾಗ ತನ್ನ ತಂದೆಯನ್ನು ತನ್ನಪ್ಪನಿರುವಲ್ಲಿಗೆ ಕರೆದೊಯ್ಯಲು ಅಪ್ಪಣೆ ಕೇಳುತ್ತಾನೆ. ಸರ್ವ ವಿಚಾರವನ್ನೂ ತಿಳಿಸುತ್ತಾನೆ. ಅನಂತರ ತಾಯಿ ಬಳಿಗೆ ಹೋಗಿ ತಂದೆ ಬಂದಿದ್ದಾರೆ ಎಂದು ತಾಯಿಗೆ ಹೇಳಿದಾಗ ಆಕೆ ತನ್ನ ಪತಿ ದಂಡಿಗೋದವರು ಹೇಗೆ ಬರುತ್ತಾರೆ ಸುಮ್ಮನೆ ಹೇಳುತ್ತಾನೆ ಎನ್ನುತ್ತಿರುವಂತೆಯೆ, ಪತಿಯು ಎದುರು ಬಂದು ನಿಲ್ಲುತ್ತಾನೆ. ಆಗ ಸಂತಸ ಆಶ್ಚರ್ಯದಿಂದ ಪತಿಗೆ ನಮಸ್ಕಾರ ಮಾಡಿ ಒಳಗೆ ಕರೆದುಕೊಂಡು ಹೋಗುತ್ತಾಳೆ. ಮೂವರೂ ಸುಖವಾಗಿ ಬಾಳುತ್ತಾರೆ.

'ಸತ್ಯವಂತೆ ಹಡೆದವ್ವ'

ಯಾರೂ ಇದ್ದಾರ ನನ್ನ ತಾಯಮ್ನ ಹೋಲ್ಯಾರ
ಸಾವಿರ ಕೊಳ್ಳಿ ಒಲೆಯಾಗ । ಉರಿದಾರ
ಜ್ಯೋತಿ ನಿನ್ನ್ಯಾರ ಹೋಲ್ಯಾರ

ತಾಯಿ ಅನ್ನುವ ವಸ್ತು ಅಮೂಲ್ಯವಾದದ್ದು. ಈ ತಾಯಿ ದೇವರನ್ನ ಕಾಡಿಬೇಡಿ ಒಬ್ಬ ಮಗನನ್ನು ಪಡೆದು ತನ್ನ ಬಾಳಿನ ಸರ್ವಸ್ವವೆಂದು ಸಾಕಿ ಮದುವೆ ಮಾಡುತ್ತಾಳೆ. ಮನೆಗೆ ಬಂದವಳು ಎಂಥವಳೆಂದರೆ ಅತ್ತೆಗೆ ಸೀಕು ಹಳಸಲು ಉಣಲಿಕ್ಕೆ ಕಷ್ಟದ ಕೂಪಕ್ಕೆ ನೂಕುತ್ತಾಳೆ. ಕಟುಕಿಯಾದ ಸೊಸೆಯನ್ನು ಏನು ಮಾಡಲೂ ಆಗುತ್ತಿರಲಿಲ್ಲ. ಒಮ್ಮೆ ಇಂತಹ ಊಟ ತಿನ್ನುವುದು ಹೇಗೆಂದು ಕೇಳಿದ್ದಕ್ಕಾಗಿ ತನ್ನ ಗಂಡನಿಗೆ ಇಲ್ಲಸಲ್ಲದ್ದನ್ನು ಹೇಳಿ ಅವಳ ಕೈಕಾಲು ಕಟ್ಟಲು ತಿಳಿಸುತ್ತಾಳೆ. ಎಷ್ಟೇ ಆದರೂ ಆಕೆ ತಾಯಿ ಅಲ್ಲವೇ ? ಬೇಡವೆನ್ನುತ್ತಾನೆ. ನಾನು ನಿನ್ನನ್ನೇ ಬಿಟ್ಟು ಹೋಗುತ್ತೇನೆ ಎಂದು ಹೆದರಿಸಿದಾಗ ವಿಧಿ ಇಲ್ಲದೆ ಕೈಕಾಲು ಕಟ್ಟಿ ತಾಯಿಯನ್ನು ಹೊಳಗೆ ಎಸೆಯುತ್ತಾನೆ. ಸತ್ಯವಂತೆ ತಾಯಿಯನ್ನು ಪಾರ್ವತಿ ಪರಮೇಶ್ವರರು ಆತುಗೊಂಡು ಅವಳ ಕಷ್ಟವನ್ನು ವಿಚಾರಿಸುತ್ತಾರೆ. ಆಗ ಸೊಸೆಯಿಂದ ತನಗೆ ಉಳಿಗಾಲವಿಲ್ಲವೆಂದು ತನ್ನ ದುಃಖವನ್ನು ತೋಡಿಕೊಳ್ಳುತ್ತಾಳೆ. ಈ ಮಾತಿಗೆ ಮಡಿಕೆ ತುಂಬ ಹೊನ್ನು ತುಂಬಿ ಕಳಿಸುತ್ತಾರೆ. ಸೊಸೆಯ ಬಳಿ ಬಂದಾಗ ಸೊಸೆ ಆಶ್ಚರ್ಯಗೊಂಡು ಇಷ್ಟೊಂದು ಸಂಪತ್ತು ಎಲ್ಲಿ ದೊರೆಯಿತು ಎಂದು ಸಂತಸ ವ್ಯಕ್ತಪಡಿಸುತ್ತಾಳೆ. ಆಗ ಕಿಲಾಡಿ ಮುದುಕಿ ನನ್ನ ಎಸೆದಂಥ ಮಡುವಿನಲ್ಲಿ ವಜ್ರವೈಡೂರ್ಯವೇ ತುಂಬಿದೆ.

ನಾನಾದರೂ ಕೈಲಾಗದ ಮುದುಕಿ, ಹೊರಲಾರದೆ ಹೋದೆ ಇಷ್ಟಾದರೂ ತಂದೆ ಎನ್ನುತ್ತಾಳೆ. ಈ ಮಾತನ್ನು ಕೇಳಿದಂತಹ ಸೊಸೆ ತನ್ನ ದುರಾಸೆ ಬುದ್ಧಿಯಿಂದ ಮತ್ತೊಂದಷ್ಟು ನಾನು ತರುತ್ತೇನೆ ಎಂದು ಗಂಡಯ್ಯನಿಗೆ ಕೈಕಾಲು ಕಟ್ಟಿ ಮಡುವಿಗೆ ಎಸೆಯಲು ಕೇಳುತ್ತಾಳೆ. ಈ ಸನ್ನಿವೇಶದಲ್ಲಿ ಮನುಷ್ಯ ಹಣಕ್ಕಾಗಿ ಪ್ರಾಣ ಹೋದರೂ ಚಿಂತೆಯಿಲ್ಲ ಎನ್ನುವ ಸಿಟ್ಟಿನಲ್ಲಿ ಆಲೋಚನೆ ಮಾಡಿ ಮುಂದಾಗುವ ಅನಾಹುತವನ್ನು ಯೋಚಿಸುವುದಿಲ್ಲ. ಹೀಗೆ ದುರಾಸೆಯಿಂದ ಹೊರಟವಳು ಯಮನ ಪಟ್ಟಣವನ್ನು ಸೇರುತ್ತಾಳೆ. ಇಲ್ಲಿ ಮುದುಕಿ ಮಗನಿಗೆ ಮತ್ತೊಂದು ಮದುವೆಯನ್ನು ಮಾಡಿ ಮೊಮ್ಮಕ್ಕಳನ್ನು ಕಂಡು ಸುಖದ ಜೀವನವನ್ನು ನಡೆಸುತ್ತಾರೆ. ಸೊಸೆ ತನ್ನ ಕ್ರೂರ ಬುದ್ಧಿಯಿಂದ ತಾನೇ ಸುಟ್ಟು ಭಸ್ಮವಾಗುತ್ತಾಳೆ. ನಡೆನುಡಿಯಲ್ಲಿ ನಾವು ಹಿರಿಕಿರಿಯರಿಗೆ ಯಾವ ರೀತಿಯಲ್ಲಿ ನಡೆಯಬೇಕು ಎನ್ನುವ ಅರಿವನ್ನು ಈ ಕಥನಗೀತೆ ಚಿತ್ರಿಸುತ್ತದೆ.

ನಮ್ಮ ಜನಪದರು ದೇವಾನುದೇವತೆಗಳನ್ನು ಬದುಕಿನ ಒಂದು ಅಂಗವಾಗಿ ಸ್ವೀಕರಿಸುವ ಪ್ರವೃತ್ತಿಯುಳ್ಳವರು. ವಾಸ್ತವ ಬದುಕಿಗೆ ಅವರನ್ನು ಸಮೀಕರಿಸಿಕೊಂಡು ತಮ್ಮವರಾಗಿಸಿಕೊಳ್ಳುವ ಮುಗ್ಧತೆಯುಳ್ಳವರು. ಸಹಜ ಬದುಕಿನಲ್ಲಿ ಒಬ್ಬ ಪುರುಷನಿಗೆ ಅಕಸ್ಮಾತ್ ಎರಡಕ್ಕಿಂತ ಹೆಚ್ಚಿನ ಪತ್ನಿಯರಿರುವುದನ್ನು ಒಪ್ಪಿ ಸಹಿಸಿಕೊಂಡು ಬಾಳು ನೂಕುವ ಪ್ರವೃತ್ತಿಯುಳ್ಳ ಇವರು, ನಾರಾಯಣ ಶಿವರಿಗೆ ಹೆಚ್ಚಿನ ಪತ್ನಿಯರಿರುವುದನ್ನು ಸಂತಸದಿಂದ ಸ್ವೀಕರಿಸಿದವರು. ಅಂತಹ 'ಕಥನಕಾವ್ಯ'ವಾಗಿ ಮೂಡಿ ಬಂದಿರುವುದು 'ಕಂಡ್ಹೆಣ್ಣ ಬಡೋರಲ್ಲ ಗಿರಿವಾಸಕೆ ಬರೋರಲ್ಲ'. ಈ ಶೀರ್ಷಿಕೆಯನ್ನು ಕಾವ್ಯ ಭಾಗದಿಂದಲೇ ಆಯ್ದು ಕೊಟ್ಟಿರುತ್ತೇನೆ. ಈ ನುಡಿ ಪಟ್ಟೆದರಿಸಿಯದು. ಕಾವ್ಯದುದ್ದಕ್ಕೂ ಶೀರ್ಷಿಕೆಯ ಸತ್ಯಾಸತ್ಯತೆ ನಮಗೆ ಗೋಚರವಾಗುತ್ತದೆ.

ಈ ಕತೆಯು ಸಂದರ್ಭದಲ್ಲಿ ರಸಿಕ ಶಿರೋಮಣಿ ನಾರಾಯಣನ ಮಾಯಾಗುಣ ಕೇಳುಗರಿಗೆ ಘಟನಾದೃಷ್ಟಿಯಿಂದ ರಸದೌತಣವನ್ನುಣಿಸುತ್ತದೆ. ಮಡದಿಯರಿಬ್ಬರ ನಡುವೆ ತನ್ನ ಬಳಸಿದ ತೋಳುಗಳಿಗೆ ಮರದ ಕೊರಡೊಂದನ್ನು ಮಲಗಿಸಿ ತನ್ನ ನೆನೆದ ಸೂಳೆಯಲ್ಲಿಗೆ ಹೋಗುತ್ತಾನೆ. ದೇವರುಗಳಿಗೆ ಪರಿಪರಿಯಾಗಿ ಹರಕೆ ಹೊರುವ ಸಂದರ್ಭಗಳು ಸ್ವಾರಸ್ಯವಾಗಿವೆ. ಇತ್ತ ಮಡದಿಯರು ಎಚ್ಚರವಾಗಿ ಗಾಬರಿಯಿಂದ ಕಾವಲು ಕಾಯುವ ಹನುಮನಿಗೆ ಹುಡುಕಿತರಲು ಹೇಳುತ್ತಾರೆ. ಹಾಗೆ ಕರೆತಂದವನಿಗೆ ಮೈಲಿಗೆ ಕಳೆದು ಕೊಡುತ್ತಾರೆ. ಕೂತು ತಿನ್ನುವುದು ಬೇಡ ನಾಲ್ಕು ಮನೆ ಭಿಕ್ಷೆ ಮಾಡಿ ತರುತ್ತೇನೆ ಎಂದು ಬಂದು ಸೋಲಿಗರ ಬೊಮ್ಮಗೌಡನಮನೆಗೆ ತೆರಳಿ ಭಿಕ್ಷೆಬೇಡುವಾಗ ಸುಂದರವಾದ ಕುಸುಮಾಲಿಯನ್ನು ನೋಡಿ ಕಣ್ಣಾಡಿಸುತ್ತಾನೆ. ತನ್ನ ಮಾಯಾಶಕ್ತಿಯಿಂದ ಅವರಿಗೆ ಚಾವಕಟ್ಟಿ ದಾರಿದ್ರ್ಯವನ್ನುಕೊಡುತ್ತಾನೆ.

ತಾನು ಅನುಕೂಲಸ್ಥ ಸುಂದರವಾದ ಹೆಣ್ಣು ಮಗಳು. ತಾನು ದಾಸಯ್ಯ ನಂಥವನಿಗೆ ಭಿಕ್ಷೆ ನೀಡುವುದು ಅಪಚಾರ ಎಂದು ಭಾವಿಸಿದ್ದಕ್ಕಾಗಿಯೇ ಈ ತೊಂದರೆ ಯನ್ನು ಎದುರಿಸಬೇಕಾಗುತ್ತದೆ. ಕಾಡಿನಲ್ಲಿ ಗೆಡ್ಡೆಗೆಣಸಿಗಾಗಿ ಹೋದ ಒಡಹುಟ್ಟಿದ ವರನ್ನು ಅಗಲಿ ಪಡಬಾರದ ಕಷ್ಟಪರಂಪರೆಯಲ್ಲಿ ತೇಲಿ ಮುಳುಗಬೇಕಾಗುತ್ತದೆ. ಅನಂತರದಲ್ಲಿ ತನ್ನ ಇಂಗಿತವನ್ನು ತಿಳಿಸಿ ಕುಸುಮಾಲಿಯನ್ನು ಶಾಸ್ತ್ರೋಕ್ತವಾಗಿ ದೇವ ಮಾನವರೆಲ್ಲರನ್ನು ಕರೆದು ವೈಭವದಿಂದ ವಿವಾಹವನ್ನು ನೆರವೇರಿಸಿಕೊಳ್ಳುತ್ತಾನೆ. ಒಂದೊಂದು ತಿರುವಿನಲ್ಲೂ ಸ್ವಾರಸ್ಯದ ಹೊನಲು ಹರಿಯುತ್ತದೆ. ಪ್ರೇಮಸಿಂಚನ ವನ್ನು ಚಿಮ್ಮಿಸುವ ಚಿತ್ರಣ ಬಹು ಸೊಗಸಾಗಿದೆ. ಮೂಢಾತ್ಮರೆನ್ನುವ ಅವರು ದೇವಲೋಕದ ಭವ್ಯತೆಯನ್ನು ವೈಭವೀಕರಿಸುವ, ಚಿತ್ತರಿಸುವ ವರ್ಣನಾ ವೈಖರಿಗೆ ಬೆಕ್ಕಸ ಬೆರಗಾಗುತ್ತದೆ ಮನ. ಚಿನ್ನ ಚಿಗುರು, ಊಟೋಪಚಾರದ ಐಭೋಗ, ಸಂಭ್ರಮ ಸಡಗರ ಯಾವ ಕಾವ್ಯಕ್ಕೂ ಕಡಿಮೆಯಿಲ್ಲದಂತೆ ಅನಾವರಣಗೊಳಿಸುವ ಅವರ ವಿನ್ಯಾಸಕ್ಕೆ ತಲೆದೂಗಬೇಕು. ನಮ್ಮ ಜನಪದರು ಇಂತಹ ಮನೋಹರ ಕಥಾ ಚೌಕಟ್ಟನ್ನು ಕೊಟ್ಟು ನಮ್ಮನ್ನು ಮೈಮರೆಸಿ ಮಗದೊಂದು ಕಿನ್ನರಲೋಕಕ್ಕೆ ಕರೆದೊಯ್ಯುವುದರಲ್ಲಿ ಸಿದ್ಧಹಸ್ತರು.

ಇಂತಹ ಕಥನಗೀತೆ, ಕಾವ್ಯಗಳನ್ನು ಅಧ್ಯಯನ ಮಾಡುವುದರಿಂದ ನಮ್ಮ ಶ್ರೇಷ್ಠ ಸಂಸ್ಕೃತಿಯ ಮೌಲ್ಯಗಳನ್ನು ತೌಲನಿಕವಾಗಿ ಒರೆಹಚ್ಚಿ ಉತ್ತಮ ಪರಂಪರೆಯ ದಾಖಲೆಯನ್ನೇ ಸೃಷ್ಟಿಸಿ ಬದುಕಿಗೆ ಸತ್ಯಾಸತ್ಯದ ಕೊಡುಗೆಯನ್ನು ನೀಡಬಹುದು.

ಜಯಲಕ್ಷ್ಮೀ ಸೀತಾಪುರ

# ಹೊನ್ನಮ್ಮ

ನಾದೀನಿ ನಾಗಮ್ಮ ಕೇಳ್ಯಾಕೆ ಅತ್ಗೀಯ
ಅತ್ತೀಗೆ ಅತ್ತಿಗೆ ಮುಖವ್ಯಾಕೆ ಸಪ್ಪಾಗೆ
ಅದೇನಂಥ ಹೇಳೀರಿ
ಮುತ್ನಾಗೆ ಕೇಳ್ಯಾಳೆ ನಾದೀನಿಯು
ಬಸ್ರಿಯ ಬಯಕೆಯ ಅತ್ತೀಗೆ
ಅತ್ತೀಗೆ ಹೊನ್ನಮ್ಮ ಈ ನುಡಿಗೆ
ಅತ್ತ್ಯಮ್ನ ಕೇಳ್ಯಾಳೆ
ಅತ್ತ್ಯಮ್ಮ ಅತ್ತ್ಯಮ್ಮ
ನಾ ತವರಿಗೆ ಹೋಗಬೇಕು
ಅತ್ತ್ಯಮ್ಮ ಅತ್ತ್ಯಮ್ಮ ನಾ
ಮೀನನ್ನ ತಿನಬೇಕು
ತವರಿಗೆ ಹೋಗಲು ಬೇಕು
ಸೊಸೆ ಮುದ್ದೆ ಹೊನ್ನಮ್ಮ
ಮೀನನ್ನ ತಿನ್ನಾಲು ತವರಿಗೆ ಹೋಗಲು ಬ್ಯಾಡ
ಕೋಳೀಯ ತಕ್ಕಳೆ ಹಾರೆಯ ಹೀಡಕ್ಕಳ್ಳಿ
ನಾವೆಲ್ಲ ಕೂಡಿ ಹಳ್ಳಕ್ಕೆ ಹೋಗಾಣ (ನ)
ಕೂಡಿಯ ತುಳಕಾನ ಮೀನನ್ನ ಹಿಡಿಯಾನ
ಅತ್ತ್ಯಮ್ಮನ ಮಾತಿಗೆ ಕೊಟ್ಟ್ಯಗೆ ನಡೆದಾಳು
ಅತ್ತೀಗೆ ಹೊನ್ನಮ್ಮ ಹಾರೆಯ ಕೋಳಿಯ ತಂದಾಳು
ನಾದಿನಿ ನಾಗಮ್ಮ ಅತ್ತೀಗೆ ಹೊನ್ನಮ್ಮ
ಅತ್ತ್ಯಮ್ಮ ಹೊರಟಾನೆ ಬಂದಾರು
ಹಳ್ಳಾಕ ಬಂದಾರು ಕಳ್ಳಿಯ ಕಟ್ಯಾರೆ
ಒಂಯು ಗುಂಡೀನ ಉಗ್ಯಾರು
ಎರಡು ಗುಂಡಿ ಉಗ್ಯಾರು

ಮೂರು ಗುಂಡಿ ಉಗ್ಯಾರು
ಮೂರು ಜನವೂ ಸೇರಿ
ಮೂರನೆ ಗುಂಡಿ ಉಗ್ಯಾಗ
ಏಳೆಡೆ ಮಿಡಿ ನಾಗರ
ಕೊಳಿಗೆ ಬಂದೀತು ಮೀನಿನ ಜೊತೆಯಾಗ
ಅತ್ತ್ಯಮ್ಮನು ಕಂಡ್ಯಾಳು ನಾದಿನಿಯು
ನೋಡ್ಯಾಳು ಅತ್ತೀಗೆ ಹೊನ್ನಮ್ಮಗ್ಗ ಅರಿನಿಲ್ಲ
ಅತ್ತ್ಯಮ್ಮ ನಾಗಮ್ಮ ತಟ್ಟನೆ ಕಡಿದಾರು
ಕೊಳಿಗೆ ತುಂಬ್ಯಾರು ಅತ್ತೀಗೆ ಹೊನ್ನಮ್ಮಗ್ಗ
ಹಾವಬತ್ತಿ ಇದಕಾಣಿ ಅಂತಾನೆ ಹೇಳ್ಯಾರು
ನಾದಿನಿ ನಾಗಮ್ಮ
ಏನೆಂದು ಹೇಳಾಳು
ಅತ್ತಿಗೆಮ್ಮ ಅತ್ತಿಗೆಮ್ಮ
ನಾವ್ ಅರಮನೆಗೆ ಹೋಗೋಣ
ನೀವು ಹಾರೇನ ತಕ್ಕೊಳ್ಳಿ
ನೀವು ಕೊಳಿನ ತಕ್ಕೊಳಿ
ನಾದಿನಿ ನಾಗಮ್ಮ ಮೀನನ್ನ
ಹಿಡಕಂಡ್ಳು ಸತ್ತನಾಗರ
ಕೊಳಿಯ ಒಳಗಿಟ್ಳು
ಮೂರು ಜನ ಒಟ್ಟಾಗೆ
ಅರಮನೆಗೆ ಬಂದಾರೆ
ಏನೆಂದು ಹೇಳ್ಯಾರೆ
ಅತ್ತಿಗೆಮ್ಮ ಅತ್ತಿಗೆಮ್ಮ
ನೀವು ಕಾರಾನೆ ಮಾಡೋಗಿ
ಅಷ್ಟರಲ್ಲಿ ನಾವು ಮೀನನ್ನ
ಸೋಸ್ತೀವಿ (ಉಜ್ಜುತೀವಿ) ಅಂದಾರು
ಹಂಗಂಥ ಮಾತನ್ನ ಹೇಳ್ಯಾಳೆ ನಾಗಮ್ಮ
ಅತ್ತೀಗೆ ಹೊನ್ನಮ್ಮಗ್ಗ
ನಾಗಮ್ಮ ನಾದುನಿ
ಹೊನ್ನಮ್ಮ ಅತ್ತ್ಯಮ್ಮ
ಹೊಂಟಾರೆ ಇಬ್ರುವೆ
ಅತ್ತಿಗೆ ಹೊನ್ನಮ್ಮ

ಬೆನ್ನಾದ್ರು ನೋವೆಂದ್ಲು
ಅತ್ಗೆಮ್ಮ ಅತ್ಗೆಮ್ಮ
ಸುಮ್ನಾನೆ ಮನಿಕಳ್ಳಿ
ಕಾರಾನೆ ಮಾಡುದ್ರಿ
ಬೆನ್ನಾನೆ ಬಾಳಾಗಿ ಬಾಗ್ಸಿದ್ರಿ
ನಾವಾದ್ರೆ ಅಡುಗೆನೆ ಮಾಡ್ತೀವಿ
ನಾದುನಿ ನಾಗಮ್ಮ ಮುದುವಾಗಿ ಅಂದಾಳು
ಮಂಚದ ಮ್ಯಾಲೆ ಮನಗ್ಸ್ಯಾಳು
ಕಂಬ್ಳಿಯ ಹೊದೆಸ್ಯಾಳು
ಅತ್ತಿಗೆ ಹೊನ್ನಮ್ಗೆ ನಾದುನಿಯು
ಆರೇಕ ಕನಸ್ನಲ್ಲಿ ಕಂಡಂಗೆ
ನಾದುನಿ ನಾಗಮ್ಮ
ಹೊನ್ನಮ್ಮನ ಅತ್ತ್ಯಮ್ಮ
ಇಬ್ಬರೂ ಒಟ್ಟಾಗಿ
ಅಡಗೇಗೆ ತೊಡಗ್ಯಾರು
ಅಡಗೇನು ಆದಾವು
ನೀರೂನೆ ಕಾದಾವು
ಹೊನ್ನಮ್ಮ ಅತ್ತಮ್ಮ
ನಾದುನಿ ನಾಗಮ್ಮ
ಗುಟ್ಯಾಗೆ ಮಿಡಿನಾಗರ
ಬೇಯ್ಸ್ಯಾರೆ, ಹೆಸ್ರನ್ನ ಮಾಡ್ಯಾರೆ
ಅತ್ತಿಗಮ್ಮ ಅತ್ತಿಗಮ್ಮ
ಸಾನವ ಮಾಡ್ಬನ್ನಿ
ಊಟಾನ ಮಾಡ್ಬನ್ನಿ
ಹೊನ್ನಮ್ಮನ ಅತ್ತ್ಯಮ್ಮ
ನಾದುನಿ ನಾಗಮ್ಮ
ಇಬ್ಬರೂ ಸೇರ್ಯಾರೆ
ಆ ಊಟಾನೆ ಬಡಸ್ಯಾರೆ
ನೀವೂನು ಕುಂತ್ಕಳ್ಳಿ
ಊಟಾನೆ ಮಾಡ್ಬನ್ನಿ
ನನ ಕಂದಾನ ಕೂಸ್ಬುಡಿ
ಅಂಗಂದ ಮಾತಿಗೆ ಬಸ್ರೆಂಗ್ಸಿ

ಕುತ್ಕಂಡಿ ಊಟಾನೆ ಮಾಡ್ಬುಡಿ
ನಿನ್ನ ಕಂದಯ್ಯ ಆಟನೆ
ಆಡ್ತಾವ್ನೆ ಆಚೇಲಿ ಇದ್ದಾನೆ
ಇಂಗೆಂದ ಮಾತಿಗೆ ಊಟಾಕೆ
ಕುಂತಗಂಡ್ಲು ಒಂದು ತುತ್ತನ್ನೆ
ಉಂಡಾಳು ಸಂಕಟಾವೆ
ಸುರುವಾಯ್ತು ಎರಡನೆ
ತುತ್ತೀಗೆ ವಾಕರಿಕೆ
ಬಂದ್ಬುಡ್ತು ಮೂರನೆ
ತುತ್ತೀಗೆ ಬಾಳ ಸಂಕಟಾವೆ
ಆಯ್ತಾದೆ ಅಂತಂದ್ಲು
ನಾದುನಿ ನಾಗಮ್ಮ
ಹಾಲನ್ನ ಕುಡಿತೀರ
ನನಗೆ ಊಟಾನೆ
ಬ್ಯಾಡಂದ್ಲು ಹಾಲೂನು
ಬ್ಯಾಡಂದ್ಲು ಕಣ್ಣಲ್ಲಿ
ನೀರತಂದ್ಲು ಮನಸ್ನಾಗೆ
ತಿಳಕಂಡ್ಲು ಭಗವಂತನ
ನೆನಸ್ಕಂಡ್ಲು ಗೋಳಂತ
ಅತ್ಕಂಡ್ಲು ಕಂದಯ್ನ
ಕೂಗಕ್ಕೆ ಬಾಯನ್ನೆ ತಗದಾಳು
ಅತ್ತ್ಯವ್ಮ ಅತ್ತ್ಯವ್ಮ ಕೈಬಾಯಿ
ತೊಳತೀನಿ ಸಂಕಟಾನೆ ಬಾಳ್ವಾಗಿ
ಸುಸ್ತಾನೆ ಆಗ್ತಾದೆ ಮೇಲಕ್ಕೆ
ಏಳ್ನಾರೆ ಹೊನ್ನಮ್ನ ಅತ್ತ್ಯಮ್ಮ
ನಾದುನಿ ನಾಗಮ್ಮ ಇಬ್ಬರೂ
ಸೇರ್ಯಾರೆ ಎಳಕಂಡ ಹೋಗ್ಯಾರೆ
ಮಲಗ್ಸುವ ಹೊತ್ತಿಗೆ ಮಾತ್ನಿಂತ
ಅತ್ಗೇಯು ಕೇಳ್ಯಾಳೆ ನಾಗಮ್ಮ
ಚಿತ್ರಾಣಿ ನಾದುನಿ ಒಳಒಳಗೆ
ಖುಸಿಪಟ್ಲು ಹಾಲನ್ನ
ತಂದಾಳ ಬಾಯಿ ಮೇಲೆ

ಊದಾಳು ಆ ಗಳಿಗೇಲಿ
ಹೊನ್ನಮ್ಮ ಗಂಡನ್ನು
ಕಂದನ್ನು ನೆನಕಂಡು
ಪ್ರಾಣವ ಬಿಟ್ಟವಳೆ
ನಾದುನಿ ನಾಗಮ್ಮು
ಹೊನ್ನಮ್ಮನ ಅತ್ತೆಮ್ಮು
ಇಬ್ಬರೂ ಸೇರ್ಯಾರೆ
ಏನೆಂದು ಯೋಚ್ಸ್ಯಾರೆ
ನಾದುನಿ ನಾಗಮ್ಮ
ತಾಯಮ್ಗೆ ಧೈರ್ಯದಿ
ಹೇಳ್ಯಾಳೆ ಇಲಿಕೇಳೆ
ನನ್ನಪ್ಪ ದಂಡಿಗೋದ
ಅಣ್ಣಯ್ಯ ಬರುವಂತ
ಏಳಿಗೆ ಈ ಕೆಲ್ಸವ
ತೀರ್ಸಬೇಕು ನಾವೀಗ
ಹಿತ್ತಾಲ ಹೊಲದಲ್ಲಿ ಹಳ್ಯಾನೆ
ತಗದ್ಬುಟ್ಟು ಗುಟ್ಟಾಗಿ ಬಂದವ್ರೆ
ಕತ್ತಾಲ ಮಾಡ್ಕಂಡ್ರು
ಚಾಪೆಗೆ ಸುತ್ಬುಟ್ರು
ಹೊತ್ಕಂಡಿ ನಡೆದವರೆ
ಬಿರಬಿರನೆ ತಲಪವರೆ
ಗುಂಡಿಗೆ ಒಗೆದವರೆ
ಮಣ್ಣನ್ನ ಮುಚ್ಚಿದರು
ಹೊಂಟಾನೆ ಅರಮನೆಗೆ
ಸೇರವರೆ . . . . .
ಆಟವಾಡ್ತಿದ್ದ ಕಂದಣ್ಣ
ಓಡೋಡಿ ಬರುತಾನೆ
ಅಟ್ಟೆಯಲ್ಲೆ ಸುತ್ತುತ್ತಾನೆ
ಅಜ್ಜಮ್ಮು ಅತ್ತೆಮ್ಮು
ನೀವೆಲ್ಲಿ ಹೋಗಿದ್ರಿ
ನನ್ನಮ್ಮ ಎಲ್ಲೋದ್ಲು
ಒಳಗೆಲ್ಲ ತಡಕೇದೆ

ಏನೆಂದು ಉತ್ತರ
ಕೊಡುವ್ಹೋದು ಅಂತ್ಹೇಳಿ
ಕೈಬಾಯಿ ಸನ್ನೆಯ
ಮಾಡ್ಕಂಡ ಬಾರೋ
ನನ್ನಪ್ಪ ಬಾ ಬಾರೊ ನನಕಂದ
ಊಟಾನೆ ಮಾಡ್ಬಾರೋ
ಅಡಗೆಯ ಮನೆಗ್ಹೋಗಿ
ಹಳಸ್ಲನ್ನ ಉಳಮಜ್ಗಿ
ಹಾಕವ್ರೆ ತಟ್ಟೇಗೆ
ಕಂದಯ್ಯ ಊಟಾನೆ ಬ್ಯಾಡೆಂದ
ನನ್ನಮ್ಮ ನನಗೆ ಬೆಣ್ಣೆಯ
ಕೊಡುತಿದ್ಲು ನನ್ನಮ್ಮಾನೆ ಆಗಿದ್ರೆ
ಬಿಸಿಯನ್ನ ಬಡಿಸ್ತಿದ್ಲು
ಮೊಸ್ರು ಹಾಲನ್ನೆ ಕೊಡ್ತಿದ್ಲು
ನೀವಾದ್ರು ಯಾಕತ್ತೆ
ಅಳಸೀದ ಸೀಕಲು
ತಂಗ್ಳನ್ನ ಉಳಮಜ್ಗಿ
ಇಕ್ಕಿದ್ರಿನನ್ಗೆ ನನ್ನಪ್ಪಾನೆ ಬರ್ಲಿ
ಬರ್ಲಿ ಈ ಮಾತ ಹೇಳುತೀನಿ
ನನಗೆ ಊಟಾನೆ ಬ್ಯಾಡಂದ
ಯೋಚ್ನೆಯ ಮಾಡ್ಯಾರೆ ತಂದೆಗೆ
ಇವನೀಗ ತಿಳಿಸ್ತಾನೆ ಬದ್ಕಕ್ಕೆ
ಬುಡಬಾರ್ದು ಕೆಟ್ಟಾನೆ ಯೋಚ್ನೇಯ
ಮಾಡ್ಕಂಡ್ರು ಬಾರಾನೆ ಬಾರಾನೆ
ನನ್ನಪ್ಪ ಬಾರನೆ ಬ್ಯಾರೇನೆ
ಇಕ್ಕ್ಯತೀವಿ ಅಂತ್ಹೇಳಿ
ಕೊಟ್ರೇಗೆ ಕರೆದೊಯ್ದ್ರರು
ನನ್ನಮ್ಮ ಯಾಕೆ ಕಾಣಲ್ಲ ನಮ್ಮತ್ತೆ
ನಮ್ಮಮ್ನ ನೀವು ಎಲ್ಲಿ ಬಿಟ್ಬಂದ್ರಿ
ಅಪ್ಪಯ್ಯ ಬರಲೀಗ ಅಂತ್ಹೇಳಿ
ಅಳುತಾನೆ ಬೆಲ್ಲಾನೆ ತಿನ್ನು
ಕಡ್ಲೆಯ ತಿನ್ನು ಹೇಳುತೀನಿ

ಕಾಣಪ್ಪ ಕುತಗಂಡಿ ತಿನ್ನು
ಅಂತಾನೆ ಹೇಳ್ಬುಟ್ಟು
ಇಬ್ಬರೂ ಸೇರ್ರ್ಯಾರೆ ಅರಗಳಿಗೇಲಿ
ಹಿಡಿದಾರು ಕಂದನ್ನ
ನತೀಗೆ ನತ್ತಿಗೂಟ
ಸಂದೀಗೆ ಸಂದಿಗೂಟ
ಎದೆಗೆ ಎದೆಗೂಟ
ಜಡಿದಾರೆ ಕಂದಯ್ಗೆ
ಇಬ್ಬರೂ ಸೇರ್ರ್ಯಾರೆ
ಕೈಕಾಲು ಮುದ್ದೆ ಮಾಡಿ
ಮೆಟ್ಟೀನ ಕಲ್ಲಡಿ
ಕಂಡಾನ ಒಗೆದಾರು
ನಾದುನಿ ನಾಗಮ್ಮ
ಹೊನ್ನಮ್ಮನ ಅತ್ತೆಮ್ಮ
ಇಬ್ಬರೂ ಸೇರೀಗ
ಒಳಗಿನ್ನು ನಡುದಾರೆ
ನಾದೋನಿ ನಾಗಮ್ಮ
ಏನೆಂದು ಹೇಳ್ಯಾಳೆ
ಇಲಿ ಕೇಳಿ ನನ್ನಪ್ಪ
ಅಣ್ಣಯ್ಯ ಬಂದಾರೆ
ಅತ್ತೀಗೆ ಕೇಳ್ತಾನೆ
ನೀನು ದಂಡಿಗೋಗಿ
ಆರು ತಿಂಗಳಾಗುವಾಗ
ತವರೀಗೋದ ಹೊನ್ನಿ
ಅರಮನಿಗೆ ಬರನಿಲ್ಲ
ಅಂಗಂತೆ ಯೋಚ್ನೆಯ
ಮಾಡ್ಕಂಡು ಮಲ್ಗವ್ರೆ
ದಂಡ್ನಲ್ಲಿ ಏನಾಯ್ತು
ಅಷ್ಟಾನೆ ಹೊತ್ತೀಗೆ
ದಂಡಿಗೋದ ಗಂಡಯ್ಗೆ
ಹೊನ್ನಮ್ಮನ ಯೋಚನೆಯೋ
ಕನಸಾನೆ ಕಂಡವನೆ

ಕನಸನ್ನು ಕಾಣ್ತಾವ್ಗೆ
ಕಂಡಾನ ಸರ್ವೇಶ
ಕಂಡಾರು ಕನಸೀಗೆ
ಆಗ ಸಂತೋಸ್ದ
ಸಾನನೇ ಮಾಡನ್ನೆ
ಎಂದು ಬರದಿದ್ದ ಕನಸೀಗೆ
ಇಂದೇಕೋ ಕಂಡ್ಬಂದ್ರು
ನಾ ದಂಡೀಗೆ ಬಂದು
ಆರು ತಿಂಗಳಾದೊ
ದಂಡಿಗೋದಣ್ಣಯ್ಯ
ಎದ್ದಾನು ಗಳಿಗೇಲಿ
ಮುಕವನ್ನು ತೊಳಿದಾನೆ
ಕೈಕಾಲು ತೊಳಿದಾನೆ
ಅಲ್ಲಿಂದ ಹೊರಟಾನೆ
ಪತಿರಾಯ ಈಗಿನ್ನೂ
ಆರು ತಿಂಗಾಳು
ರಜವನ್ನು ತಾಗೊಂಡು
ಪತಿರಾಯ ಹೊರಟಾನೆ
ಬೇಕಾದ ವಡವೆಗಳು
ತಗೊಂಡಾನೆ ಪತಿರಾಯ
ತಾ ಊರಿಗೆ ಬಂದಾನೆ
ಅರಮನಿಗೆ ಬರುವಾಗ
ಏನೆಂದು ಯೋಚನೆಮಾಡಿ
ಸಾನು ನನ್ನಾಕೆ
ನನ ಮುದ್ದುಕಂದ
ಮೂರು ಜನ ಕೂತೀಗ
ಮಾತೊಂದು ಆಡಬೇಕು
ಸಂತಸ ಪಡಬೇಕು
ಅಂಗೆಂದು ಈ ರಾಯ
ಓಡೋಡಿ ಬರುತಾನೆ
ದೂರದಿಂದ ಬರುವಾಗ

ಮನೆಕಡೆಯ ನೋಡಾನೆ
ಮನೆ ಕಡೆ ನೋಡಿದರೆ
ಹೊನ್ನಮ್ಮ ಸುಳಿವಿಲ್ಲ
ಕಂದಯ್ಯ ಸುಳಿವಿಲ್ಲ
ಆಡ್ಬೇಕಾದ ಮಾತೆಲ್ಲ
ಬಾಯೊಳ್ಗೆ ನುಗ್ಗಾದೊ
ಅಂಗಳಕೆ ಇಳುದಾನು
ಹೊನ್ನಮ್ಮ ಅತ್ತೆಮ್ಮ
ಓಡೋಡಿ ಬರುತಾಳೆ
ನಾಟಕವನೆ ಆಡುತಾಳೆ
ಅಯ್ಯೋ ನನ ಕಂದ
ಎಷ್ಟೊಂದು ಬಾಡೋದಿ
ಪಾದಾಕೆ ನೀರನ್ನೆ ತರುತೀನಿ
ಮಗರಾಯ ಕೇಳ್ಯಾನು
ಇಲಿಕೇಳೆ ನನ್ನವ್ವ
ನೀ ನೀರು ಕೊಡುವುದಕೆ
ನೀ ತಂದ ಸೊಸೆ ಎಲ್ಲೆ
ಇಲಿ ಕೇಳೋ ನನ ಕಂದ
ನೀ ಪಾದನಾ ತೊಳಿ ಬಾರೊ
ಬಾಯಾರಿಕೆಗೆ ಹಾಲ ಕುಡಿಬಾರೋ
ನಾದುನಿ ನಾಗಮ್ಮ
ನೀರನ್ನ ಇಡ ತಂದ್ಲು
ಅಣ್ಣಯ್ಯ ಅಣ್ಣಯ್ಯ
ಏಸೊಂದು ಸೊರಗಿದ್ದಿ
ಪಾದಕೆ ನೀರಂದ್ಲು
ಅಣ್ಣಯ್ಯ ಕೇಳಾನೆ
ಇಲಿ ಕೇಳೆ ತಂಗ್ಯಮ್ಮ
ನೀ ನೀರು ಕೊಡುವುದಕೆ
ನಿನ್ನತ್ತಿಗಮ್ಮ ಎಲ್ಲೋದ್ಲೆ
ಇಲಿ ಕೇಳೋ ಅಣ್ಣಯ್ಯ
ಅತ್ತಿಗಮ್ಮನ ಏನ್ ತಿಳಿದೆ
ಬಳಿ ಮೋಜು ಮಾಡಾಕೆ

ಬಳೆಗಾರ್ರ ಮನೆಗೋದ್ಲು
ತಂಗಂದ ಮಾತಿಗೆ
ಬಳೆಗಾರ ಮನೆಗವನು
ಓಡೋಡಿ ಹೊಗುತಾನೆ
ಹೀಗೆಂದು ಕೇಳ್ಯಾನೆ
ಬಳೆಗಾರ ಅಣ್ಣಯ್ಯ
ನಮ ಹೊನ್ನಮ್ಮ ಬಂದಿದ್ಲ
ನಾವೇ ಇಂದಿಗೆಂಟು ದಿನದಾಗೆ
ಓಗಿ ಬಂದಿದ್ದೊ
ನಾವಿಂದಿಗೆಂಟು ದಿನದಾಗೆ
ಬಳೆತೊಡಿಸಿ ಬಂದಿದ್ದೊ
ಹೊನ್ನಮ್ಮ ತಾನೊಬ್ಬೆ
ಬರುವಳಲ್ಲ ತಾಯಮ್ಮ
ಅಲ್ಲಿಂದ ಬಂದಾನೆ
ಮಗರಾಯ ಈಗಿನ್ನು
ಇಲಿಕೇಳಿ ನನ್ನವ್ವ
ನೀ ಕೇಳಿ ನನವಾತ
ನೀ ತಂದ ಸೊಸೆಯಲ್ಲಿ
ಕರಕಂಡು ಬಾರಿ
ಇಲಿಕೇಳೊ ನನಕಂದ
ಬಟ್ಟೆ ಮೋಜಿಗೆಂದು
ಮಡಿವಾಳ್ರ ಮನೆಗೋದ್ಲು
ಅಲ್ಲಿಂದ ಪತಿರಾಯ
ಮಡಿವಾಳ್ರ ಮನೆಗೋದ
ಹೀಗೆಂದು ಕೇಳ್ಯಾನು
ಮಡಿವಾಳ್ರ ಅಣ್ಣಯ್ಯ
ನಮ್ಮ ಹೊನ್ನಮ್ಮ ಬಂದಿದ್ಲ
ಇಲಿಕೇಳಿ ಪುರುಸೋರೆ
ನಿಮ ಹೊನ್ನಮ್ಮ ಕಾಣಲಿಲ್ಲ
ನಾವಿಂದಿಗೇಳು ದಿನಕೋಗಿ
ಮಡಿಬಟ್ಟೆ ಕೊಟ್ಟೆಂದೊ
ಹೊನ್ನಮ್ಮ ತಾಯಿ

ತಾ ಒಬ್ಬೆ ಬರುವೊಲ್ಲ
ಅಲ್ಲಿಂದ ಪತಿರಾಯ
ಬಂದಾನು ಗಳಿಗೇಲಿ
ಹೆತ್ತವ್ನ ಕೇಳ್ಯಾನು
ನೀ ಎಷ್ಟು ಸುಳ್ಳುಗಾತಿ
ನನ್ನವ್ವ ತಂಗ್ಯವ್ವ
ನೀ ಎಷ್ಟ ಸುಳ್ಳ ಹೇಳಿದ್ದಿ
ಇಲಿ ಕೇಳೊ ಅಣ್ಣಯ್ಯ
ಚಿನ್ನ ಮೋಜು ಮಾಡಲು
ಅಕ್ಕಸಾಲಿಗ್ರ ಮನೆಗೋದ್ವು
ಆ ಮಾತಲ್ಗಾ ತಾಳ್ಮೆ ತಂದ್ಕಂಡು
ಅಕ್ಕಸಾಲಿಗ್ರ ಮನೆಗೋಗಿ
ಅಕ್ಕಸಾಲಿಗ್ರ ಅಣ್ಣಯ್ಯ
ನಮ ಹೊನ್ನವ್ನ ಕಂಡಿದ್ರ
ಇಂದಿಗಾರು ದಿನದಲ್ಲಿ
ನಾವು ಚಿನ್ನಾನೆ ತೊಳದಿದ್ದೊ
ಚಿನ್ನಾನೆ ತೊಳೆದು ಬಂದಿದ್ದು
ನಾವು ಹೊನ್ನನ್ನ ಕಾಣಲಿಲ್ಲ
ಆ ತಾಯವ್ವ ಒಬ್ಬಾಳೆ ಬರುವೊಲ್ಲ
ಅಲ್ಲಿಂದ ಪತಿರಾಯ
ದಡ ದಡ ಬಂದಾನು
ಇಲಿ ಕೇಳಿ ಹೆತ್ತವ್ವ
ನೀ ಕೇಳಿ ನನಮಾತ
ನೀನೀಗ ಸತ್ಯಾನ
ಒಡುದೇಳ ಸುಳ್ಳನ್ನ ಹೇಳಬ್ಯಾಡ
ಎಷ್ಟೆಂದು ಕೇಳಿದರೆ ಸತ್ಯಾವ
ಹೇಳಲಿಲ್ಲ ಮರ್ಮಕಾರ ಹೆಂಗುಸ್ರು
ಇಲಿ ಕೇಳೋ ಕಂದಯ್ಯ
ನೀ ಕೇಳೋ ನನ ಮಾತ
ನೀ ಪಾದಾನ ತೊಳಿಬಾರೊ
ಬಾಯಾರಿಕೆಗೆ ಹಾಲ ಕುಡಿಬಾರೊ
ಆಮೇಲೆ ನಾ ಹೇಳುತೀನಿ

ಏನೇನೊ ಮನದಾತಿಳಿಕೊಂಡ
ದುಃಖಾವ ತುಂಬುಕಂಡು
ಮೆಟ್ಟಿನ ಕಲಮೇಲೆ
ನೀರನ್ನೆ ಇಸಗಂಡ
ಪಾದಕ ನೀರ ಹಾಕಂಡು
ಈ ನೀರು ಹರಿದು
ಕಂದಾನ ಬಾಯ್ಗೆ ಬಿದ್ದೊ
ಉಸ್ರಾನೆ ತುಂಬೀತು ಜೀವಾವೆ
ಬಂದೀತು ಅಪ್ಪಯ್ಯ
ಅಪ್ಪಯ್ಯ ಕಂದಾನ ಸೊಲ್ಲು
ಅಪ್ಪಯ್ಯ ಆಗ ನಿಂತು
ಕೇಳ್ಯಾನೆ ಸಬುದಾವ
ಎಲ್ಲಿ ನೋಡಿದರೂ
ಕಂದಾನ ಸುಳಿವಿಲ್ಲ
ಸುತ್ತ ಮುತ್ತಾ ನೋಡಿ
ಮೆಟ್ಟೇನ ಕಲ್ಲ ಮಗುಚಾನೆ
ಕಂದಯ್ಯ ಕಂಡಾನು
ಬಾಚಿ ತಬ್ಬಾನು
ಎತಿಗೊಂಡು ಆಳುತಾನೆ
ಅತ್ತಾನು ಕರುದಾನು
ಕಂದನಗೆ ಎಣ್ಣೆಯು
ಸವರಾನು ಆರೈಕೆ ಮಾಡ್ಯಾನು
ಪಂಡಿತ್ನ ಕರಸ್ಯಾನು ವೈದ್ಯವ ಮಾಡಿಸಾನು
ಅವರ ಸತ್ಯಾವೆ ಅವ್ರನ್ನ
ಕಾಪಾಡಿದಂತ ಗಳಿಗೇಲಿ
ಕಂದನ್ನ ಕೇಳ್ಯಾನು
ಇಲಿ ಕೇಳು ನನಕಂದ
ನಿಮ್ಮಮ್ಮ ಎಲ್ಲೆಂದ
ನೀನು ದಂಡಿಗೋಗಿ
ಆರು ತಿಂಗಳಾಗುವಾಗ
ಅಜ್ಜಮ್ಮ ಅತ್ತೆಮ್ಮ
ಅವಮ್ಮಾನು ಮೂರು ಜನ

ಹಳ್ಳಕ್ಕೆ ಓಗಿದ್ರು
ಮೀನನ್ನೆ ತಂದಿದ್ರು
ಅಡಗೇನ ಮಾಡಿದ್ರು
ಅತ್ತೆಮ್ಮ ಅಜ್ಜಮ್ಮ
ನ್ಯೆಯೆಲ್ಲ ಕಣ್ಣಾಗಿ
ಕೇಳ್ತಾನೆ ಕಂದನ ಮಾತ

ಮಂಚಡಾಗೆ ಮನಗಿದ್ದ
ನನ್ನಮ್ಮನಾದ್ರು
ಅಡಗೇನ ಮಾಡಕಂಡು
ಅತ್ತೆಮ್ಮ ಬಂದಿದ್ಲು
ಅತ್ತಿಗೆಮ್ಮ ಅತ್ತಿಗೆಮ್ಮ
ಊಟಾಕೆ ಬನ್ನೆಂದ್ರು
ಊಟಾಕೆ ಕರುದಾರೆ
ನನ್ನಮ್ಮ ಹೋಗಾನಿಲ್ಲ
ಅಜ್ಜಮ್ಮನು ಈಗ
ಅತ್ತೆಮ್ಮನು ಈಗ

ಅವನ್ಯಾನ ಈಗಿನ್ನು
ಕರೆದುಕೊಂಡೋಗಿದ್ರು
ಕರದು ಕೊಂಡೋಗೀನೆ
ಊಟಾನೆ ಬಡಸಿದ್ರು
ನಾನೂನೆ ಊಟಕೆ
ಹೋಗೀನೆ ಕೂರುವಾಗ
ನೀನು ಆಮೇಕೆ
ಉಣ್ಣೆಂದ್ರು ನಾ ಈಚೆಗೆ
ಬಂದಾಯ್ತು ಅವನ್ಯಾನು
ಊಟಾನಮಾಡಿ ಬರುವಾಗ
ನನ್ನ ಪ್ರಾಣದಪ್ಪ ಕಾಲನ್ನ
ಎಳಿತಿದ್ನ ಬಾಳಸಂಕಟವೂ
ತಲೆ ಈಗ ತಿರುಗುತ್ತೈತೆ
ಅಂತ್ಹೇಳಿ ಮನಗ್ಬುಟ್ಲು
ಅವ್ವ ನಿದ್ದೆಯ ಮಾಡಲಿ

ತ್ರಾಸ ಕೊಡಬ್ಯಾದಂದ್ರು
ಆಟನ ಆಡ್ಹೋಗು ಅಂತ್ಹೇಳಿ
ನಾ ಬರುವ ಹೊತ್ತಿಗೆ ಹಿತ್ತಲ
ಹೊಲಕಡೆ ದಾರಿ ಆಗಲೇ
ಬಂದರು, ನಾಸಾ ಅವ್ವನ
ಕೇಳಿದೆ ನನ್ನಾಗ ಒಳಗೆ
ಕರ್‍ಕೊಂಡ್ಹೋಗಿ ಹಳಸಾಲು ಹುಳಿಮಜ್ಗೆ
ನೆ ಬಡಿಸಿದ್ರು ನನ್ನವ್ವ ಎಲ್ಲೋದ್ಲು
ಕತ್ತಾಲು ಬಾರಿ ಎಲ್ಲಿಗೆ ಕಳಿಸ್ಬುಟ್ರೆ
ನಮ್ಮಪ್ಪಾಜಿನೆ ಬರಲಿ ಇದ ನಾನು
ಹೇಳುತ್ತೀನಿ ಅಂದದ್ಕೆ ಬೆಲ್ಲಕಳ್ಳಿಯ
ಕೊಟ್ರು ನಂತರವೇ ನನ್ನ ಬಡದ್ರು
ಆವೇಕೆ ನನಗೇನು ತಿಳೀದು
ಅಪ್ಪಾಜಿ ತಟ್ಟೆ ಕಡು ದುಃಖಮಾಡ್ತಾನೆ
ಕಂದಾನ ಎತಿಗಂಡು
ಗೋಳಾಡಿ ಅಳುತಾನೆ
ಮುಂದೆ ಮುಂದೆ
ಹೋಗುತಾ ಬಾರಿ ಹೊಲದ
ಮೇಲೆ ಹಿತ್ತಾಲ ಹೊಲಕೆ
ಬರುವಂತ ಹೊತ್ತಿನಲ್ಲಿ
ಹಸಿಯಾಗಿ ಕೆಮ್ಮಣ್ಣು
ಮುಚ್ಚಿದ ಜಾಗವ
ಕಂಡಾನು ಅರೆಚಣದಿ
ಬಗದಾನು ತಗದಾನು
ಸುಸ್ತಾಗಿ ಕುಂತಾನು
ಕಂದನಿಗೆ ಹೇಳ್ಯಾನು
ನಾವೆಷ್ಟು ಅತ್ತಾರು
ಕರದಾರು ನಿಮ್ಮವ್ವ
ಬರುವುದಿಲ್ಲ ಅಂತ್ಹೇಳಿ
ನನ ಸತವಂತೆ ಮಡದೀಗೆ
ಭಂಗವಂತನೆ ದಿಕ್ಕೆಂದು

ಅವಸರದಲ್ಲಿ ಮಣ್ಣನ್ನು
ಕೈಯಿಂದ್ಲೆ ಈಗ್ಲೀಗ
ತಗಿತಾನೆ ಹೊನ್ನನ ತಲೆ
ಕಾಣ್ತಾ ಅಚ್ಚರಿಯಾಗೆ .
ಮತ್ತ್ರಷ್ಟು ತಗದಾರೆ
ಪತಿರಾಯ್ನ ಪರುಸಕೆ
ಪತಿರತೆ ಹೊನ್ನಕ್ಕಗೆ
ಜೀವಗಾಳಿ ತುಂಬೀತು
ಪತಿರಾಯ್ನ ಪಾದವ
ಹಿಡಕಂಡು ದುಃಖಿ
ಮಾಡುವ ನಿಮ್ಮ ಅರಮನಿಗೆ
ನಾನ ಬರಲಾರೆ ಪತಿರಾಯ
ಮೂರು ಜನರು
ಒಬ್ಬೊಬ್ಬರ ತಬ್ಬಿಕೊಂಡು
ಅಳುತಾರೆ ಕಂದಾನ
ಬಾಚನ್ನೆ ಸತ್ಯಕೆ
ಜಯಮಗನೆ ಸತ್ಯದಿ
ನಡೆಯಪ್ಪ ಅಂತ್ಹೇಳಿ
ಕೈಮುಗಿದು ಕೇಳುತಾಳೆ
ಕಂದನ ಗತಿ ಕೇಳಿ
ದಿಗಿಲೆದ್ದು ಗೋಳಾಡ್ತಾಳೆ
ಅಂಗಲಾಚಿ ಕೇಳುತೀನಿ
ಗಂಡಯ್ಯ ನಿನ್ನವ್ವ
ನಿನ್ನ ತಂಗೇಯ ತೆಕ್ಕೇಗೆ
ನನ್ನ ನಮಗುವ ಹುಲಿ
ಬಾಯ್ಗೆ ಕೊಟ್ಟಂಗೆ
ಕೊಟ್ಬುಟ್ಟಿ ನಿನ್ನರಮನೆ
ಸಾಕಾಯ್ತು ನಾವು ಮೂರು
ಜನವೇ ದೇಸಾಂತರ
ಹೋಗೋಣ ಅವರಾದ್ರೆ
ಅರಮಲ್ಲಿ ಬದಕಳ್ಳಿ

ಅವರ ಸಹವಾಸ ಬೇಡಪ್ಪ
ನನ ಚಿನ್ನದಂತ ಮಡದಿ
ಇಷ್ಟು ಮಾಡಿದ ಅವ್ರ
ಬದಕಳ್ಳಿ ಅಂತ ಹೇಳುವಾಗ
ಇವಳಾದ್ರು ಎಂಥ ಸತ್ಯದ ಹೆಣ್ಣು
ಮಾಯ್ಕಂತಿ ಅವ್ವನ ಚಿತ್ರಾಣಿ
ತಂಗಿನ ಒಂದು ಗತಿ ಕಾಣಿ
ಸ್ಬೇಕು ಅಂತ ಮನದಾಗ
ಮಡಿಕಂಡು ಹೊನ್ನಮ್ಮ
ಅಪ್ಪನ ಮನೆಗೆ ವಾಲಿ
ಕಳಿಸ್ಯಾನೆ ಸೀಗ್ರದಲಿ ಬರುವಂಗೆ
ಊರು ಕೇರಿಗೆಲ್ಲ
ಸಾರ್ಯಾನು ಈ ರಾಯ
ಅರಮನೀಗೆ ಈಗಿನ್ನು
ಅರಮನಿಗೆ ಬಂದಾನು
ತಾಯಿಯು ತಂಗಿಯು
ಸಿಗಿಸಿ ತೋರಣ ಹಾಕಿ
ಹೊಂಟಾನೆ ದಂಡಿನರಾಯ
ಆನೆ ಮೇಲೇರಿಕೊಂಡು
ಹೋಗ್ಯಾನೆ ಹೊನ್ನಮ್ನ ಬಳಿಗೆ
ಬಂದಾರೆ ಎಲ್ಲರೂ
ಬಂದಂತ ಜನವೀಗ
ನಿಂದಾಗೆ ಗಳಿಗೇಲಿ
ಹೊನ್ನಮ್ನ ದಂಡಿನರಾಯ
ಕಂದನ್ನೂ ಮೇಲೇರಿಸಿಕೊಂಡು
ಆನೆ ಮೇಲೆ ದಿಬ್ಬಣ ಹೊಂಟಾನು
ಕಂಡಾನು ಮೂರು ಜನ
ಆನೆ ಮೇಲೇರಿಕೊಂಡು
ಅರಮನಿಗೆ ಕರೆತಂದ್ರು
ಮೂರು ಜನವೆ ಸೇರಿ

ಅರಮನೇಲಿ ಇರುವ್ಹೊರು
ಬಂದಂತ ಸಭೆಯೆಲ್ಲ
ಇವರ್ನೀಗ ಅರಸ್ಯಾರೆ
ಸತ್ಯದ ಬದ್ಕೀಗೆ
ದೇವರೇ ಬಲಗಾರ
ಹೊನ್ನಮ್ನ ಕುಟುಂಬ
ಸೌಖ್ಯವಾಗಿ ಬಾಳಾಲಿ ಬದುಕಾಲಿ
ಎಂದ್ಹೇಳಿ ಹೊಂಟಾರು
ಮೂರು ಜನವೀಗ ಅರಮಲ್ಲಿ ಸುಖವಾಗಿ ಇದ್ದಾರೆ
ಇಲ್ಲೀಗೆ ಶಿವ ಶಿವ ಇಲ್ಲೀಗೆ ಹರ ಹರ

# ಕೆಂಚಮ್ಮ

ಆ ಆ ಆ....
ಕಟ್ಟೆಕಲ್ಲು ಕಳಿಕಳಿ ಮೆಟ್ಟಿನ ಕಲ್ಲು ಮಿಳಿ ಮಿಳಿ
ಇಟ್ಟ್ಯಾಡಿದ ಕಲ್ಲು ಪದಮಾಲೆ । ಕಲ್ಲಿನ ಮ್ಯಾಲೆ
ಕೂತು ಮಿಂದಾಳೆ ಕೆಂಚಮ್ಮ ॥

ಕೂತು ಮಿಂದಾಳೆ ಪದಮಾಲೆ ಕಲ್ಲಿನಮ್ಯಾಲೆ
ಸಿಡಿದು ಎಣೆಗಂಟು ಜಡುದಾಳೆ । ಕೆಂಚಮ್ಮ
ಪಚ್ಚೆಯಾ ಹೊಲಕೆ ನಡುದಾಳೆ ॥

ಸೆರಗೀನ ತುಂಬ ಪಚ್ಚೆಯ ಕುಯ್ದಾಳೆ
ಜೋಡಿಯಾಲೆ ಮಾಲೆ ಮುಡಿದಾಳೆ । ಕೆಂಚಮ್ಮ
ಮಾಳಿಗೆ ಒಳಗೆ ನಡುದಾಳೆ ॥

ಹೊಲದಿಂದವಳು ಅಟ್ಟೆಗೆ ಹೊಂಟಾಳು
ಜೋಡು ಮಂಚಗಳೇ ಕದುನಾದು । ಕೆಂಚಮ್ಮ
ಇಂದ್ಯಾಕೆ ನಿನ್ನ ಮೊಕ ಬಾಡಿ ॥

ತಿಂಗಾಳು ತುಂಬೀದ ಮ್ಯಾಲೆ ಅಂದಲೇರಿದಂಗೆ
ಎರವೇ ಕೆಂಚಮ್ಮನ ಮೊಕಬಣ್ಣ । ಮೈ ಬಣ್ಣ
ಹಂಗೆಂದು ಜಗುರಾಯ ನಡುದಾನೆ ॥

ಹಂಗೆಂದು ಜಗರಾಯ ಎದ್ದು ನಿಂತಾನೆ
ಮಾಳಗೆ ಒಳಗೆ ನಡೆದಾನು । ಜಗರಾಯ
ತಂದೆನಿದ್ದಲ್ಲಿಗೆ ನಡುದಾನೆ ॥

ತಿಂಗಾಳು ತುಂಬಿದ ವ್ಯಾಲಿ ಅಂದಲೇರಿದಂಗೆ
ಏರವೇ ಕೆಂಚವ್ನ ಮೊಕಬಣ್ಣ । ಮೈಬಣ್ಣ
ತಾರಿಗೊಂಡ್ವಾಲೆ ಬರಿಕಯ್ಯ ॥

ಅಂಗೈ ವಾಲೆಯಮಾಡಿ ಮುಂಗೈ ಕಂಟಮಾಡಿ
ಬಿರಬಿನೊಂದ್ವಾಲಿ ಬರುದಾನೆ । ಜಗರಾಯ
ವಾಲೆ ಕೈಯ್ಯಾಲಿ ಹಿಡುದಾನೆ ॥

ವಾಲೆ ಕೈಯಾಗೆ ಹಿಡಕಂಡು ಕೆಂಚವ್ನ ಬಯ್ಕೆಬಸ್ರು
ನೆನೆಸ್ಯಾನು ತಿಂಗತಿಂಗಾಳ । ಬಯ್ಕೆಯ
ಮುದದಿಂದ ಮೈ ಮರೆತು ನೆನದಾನು ॥

ಒಂದು ತಿಂಗಳಾದೊ ಕೆಂಚವ್ಗೆ ಆಗಲಿ
ಒಂದೆಲೆ ಬಿಲದ ಎಳದಾಟು । ಒಳಗಿರುವ
ಯಾಲಕ್ಕಿ ಗೊನಿಯ ಬಿಗುಸ್ಯಾಳು ॥

ಯಾಲಕ್ಕಿ ಗೊನೆಯ ಬಗುಸಿದರೆ ಕೆಂಚವ್ವ
ಒಂದಾಳು ಬುಟ್ಟು ತರಸ್ಯಾರೆ । ದೊಡ್ಡಗೌಡ್ರು
ಕೆಂಚವ್ವ ನಿನ ಬಯಕೇಯ ಒಡೆದೇಳೆ ॥

ಈಗಲೀಗ ಕೆಂಚವ್ಗೆ ಎರಡು ತಿಂಗಳಾದೊ
ಎರಡೆಲೆ ಬಲಿದ ಎಳೆದಾಟು । ಒಳಗಿರುವ
ಯಾಲಕ್ಕಿ ಪಂಚೊಳ್ಳೆಲೆಯ ಬವಸಾಳು ॥

ಯಾಲಕ್ಕಿ ಪಂಚೊಳ್ಳೆಲೆಯ ಬಗುಸಿದರೆ ಕೆಂಚವ್ವ
ಎರಡಾಳ ಬುಟ್ಟು ತರಸ್ಯಾರು । ದೊಡ್ಡಗೌಡ್ರು
ಕೆಂಚವ್ವ ನಿನ ಬಯಕೆಯ ಒಡದೇಳೆ ॥

ಈಗಾಗಲೆ ಕೆಂಚವ್ಗೆ ಮೂರು ತಿಂಗಳಾದೊ
ಮೂರೆಲೆ ಬಲಿದ ಎಳೆದಾಟು । ಒಳಗಿರುವ
ಸೀ ನಿಂಬೆ ಅಣ್ಣ ಬಗುಸಾಳು ॥

ಸೀ ನಿಂಬೆಅಣ್ಣ ಬಯಸಿದರೆ ಕೆಂಚಮ್ಮ
ಮೂರಾಳ ಬುಟ್ಟು ತರಸ್ಯಾರು । ದೊಡ್ಡಗೌಡ್ರು
ಕೆಂಚಮ್ಮ ನಿನ ಬಯಕೆಯ ಬುಡುಸ್ದೇಳೆ ॥

ಆಗಲೆ ಕೆಂಚಮ್ಮಗೆ ನಾಕು ತಿಂಗಳಾದೊ
ನಾಕಲೆ ಬಲಿದ ಎಳೆದಾಟು । ಒಳಗಿರುವ
ಎಳೆಯಾ ಹಿಂಗಾರ ಬವಸಾಳು ॥

ಎಳೆಯು ಹಿಂಗಾರ ಬವಸಿದರೆ ಕೆಂಚಮ್ಮ
ನಾಕಾಳ ಬುಟ್ಟ್ಯ ತರಸಾರು । ದೊಡ್ಡಗೌಡ್ರು
ಕೆಂಚಮ್ಮ ನಿನ ಬಯಕೆಯ ಬಿಡುಸ್ದೋಳೆ ॥

ಆಗಲೆ ಕೆಂಚವ್ವೆಗ್ಗ ಐದು ತಿಂಗಳಾದೊ
ಐದಲೆ ಬಲಿದ ಎಳೆದಾಟು । ಒಳಗಿರುವ
ಸೀಬೆಯಕಾಯ ಬವಸಾಳು ॥

ಸೀಬೆಯಕಾಯ ಬಯಸಿದರೆ ಕೆಂಚವ್ವ
ಐದಾಳು ಬುಟ್ಟ್ಯ ತರಸಾರು । ದೊಡ್ಡಗೌಡ್ರು
ಕೆಂಚವ್ವ ನಿನ ಬಯಕೆಯ ಬಿಡಿಸ್ದೋಳೆ ॥

ಆಗಲೆ ಕೆಂಚವ್ವೆಗ್ಗ ಆರು ತಿಂಗಳಾದೊ
ಆರೆಲೆ ಬಲಿದ ಎಳೆದಾಟು । ಒಳಗಿರುವ
ಅಡ್ಡಿಕೆ ಸಣಗುಂಡ ಬವಸಾಳು ॥

ಅಡ್ಡಿಕೆ ಸಣಗುಂಡು ಬವಸಿದರೆ ಕೆಂಚಮ್ಮ
ಆರಾಳ ಬುಟ್ಟ್ಯ ತರಸಾರು । ದೊಡ್ಡಗೌಡ್ರು
ಕೆಂಚವ್ವ ನಿನ ಬಯಕೆಯ ಬಿಡುಸ್ದೋಳೆ ॥

ಆಗಲೆ ಕೆಂಚವ್ವೆಗ್ಗ ಎಂಟು ತಿಂಗಳಾದೊ
ಎಂಟಲೆ ಬಲಿದ ಎಳೆದಾಟು । ಒಳಗಿರುವ
ಸೊಂಟಕೆ ಒಡ್ಯಾಣ ಬವಸಾಳು ॥

ಸೊಂಟಕೆ ಒಡ್ಯಾಣ ಬವಸಾಳು । ದೊಡ್ಡಗೌಡ್ರು
ಎಂಟಾಳ ಬುಟ್ಟ್ಯ ತರಸಾರು ॥

ಆಗಲೆ ಕೆಂಚವ್ವೆಗ್ಗ ಒಂಬತ್ತು ತಿಂಗಳಾದೊ
ಒಂಬತ್ತೆಲೆ ಬಲಿದ ಎಳೆದಾಟು । ಒಳಗಿರುವ
ತೌರೂರಿನ ಬುತ್ತಿ ಬಯಸಾಳು ॥

ತೌರೂರಿಂದ ಬಯಕೆ ಬವಸಿದರೆ ಕೆಂಚವ್ಮ
ಅದಕಾಗಿ ವಾಲೆಯು ಬರೆದ । ದೊಡ್ಡಗೌಡ್ರು
ಕನಸ್ನಿಂದ ಎಚ್ಚೆತ್ತು ಆಳ ಕರದಾರು ॥

ಗಳಿಗೇಲಿ ಬರೆದ ವಾಲೆ ಹಿಡ್ಕಂಡು
ಕೆಂಚವ್ನ ಬಯಕೆ ಇಷ್ಟೊತ್ತು ನೆನೆದು
ನಿಂತ ಮನ ನಿಂದಿಪಾಲು ಈಗಲೀಗ ॥

ಊರ ಮುಂದ್ಲ ಕಟ್ಟೇಗೆ ನಡೆದಾರು ಗೌಡಾರು
ನಿಂದು ಮೂರು ಸೊಲ್ಲ ಕರುದಂತ । ಹೊತ್ನಲ್ಲಿ
ಊಳಿಗ ಓಡೋಡಿ ಬರುತಾನೆ ॥

ಊಳಿಗ ಓಡೋಡಿ ಬಂದಾನೆ ಈಗಿನ್ನು
ಬಗ್ಗಿ ಸಲಾಮು ಹೊಡೆದಾನು । ದೊಡ್ಡಗೌಡರಿಗೆ
ಹೀಗೊಂದು ಮಾತ ಹೇಳ್ಯಾನು ॥

ಕೊಡೋಹಣ ಕೊಟ್ಟಿದ್ರಿ ತರೋಹಣ ತಂದಿದ್ರಿ
ಯಾಕ್ರಪ್ಪ ನನ್ನ ಕರಸಿದ್ರಿ । ಎಂದ್ಹೇಳಿ
ಹಂಗಂದು ಊಳಿಗ ನಡುದಾನು ॥

ಯಾಕು ಕರುಸಾನಿಲ್ಲ ಎಂತಕು ಕರುಸಾನಿಲ್ಲ
ಚಿರತೂರಿಗೆ ಹೋಗಿ ಬರಬೇಕು । ಎಂದ್ಹೇಳಿ
ವಾಲೆಯು ಕೈಯ್ಯಲ್ಲಿ ಕೊಡುತಾನೆ ॥

ಕೊಟ್ಟಂತ ವಾಲೆಯ ಕೈಯಲ್ಲಿ ಇಸಗಂಡು
ಕಣ್ಣಿಗೂ ಬಾಯಿಗೂ ಒತಿಗೊಂಡ । ಊಳಿಗ
ಒಡ್ಯಾನು ಒಂದೇ ಬರದಿಂದ ॥

ಒಂದೇ ಬರದಿಂದೋಡಿದ ಊಳಿಗ
ಜಗಮಲ್ಲರ ಮನೇಗೆ ಹೋಗಂತ । ಹೊತ್ನಲ್ಲಿ
ಚಿರತೂರ ಕಡೆಯಿಂದ ಬೋರಯ್ಯ ಬರುತಾನೆ ॥

ಬಾಯಲಿದ್ದ ಮಾತು ಬಾಯಲಿದ್ದಂಗೆ
ಹೋಗಿ ರಾಜಂಗ್ಳ ಇಳುದಾನು । ಊಳಿಗ
ಬಗ್ಗಿ ಸಲಾಮು ಒಡದಾನು ॥

ಕೊಟ್ಟಂತ ವಾಲಿಯ ಕೈಯಾಗೆ ಹಿಡಕಂಡು
ಬೋರಯ್ಯ ಏನೆಂದು ನುಡಿದಾನು । ಈಗಿನ್ನು
ಚಿರತೂರ ಕಡೆಯಿಂದ ಊಳಗ ಬಂದವ್ನೆ ॥

ಕೊಟ್ಟಂತ ವಾಲೆಯ ಕಯ್ಯಾಗೆ ಹಿಡಕೊಂಡು
ತಾಯಿ ದೊಡ್ಡಮ್ನ ಕರುದಾನು । ಬೋರಯ್ಯ
ಓಡಾನೆ ಒಂದೇ ಬರದಿಂದ ॥

ಓಡಾನೆ ಒಂದೇ ಬರದಿಂದ ಬೋರಯ್ಯ
ಇಂದಿಗೆಂಟು ದಿನಕ್ಕೆ ಆಯ್ತುವಾರ । ದೊಡ್ಡಮ್ಮ
ತೌರ್ನಿಂದ ಬುತ್ತಿ ಹೋಗಬೇಕು ॥

ಆವೆಲ್ಲ ಮಾತ ನಿಂತಗಂಡು ಕೇಳಿ
ಊಳಿಗದವ್ನ ಕರುದಾರೆ । ದೊಡ್ಡಮ್ಮ
ಬೇಕಾದ ಅಡಿಗೆಗೆ ಎಡೆ ಮಾಡಿ ॥

ಸುದ್ದಿ ತಂದ ಊಳಿಗದವನ್ಗೆ ತುಪ್ಪ
ಬಾಳೆಹಣ್ಣು ಉಣ್ಣಲು ಇಕ್ಕಿ । ದೊಡ್ಡಮ್ಮ
ಸಡಗರದಿ ಒಳಗೆ ನಡೆದಾರು ॥

ಬಚ್ಚುಲ ಮನೆಗೆ ನಡೆದಾರು ಗಳಿಗೇಲಿ
ಸಾನವನೀಗ ಮಾಡುತ್ತಾರೆ । ದೊಡ್ಡಮ್ಮ
ಮಾಳಿಗೆ ಒಳಗೆ ನಡೆದಾರು ॥

ಪಟ್ಟೇನುಟ್ಯಾರು ಬುಟ್ಟು ಮುತ್ತು ತೊಟ್ಯಾರು
ಕೈಯಲ್ಲಿ ಹಿಡಿದಾರೆ ಚೌಕಾವ । ದೊಡ್ಡಮ್ಮ
ಹೊಂಟಾರು ಒಂದೇ ಬರದಿಂದ ॥

ಹೋದಾರೆ ಹೊಲಕೆ ಗಳಿಗೇಲಿ ದೊಡ್ಡಮ್ಮ
ಅಲ್ಲಿದ್ದ ಹೆಣ್ಣಮಕ್ಳ ಕರದಂತ । ಹೊತ್ನಲ್ಲಿ
ಏನಂದು ಹೆಣಮಕ್ಕಳು ನುಡಿದಾರು ॥

ಎಂದು ಬಾರದಿದ್ದ ದೊಡ್ಡಮ್ಮ ಇಂದ್ಯಾಕೆ ಬಂದೀರಿ
ನೀವು ಬಂದ ಕಾರಣವ । ನಮುಗ್ಹೇಳಿ
ಹೀಗೆಂದು ಹೆಣಮಕ್ಳ ನುಡಿದಾರು ॥

ಕೇಳಿ ಕೇಳಿ ಹೆಣ್ಣುಮಕ್ಕಿ, ನೀವ್ ಕೇಳಿ ನನಮಾತು
ಇಂದಿಗೆಂಟು ದಿನಕೆ ಆಯ್ತು ವಾರ । ಹೆಣಮಕ್ಕ,
ನೀವು ಎಲ್ಲರೂ ಬರಬೇಕು ॥

ನೀವು ಎಲ್ಲರೂ ಬರಬೇಕು ಹೆಣಮಕ್ಕ,
ಚಿರತೂರಿಗೆ ಬಯಕೆ ಬುತ್ತಿ ಹೋಗಬೇಕು । ಎಂದ್ಹೇಳಿ
ಇಳ್ಳೀ ಕೊಟ್ಟಾರೆ ಗಳಿಗೇಲಿ ॥

ಆಟು ಮಾತ ಹೇಳ್ಯಾರೆ ದೊಡ್ಡಮ್ಮ
ಅಲ್ಲಿಂದ ಮುಂದೆ ಹೋಗಂತ । ಹೊತ್ನಲ್ಲಿ
ಏನೆಂದು ದೊಡ್ಡಮ್ಮ ನುಡುದಾರು ॥

ಹಾರೋರ ಕೇರಿರ ಹೆಣ್ಣಮಕ್ಕ, ನೀವ್ ಕೇಳಿ
ಇಂದಿಗೆಂಟು ದಿನಕೆ ಆಯ್ತು ವಾರ । ಹೆಣಮಕ್ಕ
ನೀವು ಒಂದ್ಯೆಡಾಳು ಬರಬೇಕು ॥

ನೀವು ಒಂದ್ಯೆಡಾಳು ಬರಬೇಕು ಹೆಣಮಕ್ಕೆ
ಚಿರತೂರಿಗೆ ಹೆಡ್ಗೆ ಬುತ್ತಿ ಹೋಗಬೇಕು । ಎಂದ್ಹೇಳಿ
ಇಳ್ಳಿ ಕೊಟ್ಟಾರು ಗಳಿಗೇಲಿ ॥

ಕುಂಬಾರ ಕೇರಿಯ ಚಿಕಹೆಣಮಕ್ಕ
ಇಂದಿಗೆಂಟು ದಿನಕೆ ಆಯ್ತು ವಾರ । ಹೆಣಮಕ್ಕ
ನೀವು ಒಂದ್ಯೆಡಾಳು ಬರಬೇಕು ॥

ನೀವು ಒಂದ್ಯೆಡಾಳು ಬರಬೇಕು ಹೆಣಮಕ್ಕೆ
ಚಿರತೂರಿಗೆ ಬುತ್ತಿಯ ಹೊಗಬೇಕು । ಎಂದ್ಹೇಳಿ
ಇಳ್ಳಿ ಕೊಟ್ಟಾರು ಗಳಿಗೇಲಿ ॥

ಇಳ್ಳಿ ಕೊಟ್ಟಾರು ಗಳಿಗೇಲಿ ದೊಡ್ಡಮ್ಮ
ಕೇರಿ ಕೇರಿಗೋಗಿ ಕರುದಂತ । ಹೊತ್ನಲ್ಲಿ
ಹೆಣು ಮಕ್ಕಳೆಲ್ಲಾ ಬರುತಾರಾ ॥

ಆಟ್ಟಕೆ ಚಾಚಾವ್ರೆ ಹತ್ತು ಕಾಲಿನೇಣಿ
ಹತ್ತು ಹೆಡಗೆ ಇಳಿಸ್ಯಾರು । ದೊಡ್ಡಮ್ಮ
ಏಳು ಕೊಡ ತುಪ್ಪ ಇಳಿಸಾರು॥

ಅಕ್ಕಿಯ ಕೇರೋಕೆ ಜನ ಬಿಟ್ಟಾರು
ಉದ್ದು ಬೇಳೆ ಒಡಿಯಾಕೆ । ದೊಡ್ಡಮ್ಮ
ಅಲ್ಲಿಗೇಳಾಳ ಕಳಿಸಾರು ॥

ಅಟ್ಟಾತು ನಿಂತು ಹೇಳಾತಾರೆ
ಊರ ಮುಂದ್ಲ ಕಟ್ಟೆಗೆ ನಡುದಾರು । ದೊಡ್ಡಮ್ಮ
ನಿಂದು ಮೂರು ಸೊಲ್ಲ ಕರುದಾರು ॥

ಊರು ಮುಂದ್ಲ ಕಟ್ಟೆಗೆ ನಡೆದ ದೊಡ್ಡಮ್ಮ
ನಿಂದು ಮೂರು ಸೊಲ್ಲು ಕರುದಂತ । ಹೊತ್ನಲ್ಲಿ
ಊಳಿಗ ಓಡೋಡಿ ಬರುತಾನೆ ॥

ಊಳಿಗ ಓಡೋಡಿ ಬಂದಾನೆ ಈಗಿನ್ನು
ಬಗ್ಗಿ ಸಲಾಮು ಹೊಡೆದಾನು । ದೊಡ್ಡಮ್ಗೆ
ಹಿಂಗೊಂದು ಮಾತ ಹೇಳಾನು ॥

ಕೊಡೋ ಹಣ ಕೊಟ್ಟೆದ್ರಿ ತರೋಹಣ ತಂದಿದ್ರಿ
ಯಾಕ್ರಮ್ಮ ನನ್ನ ಕರುಸಿದ್ರಿ । ಎಂಡ್ಗೇಳಿ
ಹಿಂಗೆಂದು ಊಳಿಗ ನುಡಿದಾನು ॥

ಯಾಕು ಕರುಸಾನಿಲ್ಲ ಎಂತಕು ಕರುಸಾನಿಲ್ಲ
ಚಿರತೂರಿಗೆ ಹೋಗಿ ಬರಬೇಕು । ಕುಳವಾಡಿ
ನೀ ಒಂದು ಗಳಿಗೇಲಿ ಬರಬೇಕು ॥

ಹಳ್ಳಿಗೆ ಕುಳ್ವಾದವರು ಒಡ್ಡುವಾಲಗದವರು
ಎಲ್ಲರ ಸೈಯ್ವಾನಿ ಬರಬೇಕು । ಕುಳವಾಡಿ
ಇಂದಿಗೆಂಟು ದಿನಕೆ ಅಯ್ತುವಾರ ॥

ದೊಡ್ಡಕಾಡುಗೋಗಿ ಹೆಗ್ಗು ನಾಂಟೆತಂದು
ಅಯ ಕಾದಕುಕ್ಕೆ ನೇದುಕೊಂಡು । ಸಾಯಂಕಾಲಕೆ
ದಿಬ್ಬಣ ಸೈಯ್ವಾನಿ ಬರಬೇಕು ॥

ಬಾಯಲಿದ್ದ ಮಾತು ಬಾಯಲಿದ್ದಂಗೆ
ಓಡ್ಯಾನು ಕುಳವಾಡಿ ಗಳಿಗೇಲಿ । ಈಗಿನ್ನು
ಕಾಡಿಗೋಗಿ ನಾಂಟೆ ಕಡುದಾನು ॥

ದೊಡ್ಡ ಕಾಡುಗೋಗಿ ವಾಂಟೆ ಕಡುತಂದು
ಆಯಕದೆರಡು ಕುಕ್ಕೆ ಹೆಣುದಾನು । ಕುಳುವಾಡಿ
ತಂದಾನು ಒಂದೇ ಗಳಿಗೇಲಿ ॥

ಹಳ್ಳಿಗೆ ಕುಳ್ವಾದವರೂ ಒಡ್ಡುವಾಲಗದೋರು
ನೀವು ಎಲ್ಲಾರೂ ಬರಬೇಕು । ಈಗಿನ್ನು
ಐಭೋಗದ ಕುಕ್ಕೆ ಹೊರಬೇಕು ॥

ದಿಬ್ಬಣ ಸೈಯ್ವಾಗಿ ಹೊರಟಾರೆ ಈಗಿನ್ನು
ಬೀಗರ ಮನೆಗೆ ನಡೆವಂತ । ಹೊತ್ನಲ್ಲಿ
ದೊಡ್ಡಮ್ಮನೇನೆಂದು ನುಡುದಾರು ॥

ಹೀಗೆಂದು ಹೇಳಿ ಆರತಕ್ಷಾತೆ ಮಡಗ್ಯಾರೆ
ಐಭೋಗದ ಕುಕ್ಕೆ ತಗೊಂಡಾರೆ । ದೊಡ್ಡಮ್ಮ
ಅದಕಾದ ಬೆಲೆಯ ಕೊಡುತಾರೆ ॥

ನೀವೊಂದೈದಾಳು ಬರಬೇಕು ಹೆಣುಮಕ್ಳೆ
ಐಭೋಗದ ಕುಕ್ಕೆ ತುಂಬಬೇಕು । ಈಗಿನ್ನು
ಹೊಂಟಬೇಕು ಕಾಲು ಗಳಿಗೇಲಿ ॥

ಕೇಳಿ ಕೇಳಿ ಹೆಣ್ಮಕ್ಳೆ ಇಲಿ ಕೇಳಿ ನನ ಮಾತ
ಎಲ್ಲರೂ ಸಯ್ವಾನಿ (ಸಹಾಯ) ಬರಬೇಕು । ಹೆಣ್ಮಕ್ಳೆ
ಬಟ್ಟೆ ಇಲ್ಲದೋರು ಬಟ್ಟೆ ಉಡಬನ್ನಿ ॥

ಸ್ಯಾಲೆನಿಲ್ಲದವರು ಸ್ಯಾಲೆಯ ಉಡುಬನ್ನಿ
ಬಣ್ಣಯಿಲ್ಲದವರು ಬಣ್ಣಾವ ತೊಡುಬನ್ನಿ । ಹೆಣ್ಮಕ್ಳೆ
ತಲೆಬಾಚಿ ಮಲ್ಲೀಗೆ ಮುಡಿಬನ್ನಿ ॥

ಎತ್ತಿನ ಕೋಡಿನಂಗೆ ಎಪ್ಪತ್ತು ಬಗೆಯ ಕಜ್ಜಾಯ
ತುಪ್ಪಾದಲ್ಲಾದ ಅತಿರಾಸೊ । ಕಜ್ಜಾಯ
ಐಭೋಗದ ಕುಕ್ಕೆ ತುಂಬಸಾರು ॥

ಹಾವಿನ ತಲೆಹಂಗೆ ಅರವತ್ತು ಬಗೆಯ ಸಜ್ಜಪ್ಪ
ಬೆಣ್ಣೇಲಿ ಬೆಂದ ಅತಿರಸೊ । ಸರ್ಜಪ್ಪ
ಆಗಾವೆ ಕಾಲ ಗಳಿಗೇಲಿ ॥

ಹೋದಂತ ಜನರೀಗೂಟ ಆಗಿ
ದಿಬ್ಬಣ ಸಯ್ಯಾಗಿ ಹೊರಟಾರೆ । ಈಗಿನ್ನು
ಚಿರತೂರಿಗೆ ಹೋಗಿ ಇಳುದಾರೆ ॥

ಬೀಗಾರ ಮನೆಯವ್ರು ಬಳಗ್ವೆಲ್ಲ ಬತ್ತಾದೆ
ದಿಬ್ಬಣ ಸಯ್ಯಾಗಿ ಬರುತಾರೆ । ಗಳಿಗೇಲಿ
ಕಾಲೀಗೆ ನೀರ ಕೊಡುತಾರೆ ॥

ಪಾದಾವ ತೊಳದಾರೆ ಪಡಗ ಬಚ್ಚಿಟ್ಟಾರು
ಮಡೀಲಂಗಾಲ ಗಡುಬಾರೆ । ಈಗಿನ್ನು
ಕೂರಲು ಹಾಕವ್ರೆ ಚಳೆಮಂಚ ॥

ಮಿಕ್ಕಿದವರಿಗೆಲ್ಲ ಮಂದಲಿಗೆ ಕೊಟ್ಟಾರು
ಕೂತವ್ರೆ ಎಲ್ಲ ಗಳಿಗೇಲಿ । ದೊಡ್ಡಮ್ಮ
ಏನೆಂದು ಈಗಿನ್ನು ನಡುದಾರು॥

ಕೇಳಿ ಕೇಳಿ ಈರಯ್ಯ ಇಲಿ ಕೇಳಿ ನಿನಮಾತು
ಬಾಳವ ಹೊತ್ತು ಗನವಾದೊ । ಈಗಿನ್ನು
ಕೆಲಸವಾಗಲಿ ಕಾಲಗಳಿಗೇಲಿ ॥

ಅಡಿಗೇನು ಆಗಲಿ ಅಗ್ಗಣಿ ಕಾಯಾಲಿ
ಶಾಸ್ತ್ರಗೋಳೀಗ ಆಗಬೇಕು । ಗಳಿಗೇಲಿ
ಮುಂದೆ ಕಾರ್‍ಯದಲಿ ತೊಡಗೀರಿ ॥

ಅಷ್ಟು ಮಾತು ಕಿಂದು ಕೇಳ್ಯಾರು
ನಾಗವೇಣಿಯನೀಗ ಕರತಂದ್ರು । ಹೆಣ್ಮಕ್ಳು
ಏನೆಂದು ಈಗ ಹೇಳುತಾರೆ ॥

ಮಾಳಿಗೆ ಒಳಗೆ ಮುತ್ತಿನ ಹಸೆ ಬರೆದು
ದಂಪತಿನೊಟ್ಗೆ ಕೂರಸ್ಯಾರು । ಈಗಿನ್ನು
ಶಾಸ್ತ್ರಗೊಳೀಗ ಆಗುತಾವೆ ॥

ಶಾಸ್ತ್ರಗೊಳೀಗ ಆಗಂತ ಹೊತ್ನಲ್ಲಿ
ಹೋದಂತ ಕಜ್ಜಾಯ ಎಡೆಮಾಡಿ । ಈಗಿನ್ನು
ಏನೆಂದು ದೊಡ್ಡಣ್ಣಗೌಡ ನುಡಿದಾನು ॥

ಎತ್ತಿನಕೋಡಿನಂಗೆ ಎಪ್ಪತ್ತು ಬಗೆಯ ಕಜ್ಜಾಯ
ಇನ್ನಷ್ಟ ತಂದು ಎಡೆಮಾಡಿ । ಎಂದ್ಹೇಳಿ
ಅತ್ತಿಗೇರ ಕೂಡೆ ಸರಸಾವೊ ॥

ಹಾವಿನ ತಲೆಹಂಗೆ ಆರವತ್ತು ಬಗೆಯ ಸರ್ಜಪ್ಪ
ಮತ್ತಸ್ಟು ತಂದು ಬಡಿಸೀರಿ । ದೊಡ್ಡಣ್ಣಗೌಡ
ಅತ್ತೀಗೇಯ ಕೂಡ ನಗಸಾರ ॥

ಅಷ್ಟು ಮಾತು ಹೇಳ್ಯಾರೆ ಈಗಿನ್ನು
ಶಾಸ್ತ್ರಾಗ್ವಾವೆ ಕಾಲ ಗಳಿಗೇಲಿ । ಈಗಿನ್ನು
ಇಬ್ರುನೊಟ್ಟಾಗಿ ಎಳಸಾರು॥

ಹೋದಂತ ಜನರೀಗೆ ಊಟಗೋಳು ಆಗ್ಯಾವೆ
ಏನೆಂದು ಈಗ ನುಡುದಾರು । ಕೆಂಚಮ್ಮ
ನಾನು ನಿಮ್ಮೊಡನೆ ಬರುತೀನಿ ॥

ಒಂಬತ್ತು ತಿಂಗಳಾದೊ ಒಂಬತ್ತು ದಿನವಾದೊ
ಒಂಬತ್ತು ತಾಸು ನಿನಗಾದೊ । ಕೆಂಚಕ್ಕ
ದಮ್ಮಯ್ಯ ಮಗಳೆ ಬರಬ್ಯಾಡ ॥

ದಮ್ಮಯ್ಯ ಮಗಳೆ ಬರಬ್ಯಾಡ
ನಡುದಾರಿ ಒಳಗೆ ಅಸಮಾನ । ತಾಯಮ್ಮ
ಅಸ್ಟು ಮಾತು ಈಗ ಹೇಳ್ಯಾಳೆ ॥

ತಾಯಿಯ ಮಾತು ಇಲ್ಲಿಗೆ ಸಯ್ಯೆಂದು
ಅತ್ತೀಗೆ ಸೆರಗ ಹಿಡಿದಾಳು । ಕೆಂಚವ್ವ
ದಮ್ಮಯ್ಯತ್ತೀಗೆ ಬರುತೀನಿ ॥

ಒಂಬತ್ತು ತಿಂಗಳಾದೊ ಒಂಬತ್ತು ದಿನವಾದೊ
ಒಂಬತ್ತು ತಾಸು ನಿನಗಾದೊ । ನಾದುನಿ
ದಮ್ಮಯ್ಯ ಕೆಂಚವ್ವ ಬರಬ್ಯಾಡ ॥

ಇಷ್ಟು ಮಾತನ್ನ ಹೇಳ್ಯಾಳೆ ಅತ್ತೀಗೆ
ಈ ಮಾತುಗಳ ಕೇಳ್ದಂತ । ಕೆಂಚವ್ವ
ಒಳಗೆ ತಾನೀಗ ನಡುದಾಳು॥

ಹೊತ್ತು ಹೊತ್ತೀಗೂ ಬ್ಯಾನೆ ಕತ್ತೀಲಿ ಕಡಿದಂಗೆ
ತಾಳಲಾರೆ ಮಾವಯ್ಯ ತಡಿಲಾರೆ । ಮಾವಯ್ಯ
ಮುಳ್ಳೂರ ಸೂಲಗಿತ್ತಿ ಕರಸಯ್ಯ ॥

ಯಾವಾರ ತಿಳ್ದಿ ಮಾವಯ್ನಗೆ ತಿಳಿಸಾಳು
ಮಾವಯ್ಯನೀಗ ಒಯ್ದಾಟ । ತುಯ್ದಾಟ
ಬರದಿಂದ ಎದ್ದು ನಿಂತಾನು ॥

ಮುಳ್ಳೂರ ಸೂಲಗಿತ್ತಿ ಬಂದುದ್ದೆ ಉಂಟಾದರೆ
ಲಾಡು ಉಂಬಳಿಯ ಕೊಡುತೇನೆ । ಮಾವಯ್ಯ
ವಪ್ಪಳ್ಳ ಮಾಳಿಗೆ ಬಿಟುಕೊಡುವೆ ॥

ವಾಲೆಗೆ ವಾಲಿ ಕೊಡುವೆ ವಾಲೆಗೆ ಮುತ್ತು ಕೊಡುವೆ
ಹಟ್ಟಿಯ ಒಳಗಿರುವ ಮಣಕೆಮ್ಮ । ಮಾವಯ್ಯ
ಚಿನ್ನಾದ ಜಾಬಾಕಿ ಬಿಟುಕೊಡುವೆ ॥

ಏರಿ ಏರಿದ ಬ್ಯಾನೆ ಈಟೀಲಿ ಇರಿದಂಗೆ
ನಿಂತಲ್ಲಿ ನಿಲಲಾರೆ ಕುಂತಲ್ಲಿ ಕೂರ್ಲಾರೆ । ಮಾವಯ್ಯ
ಹೊನ್ನೂರ ಸೂಲಗಿತ್ತಿ ಕರಸಯ್ಯ ॥

ಹೊನ್ನೂರ ಸೂಲಗಿತ್ತಿ ಬಂದುದೆ ಉಂಟಾದರೆ
ಬೂಂದಿಯ ಉಂಬಳಿಯ ಕೊಡುತೇನೆ । ಮಾವಯ್ಯ
ವಪ್ಪಳ್ಳ ಒಡವೇಯ ಬಿಚ್ಚಿಕೊಡುವೆ ॥

ಕೊಪ್ಪಿಗೆ ಕೊಪ್ಪ ಕೊಡುವೆ ಕೊಪ್ಪಿಗೆ ಮುತ್ತು ಕೊಡುವೆ
ಹಟ್ಟಿಯ ಒಳಗಿರುವ ಕೆಂದಾಲ । ಕರುವ
ಚಿನ್ನಾದ ಜಾಬಾಕಿ ನಾ ಕೊಡುವೆ ॥

ಹೊತ್ತು ಹೊತ್ತೀಗೂ ಬ್ಯಾನೆ ಕತ್ತೀಲಿ ಕಡಿದಂಗೆ
ತಾಳಲಾರೆ ಮಾವ ತಡಿಲಾರೆ । ಮಾವಯ್ಯ
ಮುತ್ತೂರ ಸೂಲಗಿತ್ತಿ ಕರಸರಯ್ಯ ॥

ಮುತ್ತೂರ ಸೂಲಗಿತ್ತಿ ಬಂದುದ್ದೆ ಉಂಟಾದ್ರೆ
ತುಪ್ಪ ಕಜ್ಜಾಯ ಕೊಡುತ್ತೇನೆ । ಮಾವಯ್ಯ
ಬೇಕಾದ್ದ ಒಡವೆಯ ಬಿಚ್ಚುಕೊಡುವೆ ॥

ಪಾಲಿಗೆ ಪಾಲೆ ಕೊಡುವೆ ಮುತ್ತು ಮಾಣಿಕ ಕೊಡುವೆ
ಕಪ್ಪಾನೆ ಬಣ್ಣದ ಕರಿವಸವ । ಮಾವಯ್ಯ
ಹೇಳ್ದಂಗೆ ನಾನು ಬಿಚ್ಚಿಕೊಡುವೆ ॥

ಆದೂಡ್ನೆಲ್ಲಾ ಕೇಳಾನೆ ಯಜಮಾನ ಮಾವಯ್ಯ
ಹೊಂಟಾನು ಒಂದೆ ಬರದಿಂದ । ಮಾವಯ್ಯ
ಏನೆಂದು ಈಗ ನಡುದಾನು ॥

ಕೇಳಿ ಕೇಳಿ ಕೆಂಚಮ್ಮ ಇಲಿ ಕೇಳಿ ನನಮಾತ
ಆರ್ದಗಳಿಗೇಲಿ ಕಾಲಗಳಿಗೇಲಿ । ಅಗ್ಗಣಿಕಾಯ
ಮುತ್ತಿ ಮೊರವು ಮುಂಡ್ಯಾಗ್ಲಿ ॥

ಆ ಮಾತ ಹೇಳ್ದಾ ಯಜಮಾನ ಮಾವಯ್ಯ
ಬಚ್ಚಲ ಮನೆಗಾಗ ನಡೆದಾನು । ಈಗಿನ್ನು
ಸಾನ ಜಪವನ್ನೆ ಮಾಡ್ಯಾನು ॥

ಅಂಗೀನೆ ತೊಟ್ಟಾನು ಕಾಸೇನೆ ಉಟ್ಟವನೆ
ಬಟಮುತ್ತು ತೊಟ್ಟೋನೆ । ಮಾವಯ್ಯ
ಮಾಳಗೆ ಒಳಗೆ ನಡುದಾನು ॥

ಮಾಳಿಗೆ ಒಳಗೆ ನಡದಂತ ಯಜಮಾನ ಮಾವ
ಹಾಲು ಅನ್ನಾವ ಸೇವಿಸ್ಯಾನು । ಈಗಿನ್ನು
ಆನೆ ಸಾಲಿಗೆ ನಡೆದಾನು॥

ಆಯುಕ್ಕೊಂಡಾನೆ ಹೊಡಕಂಡು ಮಾವಯ್ಯ
ಆನಿಗೆ ಜೀನ ಬಿಗುದಾನೆ । ಈಗಿನ್ನು
ಹೊಂಟಾನು ಒಂದೆ ಬರದಿಂದ ॥

ಜಾಣ ಬಾರಿಕೋಲು ಆನೆ ಮೇಲೇರಿಕೊಂಡು
ಹೊಲ್ಟಾನೆ ಒಂದೆ ಬರದಿಂದೋ । ಮಾವಯ್ಯ
ಮುಳ್ಳೂರು ಸೂಲಗಿತ್ತಿ ಮನೆಗೋದ ॥

ಸೂಳೆ ಸೋಲಾಡಿಯ ಕರುದಾನೆ
ಸೂಳೆ ಸೋಲಾಡಿಯ ಏನೆಂದು । ಕರುದಾನೆ
ತಾಯಿ ಮಕ್ಕಳ ಪಾರುಮಾಡೊ ॥

ಡಾಸಾದ ಮನೆಯಲ್ಲಿ ದರ್ವಾದ ಮನೆಯಲ್ಲಿ
ತಾಯಿ ಮಕ್ಕಳ ಪಾರುಮಾಡೊ । ಪಡಿರಂತೆ
ಸೂಲಗಿತ್ತಿ ಸಂಗವ್ನ ಮನೆಯಲ್ಲಿ ॥

ಇಷ್ಟ ಮಾತ ಹೇಳ್ಯಾನೆ ಯಜಮಾನಪ್ಪ
ಆ ಮಾತ್ನ ನಿಂದು ಕೇಳ್ಯಾಳೆ । ಸಂಗವ್ವ
ಏನೆಂದು ಈಗ ನುಡುಬಾಳು ॥

ಪಾದಾವ ತೊಳೆದಾರೆ ಪಡಗ ಬಿಚ್ಚಿಟ್ಯಾರೆ
ಮಡೀಂಗಾಲ ಗಡುಚಾರೆ । ಈಗಿನ್ನು
ಚಿನ್ನಾದ ಮಂಚ ಅಣಿಮಾಡಿ ॥

ಚಿನ್ನಾದ ಮಂಚ ಅಣಿಮಾಡಿ ಗೌಡೇರು
ಕುಂದ್ರುಲು ಹಾಕಿದರೆ ಚೆಳಮಂಚ । ಈಗಿನ್ನು
ಚಿನ್ನಾದ ಗಿಂಡೀಲಿ ನೊರೆ ಹಾಲು ॥

ಕೊಟ್ಟಂತ ಹಾಲನ್ನು ಕೈಯಲಿ ಹಿಡಕಂಡು
ಕುಡಿದಾರು ಒಂದರಗಳಿಗೇಲಿ । ಮಾವಯ್ಯ
ಏನೆಂದು ಈಗ ನುಡಿದಾರು ॥

ಎಂದೂ ಬಾರದ ಯಜಮಾನ್ರು ಇಂದು ಬಂದವರೆ
ದಾಯಂಗದ ಮಣೆಯ ತಗಬನ್ನಿ । ಗೌಡಾರೇ
ಜೊತೆಯಾಗೆ ಅರಗಳಿಗೆ ಆಡ್ಬೇಕು ॥

ಈ ಮಾತ ಕೇಳಿ ಯಜಮಾನಗೌಡ್ರ ಹೇಳ್ಯಾರೆ
ದಾಯಂಗ ಆಡಕೆ ಹೊತ್ತಿಲ್ಲ । ಯ್ಯಾಳಿಲ್ಲ
ಮನೆಯಲ್ಲಿ ಸೊಸೆಮಗ್ಗ ಅಸವಾನ ॥

ಕೇಳಿ ಕೇಳಿ ಸಂಗಪ್ಪ ಇಲಿ ಕೇಳಿ ನನಮಾತ
ಜಂಬಾರ ಬಾಳೆ ಮನೆಯಲ್ಲಿ । ಸಂಗವ್ವ
ನೀವು ಮನೆ ತಂಕ ಬರಬೇಕು ॥

ಆಡಿದ ಮಾತು ಕೇಳ್ಯಾಳೆ ಸಂಗವ್ವ
ದಾಯಂಗದ ಮಣಿಯ ಜಡುದಾಳೆ । ಸಂಗವ್ವ
ಬರುವತ್ತಿಗೆ ಮುಂದೆ ನಡಿರಯ್ಯ ॥

ಜಾಣ ಬಾರಿ ಕೋಲ ಆನೆಮೇಲೇರಿಕೊಂಡು
ಹೋದಾನೆ ಪಟ್ಟಣದ ಒಳಗೆಲ್ಲ । ಯಜಮಾನಗೌಡರು
ಸೂಳೆ ಸೋಲಾಡಿಯ ಕರುದಾನು ॥

(ಮೂರು ಜನ ಸೂಲಗಿತ್ತಿಯರನ್ನು ಕರೆಯಲು ಹೋದಾಗ ಒಂದೇ ತೆರನಾದ ಕೆಲವು ತ್ರಿಪದಿಗಳನ್ನು ಪುನರಾವರ್ತನೆಯಾಗುವುದರಿಂದ ಸಂಗವ್ವನ ಸಂದರ್ಭವನ್ನು ಮಾತ್ರ ಉಳಿಸಿರುತ್ತೇನೆ. ಆದರಂತೆ ಇನ್ನಿಬ್ಬರನ್ನು ಕರೆಯುವಾಗಲೂ ಕೂಡ ಈ ತ್ರಿಪದಿಗಳನ್ನು ಹಾಡಲೇಬೇಕು ಇದು ಕರ್ತವ್ಯ)

ಆವೇಕೆ ಸಂಗವ್ವ ಇತ್ತಾಗಿ
ಬಚ್ಚಲ ಮನೆಗೆ ನಡೆದಾಳು । ಸಂಗವ್ವ
ಸಾನವ ಮಾಡ್ಯಾಳು ಅರಗಳಿಗೇಲಿ ॥

ಸಾನ ಮಾಡಿಬಂದ ಸಂಗವ್ವ
ಕರಿದು ಬಟ್ಟೆ ಬಿಳಿದ ಉಡುತಾಳೆ । ಈಗಿನ್ನು
ಎಡದ ಕೈಯಾಲಿ ಕುಡುಗೋಲು ॥

ಬಲದ ಕೈಯಲಿ ಚಾಕುವ ಹಿಡುದಾಳೇ
ಹೊಂಟಾಳೆ ಒಂದೇ ಬರದಿಂದ । ಸಂಗವ್ವ
ಮೂರು ದಾರಿ ಕೂಡಲ್ಲಿ ನಿಂತಾಳು ॥

ಇಷ್ಟೆಲ್ಲಾ ಆಗೋತ್ಲೆ ಒಂದೇ ಜಾಗಕ್ಕೆ
ಮೂರು ಜನ ಸೂಲಗಿತ್ತಿ । ಸಂಗವ್ವದೀರು
ಸಾಯವಾಗಿ ಬರುತಾರೆ ಗೌಡರ ಮನಿಗೆ ॥

ಮುಳ್ಳೂರು ಸೂಲಗಿತ್ತಿ ಹೊನ್ನೂರು ಸೂಲಗಿತ್ತಿ
ಮುತ್ತೂರು ಸೂಲಗಿತ್ತಿ ಸಯವಾಗಿ । ಬಂದವರೆ
ಏನೆಂದು ಈಗ ನುಡುದಾರೆ ॥

ಕೇಳಿ ಕೇಳಿ ಹೆಣ್ಮಕ್ಕೆ ಕೇಳಿ ನಮ ಮಾತ
ಬಚ್ಚಲ ಮನಿಗೆ ಕೆಂಚನ್ನ ಕರೆದೊಯ್ರಿ । ಎಂದೇಳಿ
ಮಣೆ ಮೇಲೆ ಮಣೆಯ ಇಡುತಾರೆ ॥

ಚಿನ್ನದ ಹರಿನೆಯ್ಕ್ಕ ಕಟ್ಟ್ಯಾರೆ ಗಳಿಗೇಲಿ
ತುಪ್ಪ ಮಂತರವ ಹಿಡಿದಾರೆ ಮುವ್ವಾರು
ಏನೆಂದು ಈಗ ನುಡಿದಾರು ॥

ಮುಳ್ಳೂರು ಹೊನ್ನೂರು ಸೂಲಗಿತ್ತಿ ಹೇಳ್ಯಾರೆ
ನಿಂತು ಹಿಡಿಯಮ್ಮ ಹರಿನೆಯ್ಕೆ । ಈಗಿನ್ನು
ಕಂದಯ್ಯ ಹುಟುತಾನೆ ಗಳಿಗೇಲಿ ॥

ಮುತ್ತೂರು ಸೂಲಗಿತ್ತಿ ಕುತಗೊಂಡು ಹೇಳ್ಯಾಳೆ
ಕೂತು ಹಿಡಿಯಮ್ಮ ಹರಿನೆಯ್ಕೆ । ಈಗಿನ್ನು
ಬಾಲಯ್ಯ ಹುಟುತಾನೆ ಗಳಿಗೇಲಿ ॥

ಬಾಯಲಿದ್ದ ಮಾತು ಬಾಯಲಿದ್ದಂಗೆ
ಹುಟ್ಯಾನೆ ಕಂದಯ್ಯ ಗಳಿಗೇಲಿ । ಈಗಿನ್ನು
ಕಂದಯ್ಯಗೆ ಸಾನ ಮಾಡಿಸಾರೆ ॥

ಕಂದಯ್ಯಗೆ ಸಾನ ಮಾಡಿಸಂತ ಹೊತ್ನಲ್ಲಿ
ಕೊರಳಾಗಿದ್ದ ಪದಕ ಎಳೆದಾಳೆ । ಮೂರ್ಪಾಲುಮಾಡಿ
ಮೂರು ಜನಕು ಈಗ ಕೊಡುತಾಳೆ ॥

ವಾಲೆಗೆ ವಾಲೆ ಕೊಡಿ ವಾಲೆಗೆ ಮುತ್ತು ಕೊಡಿ
ಹಟ್ಟಿಯ ಒಳಗಿರುವ ಮಣಕೆಮ್ಮಗೆ । ಮಾವಯ್ಯ
ಚಿನ್ನಾದ ಜಾಬಾಕಿ ಹೊಡಕೊಡಿ ॥

ಚಿನ್ನದ ಜಾಬಾಕಿ ಹೊಡಿಸೋ ಹೊತ್ನಲ್ಲಿ
ಕೆಂಚಮ್ಮಗೆ ಸಾನ ಆಗಾವೆ । ಈಗಿನ್ನು
ತಿಂಗಾಳ ಮುಟ್ಟು ಆಗಾದೆ ॥

ಕೇಳಿ ಕೇಳಿ ಮಾವಯ್ಯ ನೀವ್ ಕೇಳಿ ನನಮಾತ
ಹೊಳೆ ಮುಟ್ಟು ಹೋಗಲು ಬೇಕು । ನಾನು
ಹೊಳೇಲಿ ಮಿಂದು ಬರಬೇಕು ॥

ಕೇಳೆ ಕೇಳೆ ಕೆಂಚಮ್ಮ ನೀ ಕೇಳೆ ನನಮಾತ
ಇಲ್ಲಿ ಮಿಂದೊಗೆಯ ಎಂದೇಳ್ದ । ಯಜಮಾನಗೌಡ
ಕೂಲಿಕೊಟ್ಟು ಬಗೆಸೇನು ॥

ಇಲ್ಲಿ ತೊಳಗಿದರೆ ಮತ್ತ್ರೇನು ಕಂಡಾರು
ರಾಜ್ಯವಾಳುವರ ಸೊಸೆ ಮುದ್ದು । ಬರುತಾಳಂದು
ದೇಸದೋರೆಲ್ಲ ತಿಳಿದಾರೆ ॥

ಈಟು ಮಾತು ಹೇಳಿದರು ಕೇಳೊಳು ಕೆಂಚವ್ವ
ಏನೆಂದು ಈಗ ನುಡುದಾಳೆ । ಕಡುಚೆಲ್ವೆ
ನಾನು ಹೊಳೆತನಕ ಹೋಗಬೇಕು ॥

ಚಿಗುರೆಲೆ ಕಳಿಯಡಕೆ ಹೊಂನನೂಲು ಜೊತೆಗೂಡಿ
ಹೊನ್ನಾಹೂವಿನ ದಂಡೆ ಹದಿನೆಂಟು । ತಕ್ಕೊಂಡು
ಅರಸಿನ ಕುಂಕುಮ ಸೈವಾಗಿ ॥

ಎಮ್ಮೆಯ ಕಾಯೋರೆ ಬಸ್ತಿ ಬಾಗಿ ತೆಗೆಯೋರೆ
ನೀವಂದ್ಯೆದಾಳು ಬರಬೇಕು । ಎಣಮುಕ್ಕೀರ
ನಾನು ಹೊಳೆತನಕ ಹೋಗಬೇಕು ॥

ಹೇಳಿದ ಮಾತ್ನಂತೆ ಹುಸಿಯಿಲ್ದೆ ಕೆಂಚಮ್ಮ
ಹೊಂಬಾಳೆ ಒಂದೇ ಬರದಿಂದ । ಹತ್ತಿರಕ್ಕೆ
ಹೋಗಾಳು ಈಗ ಹೊಳೆ ತನಕ ॥

ಒಂದು ತಂಬೀಗೆ ಎರಡು ತಂಬೀಗೆ
ಮೂರು ತಂಬೀಗೆ ನೀರು ಮಗುದಾಳೆ । ಗಂಗಮ್ಮ
ಈಗ ಏನೆಂದು ನುಡುದಾಳೆ ॥

ನಾನು ಕಂದಾನ ತಾಯಿ ನೀನು ಬಾಲಾನ ತಾಯಿ
ಕೇಳೀಗ ನೀನು ನನ ಮಾತ । ಕೆಂಚವ್ವ
ಬಂದೇನು ನಿನ ಒಡನೀಗ ॥

ಆ ಮಾತ್ನ ಹೇಳುವಂತ ಹೊತ್ನಲ್ಲಿ
ದೇವಗನ್ನೆರು ಸೆರಗಾ ಹಿಡುದಾರೆ । ಕೆಂಚಮ್ಮ
ನೀನು ನಮ್ಮೊಡನೆ ಬರಬೇಕು

ನಿನ್ನಾನೆ ಮಾವನು ಕೆರೆಕಟ್ಟಿಸುವಾಗ
ಕೊಟ್ಟನೆಂದಿದ್ದ ಹಿರಿ ಸೊಸೆಯ ಕೆಂಚಮ್ಮ । ನೀನೀಗ
ಬರಬೇಕು ನಮ್ಮ ಸಂಗಡವೀಗ ॥

ಕಟ್ಟಿ ಕಲ್ಲು ಜಾರ್‍ಯಾವೆ ಕಟ್ಟಿರೊ ನೀರು ಆರ್‍ಯಾವೆ
ಬಟ್ಟೋಳಿಳಿದೊಟೆ ಉರಿದಾವೆ । ಕೆಂಚಮ್ಮ
ನೀನು ನಮ್ಮೊಡನೆ ಬರಬೇಕು ॥

ಈಟೊನ ಮಾತನ್ನ ಕೇಳ್ಯಾಳೆ ಕೆಂಚವ್ವ
ನಮ್ಮ ಸಿಂತುರುಗಿ ನಡೆದಾಳೆ । ಗಂಬೀರಗಿತ್ತಿ
ಅತ್ತೆಯವರ ಬಳಿಗೆ ನಡೆದಾಳೆ ॥

ಏರಿ ಏರಿಗೆ ಏರ್‍ಯಾದೆವರು ನೀರು ಆರ್‍ಯಾವೆ
ಬಟ್ಟೆಳ್ಳೆ ಹೂವೆ ಉದುರಾವೆ । ಅತ್ತೆಮ್ಮ
ಎದ್ದೇಳಿ ಅತ್ತೆ ಬೆಳಗಾದೊ ॥

ಎದ್ದೇಳಿ ದೊರೆಯೆ ಬೆಳಗಾದೊ ಇನ್ನೀಗ
ಬಟ್ಟಲ್ಯಾಲಕ್ಕಿ ಉದುರ್‍ಯಾವೆ ರಾಯೇರ
ನಿಮ್ಮೊಳಗ ನಿದ್ದೆ ತಿಳಿದ್ದೇಳಿ ॥

ನಿಮ್ಮೊಳಗ ನಿದ್ದೆ ತಿಳಿದ್ದೇಳಿ ರಾಯರೆಂದು
ಈಟೊಮಾತ ಹೇಳ್ಯಾಳೆ । ಕೆಂಚಮ್ಮ
ತಲೆಬಾಗಿಲ ಒಳಗೆ ನಿಂದಾಳೆ ॥

ಮೈ ಮುರಿದು ಎದ್ದಾನೆ ರಾಯ ಈಗಿನ್ನು
ಬಗ್ಗಿ ನೋಡಿದನೆ ಮಡದೀಯ । ದೊಡ್ಡೆಗೌಡ
ಕಂದಯ್ಯ ಅಳುತಾನೆ ಒಳಗೋಗೆ ॥

ಅತ್ತಾರೆ ಅಳುವಾಲಿ ಕರುದಾರೆ ಕರಿಯಾಲಿ
ಕೊಡಬೇಕು ಇಳ್ಯಾವ ಅರಗಳಿಗೇಲಿ । ಎಂದಂತ
ಕೆಂಚಮ್ಮನೀಗ ನಡುದಾಳು ॥

ಈಟೊಮಾತ ಕೇಳ್ದಂತ ಹೊತ್ನಲ್ಲಿ
ಬಗ್ಗಿ ನೋಡಿದಾನೆ ಮಡದೀಯ ದೊಡ್ಡೆಗೌಡ
ಏನೆಂದು ಈಗ ನುಡಿದಾನು ॥

ಎಂದಾರು ಬರುವಾಗ ಬಂಡೇಯ ಜೆನ್ನಲ್ಲಿ
ಇಂದ್ಯಾಕೆ ನಿನ ಮೊಕ ಬಾಡಿ । ಕೆಂಚವ್ವ
ನಿನಗ್ಯಾರೆ ಕುಂದು ನುಡಿದೋರು ।

ನಿಮ್ಮಂತ ರಾಯೋರೆ ಇರುವಾಗ ನನಗೆ
ಮತ್ಯಾರು ಕುಂಡಾ ನುಡಿಯೋರು । ಎಂದು
ಕೆಂಚಮ್ಮನೀಗ ನುಡಿದಾಳು ॥

ನಾರಿ ಕಂದನ ಹಡೆದು ನಾಳಿಗೆ ತಿಂಗಳಾದೊ
ನಾರಿ ನನ ಮಂಚಕೆ ದಯಮಾಡೆ । ಎಂದು
ದೊಡ್ಡಿಗೌಡ ನುಡಿದ್ದಾನು ॥

ಆ ಹೆಚ್ಚು ಮಾತ ಈಗ ಆಡಬೇಡಿ ರಾಯೋರೆ
ತಪ್ಪಿದ್ರೆ ನಂದೊಂದು ತಬಸಯ್ಯೊ । ರಾಯರೆ
ತಲ್ಯಾಡೋಲಾರೆ ಕಡಲಾಗೊ ॥

ಅತ್ತುವರವ ಕೊಟ್ಟ ಕೆರೆಬಾವಿ ಕಟಿಸುವಾಗ
ನನಕೊಟ್ಟೇನೆಂದಿದ್ದರಂತೆ ಮನದಲ್ಲಿ । ಮಾವಯ್ಯ
ದೇವಗನ್ನೇರು ಸೆರಗ ಹಿಡಿದಾರೆ ॥

ಈಟುಮಾತ ಹೇಳ್ಯಾಳೆ ರಾಯರಿಗೆ
ಹೊಂಟಾಳೆ ಒಂದೇ ಬರದಿಂದೋ । ಕೆಂಚಮ್ಮ
ಏನೆಂದು ಈಗ ನುಡಿದಾಳೆ ॥

ಎಮ್ಮ ಕಾಯೊರು ಹೆಣ್ಮಕ್ಳು ಆರು
ಬಸ್ತಿ ಬಾಗಿಲ ತೆಗೆಯೋರು । ಹೆಣ್ಮಕ್ಳು
ನೀವೊಂದಾರಾಳು ಬರಬೇಕು ॥

ಈಟೂಮಾತ ಹೇಳ್ಯಾರೆ
ಹಟ್ಟಿಯ ಒಳಗೆ ನಡೆದಾಳೆ । ಕೆಂಚಮ್ಮ
ಏನೆಂದು ಈಗ ನುಡಿದಾಳು ॥

ನೀನು ಕೋಣನ ತಾಯಿ ನಾನು ಬಾಲನ ತಾಯಿ
ಬಂದೀಯ ಕೌಲಿನನ್ನೊಡನೆ । ಎಂದ್ಹೇಳಿ
ಕೌಲಿ ಇದ್ದಡೀಗೆ ನಡುದಾಳು ॥

ನಾನು ಕರುವಿನ ತಾಯಿ ನೀನು ಬಾಲನ ತಾಯಿ
ಬಂದೇನು ಕಾಣಮ್ಮ ನಿನ್ನೊಡನೆ । ಎಂದೀಗ
ಕೌಲಿ ಕೆಂಚಮ್ಮಗೆ ನುಡಿದಾಳು ॥

ಈಟೂನ ಮಾತನ ಕೇಳಿದಂತ ಕೆಂಚಮ್ಮ
ಏನೆಂದು ಈಗ ನುಡುದಾಳೆ । ಇನ್ನೀಗ
ತೌರಿಗೊಂದ್ವಾಲೆ ಬರೀರಯ್ಯ ॥

ಸುಖದಾನೆ ಮಾತಲ್ಲ ಸಾವಿನ ಮಾತಲ್ಲ
ತೌರಿಗೆ ವಾಲೆ ಬರೆಯಾಕೆ । ಕೆಂಚಮ್ಮ
ಏನೆಂದು ವಾಲೆ ಬರೆಯಾಲಿ ॥

ಸುಕದ ವಾಲೆ ಬ್ಯಾಡ ಸಾವಿನ ವಾಲೆ ಬ್ಯಾಡ
ಕೆಂಚಮ್ಮ ಗಂಗೆಯ ತಡಿಗೆ ಹೊಂಟಾಳೆ । ಎಂದೀಗ
ತೌರಿಗೊಂದ್ವಾಲೆ ಬರೀರಪ್ಪೊ ॥

ಕೆಂಚಮ್ಮ ಕಂದನ ಹಡೆದು ನಾಳಿಗೆ ತಿಂಗಳಾದೊ
ತೊಟ್ಟಿಲ ಸೈಯ್ವಾಗಿ ಗಂಗೆ ತಡಿಗೆ । ಹೊಂಟಾಳೆಂದು
ತೌರಿಗೊಂದ್ವಾಲೆ ಬರೀರಪ್ಪೊ ॥

ಈಟೂನ ಮಾತನ್ನ ನಿಂದು ಕೇಳ್ಯಾನೆ
ಏನೆಂದು ವಾಲೆ ಬರೆದಾನು । ನಲ್ಲಯ್ಯ
ನೀವು ಎಲ್ಲರೂ ಬರಬೇಕು ॥

ಕೇಳಿ ಕೇಳಿ ಅತ್ತೆಮ್ಮ ಇಲಿಕೇಳಿ ನನಮಾತ
ಇಂದು ನಮ್ಮನೇಲಿ ತೊಟ್ಟೀಲು । ಎಂದೀಗ
ವಾಲೆಯ ಕಳೀಸೀರಿ ಗಳಿಗೇಲಿ

ಊಳಿಗ ಬಂದಾನು ವಾಲೆಯೆತುಗೊಂಡಾನು
ಓಡೋಡಿ ಊಳಿಗ ನಡುದಾನು । ಇನ್ನೀಗ
ಚಿರತೂರ ಕಡೆ ನಡೆದಾನು

ಚಿರತೂರಿನ ಕಡೆಯಿಂದ ಊಳಿಗ ಬಂದಾನೆ
ಬಾಗಿ ಸಲಾಮು ಹೊಡುದಾನು । ಈರಯ್ಯಗು
ವಾಲೆ ಕೊಟ್ಟಾನು ಗಳಿಗೇಲಿ ॥

ಕೊಟ್ಟಂತ ವಾಲೆಯ ಕೈಯೊಡ್ಡಿ ಇಸಗಂಡ
ಮುಂದಲ ಪಂತಿ ಓದ್ಯಾನೆ । ಈರಯ್ಯ
ಸೊಂಟ ಮುರದಲ್ಲೆ ಬಿದ್ದಾನು ॥

ಅಲ್ಲಲ್ಲಿ ತಪ್ಪಾವೆ ಗುಳ್ಳೆಯ ಹೆರಕೋರು
ಕಂಡೋದ್ದೊಂದ ಹಾವ ಹೊಡೆಯೋರು । ಚಿರತೂರ
ಕೆಟ್ಟೋರಿಗೆಣ್ಣ ಕೊಡಬೇಡಿ ॥

ಕೆಟ್ಟೋರಿಗೆಣ್ಣ ಕೊಡ್ಬೇಡಂದ್ರೂ ಕೊಟ್ಟೆ
ಕಾರ್ಯಾಣಲ್ಲದ ಜಲುವೆಂದು । ಕೆಂಚವ್ವ
ನೀರಿಗೆ ಬಲಿಯ ಕೊಡುತಾರೆ ॥

ಕೆಟ್ಟೋರಿಗೆಣ್ಣ ಕೊಡ್ಬೇಡಂದ್ರು ಕೊಟ್ಟೆ
ಕಾರಣಲ್ಲದೆ ಚೆಲುವೆ । ಕೆಂಚವ್ವ
ನೀರಿಗಾವುತಿಯ ಕೊಡುತಾರೆ ॥

ನನ್ನ ತೌರೂರು ಜನ ಬಂದ್ದಡ್ಡೆ ಉಂಟಾದ್ರೆ
ಗಂಗೆಗೋಗೋದ ತಡದಾರು । ಎಂದ್ಹೇಳಿ
ತೊಟ್ಟಿಲು ಸೈಯ್ಯಾಗಿ ಇಳುತಾಳೆ ॥

ತೊಟ್ಟಿಲು ಸೈಯ್ಯಾಗಿ ಇಳಿವಂತ ಹೊತ್ನಲ್ಲಿ
ಹೆಂಡ್ತಿ ತೌರೂರ ನೆನಸ್ಯಾನು । ಕೆಂಚಮ್ನರಾಯ
ಏನೆಂದು ಈಗ ನುಡುದಾನೆ ॥

ಹಬ್ಬಂದ್ರೆ ಕರೆಸೋರು ಸುಗ್ಗೆಂದ್ರು ಕರೆಸೋರು
ಇಬ್ಬಾರನು ಕರೆಸಿ ಇಕ್ಕಿ ಕಳುಸೋರು । ಅತ್ತೆಮಾವನ
ನಾನೆಲ್ಲಿ ಮತ್ತೆ ಪಡೆಯಾಲಿ ॥

ಹಬ್ಬಾಕೆ ಸುಗ್ಗೀಗೆ ಕರೆಸ್ವಂತ ಬಾವಾನ
ನಿನ್ನೆಲ್ಲಿ ಬಿತ್ತಿ ಬೆಳೆಯಾಲಿ । ಇಂದೀಗೆ
ಹಾದಿಗೆ ಹರುದಾವೊ ಹೆಡೆಮುಳ್ಳು ॥

ನನ್ನಂತ ಕೈಯೋಳು ನನ್ನಂತ ಕಾಲೋಳು
ನನ್ನಂತ ಮುದ್ದು ಮೊಕದೋಳು । ರಾಯೋರೆ
ನನ ತಂಗಿಯ ಧಾರೆ ಎರೆಬೈದು ॥

ನಿನ ಮುಡುದ ಮ್ಯಾಲೆ ಮಗುಚಿ ಮುಡಿಯೊದೆಂಗೆ
ನಿನಮ್ಯಾಗಳ ಸವತಿ ತರೊದೆಂಗೆ । ಎಂದೀಗ
ಪತಿರಾಯ ನೊಂದು ನುಡುದಾನು ॥

ನನ್ನ ಮುಡುದುವಮ್ಯಾಲೆ ಮಗುಚಿ ಮುಡಿಬೋದು
ನನ ತಂಗಿಯ ಧಾರೆಯ ಎರಕೊಳ್ಳಿ । ರಾಯರೆ
ಎಂದು ಕೆಂಚಮ್ಮ ನೀಗ ನುಡಿದಾಳು ॥

ಹಣ್ಣುಕಾಯನೆಲ್ಲ ಅರಿಸಿನ ಕುಂಕುಮೆಲ್ಲ
ಹೂವ ಸಿಂಗಾರ ತೆರಿಗೆದಾಳೆ । ಕೆಂಚಮ್ಮ
ತೊಟ್ಟೆಲ ಸೈವಾಗಿ ಹೊರಟಾಳೆ ॥

ತೊಟ್ಟೀಲ ಸೈವಾಗಿ ಹೊಂಟಾಳೆ ಕೆಂಚಮ್ಮ
ಗಂಗೆಯ ಒಳಗೆ ಇಳಿವಂತ । ಹೊತ್ನಲ್ಲಿ
ಜನರೆಲ್ಲ ಬಂದು ನೆರುದಾರೆ ॥

ಅತ್ತೀಯ ಬೇರು ಕಿತ್ತಿತ್ತೆದ್ದು ಬಂದಂಗೆ
ಬಂದಾರೆ ಕೆಂಚಮ್ನ ಬಳಗೆಲ್ಲ । ಮುಂದಿನುಳದೋರು
ಮುಂದಿಗಾಕೋಗೋದ ತಡೆದಾರೊ ॥

ಚಿಕ್ಕಪ್ಪ ದೊಡ್ಡಪ್ಪ ಅಣ್ಣಾದೀರ ತಮ್ಮಾದೀರ
ಮಕ್ಕಳು ಜ್ವಾಕೆ ಮನೆಜ್ವಾಕೆ । ಎಂದ್ಹೇಳಿ
ಕೆಂಚಮ್ಮ ಕೆರೆಗೀಗ ಮುಳುಗ್ಯಾಳೆ ॥

ಗಂಗಾದೇವೆ ದೇವಗನ್ನೆರು ಮುಂದೀಗ ಬಂದಾರು
ಬಾಚಿ ತಬ್ಬಾರು ಈಗ್ಲೀಗ । ಕಂದಯ್ನ
ಜೋ ಜೋ ಆಡ್ಯಾರು ॥

## ಕೇದಿಗೆ

೧

ಬಡಿಗ್ಯಾರ ಬಸವವ್ವ ಸುಯ್ಯ
ಕಿಡಿಬೆಂಕಿ ಕೊಡವ್ವ ಸುಯ್ಯ
ಕೇದಿಗೆ ಕೇದಿಗೆ ಸುಯ್ಯ
ನನ್ನ ಸಗಣೀಯಗೈಯ್ಯಿ ಸುಯ್ಯ—ಸುಯ್ಯ
ನಡುವಲ ಕೋಣ್ಯಾಗ ಸುಯ್ಯ
ಕಿಡಿಬೆಂಕಿ ತಗವೋಗೆ ಸುಯ್ಯ
ನಡವಲ ಕೋಣ್ಯಾಗ ಸುಯ್ಯ
ವೋದಾಳೆ ಕೇದಿಗೆ ಸುಯ್ಯ
ನಡವಲ ಕೋಣ್ಯಾಗೆ ಸುಯ್ಯ
ಹವಳಾದ ಅಡ್ಡಾಗೋಡೆ ಸುಯ್ಯ
ಅಡ್ಡಗೋಡೆ ಮೇಲೆ ಸುಯ್ಯ
ಮಲಗಿರುವನಿವನ್ಯಾರೆ ಸುಯ್ಯ
ಅವನು ಮಾನ್ಯಾರ ಮಗ ಸುಯ್ಯ
ಹಣವ ಕೇಳಲು ಬಂದ ಸುಯ್ಯ
ಬಾರೋ ಮಾನ್ಯವರ ಮಗನೆ ಸುಯ್ಯ
ನಮ್ಮರಮನೆಗೆ ಹೋಗೋನ ಸುಯ್ಯ
ಅರಮನೆಗೆ ಬರುವಾಕೆ ಸುಯ್ಯ
ನಿಮ್ಮತ್ತೆ ಇರೋವೊತ್ತು ಸುಯ್ಯ
ಅತ್ತೆ ಸಂತಿಗೋಗಿ ಸುಯ್ಯ
ನೆನ್ನೆಗೆಂಟಿದಾನ ಸುಯ್ಯ

ಬಾರಾ ಮನ್ನವರ ಮಗನೆ ಸುಯ್ಯ
ನಮ್ಮರಮನೆಗೋಗೋನ ಸುಯ್ಯ
ಅರಮನೆಗೆ ಬರುವಾಕೆ ಸುಯ್ಯ
ನಿಮ್ಮಾವ ಇರಹೊತ್ತು ಸುಯ್ಯ
ಮಾವ ಮಾಜಾಕ್ರಿಗೆಗೋಗಿ ಸುಯ್ಯ
ನಿನ್ನೆಗೆ ತಿಂಗಳು ಸುಯ್ಯ
ಬಾರೋ ಮನ್ನಾರ ಮಗನೇ ಸುಯ್ಯ
ನಮ್ಮರಮನೆಗೆ ಸುಯ್ಯ
ಅರಮನೆಗೆ ಬರೂಕೆ ಸುಯ್ಯ
ನಿನ್ನ ವೈದ್ನ ಇರಹೊತ್ತು ಸುಯ್ಯ
ವೈದ್ನ ಉಂಡಡು ಭಂಟೆ ಸುಯ್ಯ
ಚೆಂಡನಾಡಲಾದ ಸುಯ್ಯ

ಬಾರಾ ಮನ್ನವರ ಮಗನೆ ಸುಯ್ಯ
ನಮ್ಮರಮನೆಗೋಗೋನ ಸುಯ್ಯ
ಅರಮನೆಗೆ ಬರುವಾಗ ಸುಯ್ಯ
ನಿನ್ನಾದ್ನಿ ಇರಹೊತ್ತು ಸುಯ್ಯ
ನಾದ್ನಿ ಉಂಡಡವಿ ಭಂಟೆ ಸುಯ್ಯ
ಅಂಜಿ ನೂಲಲೋದ್ವು ಸುಯ್ಯ
ಬಾರಾ ಮನ್ನವರ ಮಗನೆ ಸುಯ್ಯ
ನಮ್ಮರಮನೆಗೋಗೋನ ಸುಯ್ಯ
ಅರಮನೆಗೆ ಬರುವಾಕಿ ಸುಯ್ಯ
ನಿನ್ನ ಗಂಡ ಇರಹೊತ್ತು ಸುಯ್ಯ
ಗಂಡ ದಂಡೀಗೋಗಿ ಸುಯ್ಯ
ನಾಳೀಕಿ ತಿಂಗಳಾದ್ವು ಸುಯ್ಯ

ಬಾರಾ ಮನ್ನವರ ಮಗನೆ ಸುಯ್ಯ
ನಮ್ಮರಮನೆಗೆ ಪೋಗಾನ ಸುಯ್ಯ
ಅಂಗಂದ ಮಾತಿಗೆ ಸುಯ್ಯ
ಹೊಲ್ಟವನು ಮಾನ್ಯವರ ಮಗ ಸುಯ್ಯ
ಕಿಡಿಬೆಂಕಿ ತಗಾಂಡು ಸುಯ್ಯ

ಮಾನ್ಯವರ ಮಗನ ಕರಕೊಂಡು ಸುಯ್ಯ
ಬಂದಾಳೆ ಅರಮನೆಗೆ ಸುಯ್ಯ
ಬಂದಾಳೆ ಅರಮನೆಗೆ ಸುಯ್ಯ
ಬಂದಾಳೆ ಅರಮನೆಗೆ ಸುಯ್ಯ

೨

ಕದಬಗಲ ತೆಗೆದವಳೆ ಸುಯ್ಯ
ಕದಬಗಲ ತೆಗೆದವಳೆ ಸುಯ್ಯ
ಹೋದಾಕೆ ಒಳವೀಕೆ ಸುಯ್ಯ
ವಾದಾಳೆ ಒಳವೀಕಿ ಸುಯ್ಯ
ಕರಿಯನ ಕಂಬಳಿಯ ಸುಯ್ಯ
ಕಿರುವಿ ಗದ್ದಿಗೆನಾಕಿ ಸುಯ್ಯ
ಬಾರೋ ಮನ್ಯಾವರ ಮಗನೆ ಸುಯ್ಯ
ಕರಿಯ ಕಂಬಳ ಗದ್ದಿಗೆಯ ಮೇಲೆ ಸುಯ್ಯ
ವಾದಾಳೆ ಕೇದಿಗೆ ಸುಯ್ಯ
ಒಲೆಗಳ ಹಚ್ಚ್ಯಾಳೆ ಸುಯ್ಯ
ಒಲೆಗಳ ಹಚ್ಚ್ಯಾಳೆ ಸುಯ್ಯ
ಅಟ್ಟಕೆ ಹತ್ತ್ಯಾಳೆ ಸುಯ್ಯ
ಅಟ್ಟಕೆ ಹತ್ತ್ಯಾಳೆ ಸುಯ್ಯ
ಸಣ್ಣಕ್ಕಿ ತೆಗೆದಾಳೆ ಸುಯ್ಯ
ಸಣ್ಣಕ್ಕಿ ತೆಗೆದಾಳೆ ಸುಯ್ಯ
ಪಟಪಟನೆ ಕೇರ್ಯಾಳೆ ಸುಯ್ಯ
ಪಟಪಟನೆ ಕೇರ್ಯಾಳೆ ಸುಯ್ಯ
ಒಲಿಮ್ಯಾಕೆ ಸುರಿದಾಳೆ ಸುಯ್ಯ
ಒಲಿಮ್ಯಾಕಿ ಸುರಿದಾಳೆ ಸುಯ್ಯ
ಗಂಡುಹೆಣ್ಣೋ ಹರಿವಾಣ ಸುಯ್ಯ

ಗಂಡುಣ್ಣೋ ಹರಿವಾಣ ಸುಯ್ಯ
ಬೆಳಗ್ಯಾಳೆ ಕೇದಿಗೆ ಸುಯ್ಯ
ಬಾನಾವ ಬಸಿದಾಳೋ ಸುಯ್ಯ
ಹರಿವಾಣಕೆ ಸುರಿದಾಳೋ ಸುಯ್ಯ
ಗಂಡನಿರುಕೊಡೋ ಗಿಂಡಿಲಿ
ನೀರಾನ ತುಂಬ್ಯಾಳೆ ಸುಯ್ಯ
ಬಾರಾ ಮನ್ಯಾವರ ಮಗನೆ ಸುಯ್ಯ
ಕೈಕಾಲು ಮುಖವ ತೊಳೆಯೋ ಸುಯ್ಯ
ಕೈಕಾಲು ಮುಖವ ತೊಳೆದು ಸುಯ್ಯ
ಊಟಾಕೆ ಬಂದಾನು ಸುಯ್ಯ
ಹಾಲು ತುಪ್ಪ ಬಿಟ್ಟ ಸುಯ್ಯ
ಊಟಕ್ಕೆ ಇಟ್ಟ್ಯಾಳೆ ಸುಯ್ಯ
ಬಂದೊಂದಗುಕ್ಕ್ಯಣ್ಣೊತ್ತಿಗೆ ಸುಯ್ಯ
ಅವರತ್ತೆ ಬಂದೊದಗ್ಯಳೇ ಸುಯ್ಯ
ಕೇದಿಗೆ ಕೇದಿಗೆ ಸುಯ್ಯ
ಕದಬಗಲ ತೆಗೆಯಾ ಸುಯ್ಯ
ಕದಬಗಲ ತೆಗೆಯಾಕೆ ಸುಯ್ಯ
ತಲೆ ಮೂಗು ನೊಂದವತ್ತೆ ಸುಯ್ಯ
ಎರಡಗುಕ್ಕ್ಯಣ್ಣೋ ಹೊತ್ತಿಗೆ
ಅವರಮಾವ ಬಂದೊದಗ್ಯನೆ ಸುಯ್ಯ
ಕೇದಿಗೆ ಕೇದಿಗೆ ಸುಯ್ಯ
ಕದಬಗಲ ತೆಗೆಯೆ ಸುಯ್ಯ
ಕದಬಗಲ ತೆಗೆಯಾಕೆ ಸುಯ್ಯ
ಕೈಕಾಲೊಡಿತಾವೆ ಸುಯ್ಯ
ಮೂರಗುಕ್ಕ ವುಣ್ಣುವ ಹೊತ್ತಿಗೆ
ಮೈದ್ನಾ ಬಂದೊದಿಗ್ಯಾನೆ ಸುಯ್ಯ
ಕೇದಿಗೆ ಕೇದಿಗೆ ಸುಯ್ಯ

ಕದಬಗಲ ತೆಗೆಯೊ ಸುಯ್ಯ
ಕದಬಗಲ ತೆಗೆಯೋಕೆ ಸುಯ್ಯ
ಸಳಿಜರ ಬಂದವನೆದ್ನ ಸುಯ್ಯ
ನಾಗುಕ್ಕುವುಣ್ಣೋ ಹೊತ್ಗೆ
ನಾದ್ನಿ ಬಂದೊಡಗವಳೆ ಸುಯ್ಯ
ಕೇದಿಗೆ ಕೇದಿಗೆ ಸುಯ್ಯ

ಕದಬಗಲ ತೆಗೆಯಮ್ಮ ಸುಯ್ಯ
ಕದಬಾಗಲ ತೆಗೆಯೋಕೆ ಸುಯ್ಯ
ಸೊಂಟೊಡತ ಬಂದವೆ ನಾದ್ನಿ
ಐದುಗುಕ್ಕುಣ್ಣೋ ಹೊತ್ಗೆ
ಗಂಡ ಬಂದೊಡಗವ್ನೆ ಸುಯ್ಯ

ಕೇದಿಗೆ ಕೇದಿಗೆ ಸುಯ್ಯ
ಕದಬಗಲ ತೆಗೆಯೆಂಡ ಸುಯ್ಯ
ಕದಬಗಲ ತೆಗೆಯಾಕೆ ಸುಯ್ಯ
ಹೊಟ್ಟೆ ನೋವು ಬಂದವೆ ಸುಯ್ಯ
ಅಂಗಂಡ ಮಾತಿಗೆ ಸುಯ್ಯ
ಜಾಡಿಸಿ ಕಾಲಾಗೆ ವೊದ್ದ
ಜಾಡಿಸಿ ಕಾಲಾಗೆ ವೊದ್ದ
ಕದಬಗಲು ಮುರಿದಾನೆ ಸುಯ್ಯ
ಕದಬಗಲು ಮುರಿದಾನೆ ಸುಯ್ಯ

ವಾದಾನೆ ಒಳವಿಕೆ ಸುಯ್ಯ
ನೋಡ್ತೈನು ಮಾನ್ಯವರ ಮಗನ ಸುಯ್ಯ
ಕೇದಿಗೆ ಕೇದಿಗೆ ಸುಯ್ಯ
ಒಳಗಿರುವಿ ನಿವನ್ಯಾರೆ ಸುಯ್ಯ
ಅವನು ಮಾನ್ಯವರ ಮಗನು ಸುಯ್ಯ
ಅಣವ ಕೇಳಲು ಬಂದ ಸುಯ್ಯ
ಅಂಗಂಡ ಮಾತಿಗೆ ಸುಯ್ಯ
ಅಟ್ಟಾಕೆ ಹತ್ಯವ್ನೆ ಸುಯ್ಯ

ಆಟ್ಬಾಕೆ ಹತ್ಯಾನೆ ಸುಯ್ಯ
ಚಂದ್ರಾರ್ಥ ತೆಗೆದಾನೆ ಸುಯ್ಯ
ಕೇದಿಗೆ ಕಡಿದಾನೆ ಸುಯ್ಯ
ಕೆರಿ ವಳಗೆ ಎಸೆದಾನೆ ಸುಯ್ಯ
ಕೆರಿ ವಳಗೆ ಎಸೆದಾನೆ ಸುಯ್ಯ
ಕೇದಿಗೆ ಮರನಾಗುಟ್ಟವಳೆ ಸುಯ್ಯ
ಮಾನ್ಯರ ಮಗನ ಕಡಿದನ್ನೆ ಸುಯ್ಯ
ಭಾವಿಗೆ ಎಸೆದಾನೆ ಸುಯ್ಯ
ಭಾವಿಗೆ ಎಸೆದಾನೆ ಸುಯ್ಯ
ಬಾಳೆಯು ಮರನಾಗುಟ್ಟವನೆ ಸುಯ್ಯ
ಬಾಳೆಯು ಮರನಾಗುಟ್ಟವನೆ ಸುಯ್ಯ
ಕೇದಿಗೆ ಕೇದಿಗೆ ಅಯ್ಯೊ
ಕೇದಿಗೆ ಕೇದಿಗೆ ಅಯ್ಯೊ

# ಹೊನ್ನಾಲಿ

ದೊಡ್ಡೋರ ಸೊಸೆಯಮ್ಮ ಸುವ್ವಲಾಲಿ
ಹೊತುಮೂರಿ ಎದ್ದಾಳೆ ಸುವ್ವಲಾಲಿ
ಹೊತುಮೂರಿ ಎದ್ದವಳೆ ಸುವ್ವಲಾಲಿ
ಆಕೆ—ಹಟಿಬಟ್ಟಿ ಹೊಡುದಾಳೆ ಸುವ್ವಲಾಲಿ
ಹಟಿಬಟ್ಟಿ ಹೊಡುದಾಳೆ ಸುವ್ವಲಾಲಿ
ಆಕೆ—ಬಾಗಾಲ ಸಾರಿಸ್ಯಾಳೆ ಸುವ್ವಲಾಲಿ
ಬಾಗಾಲ ಸಾರಿಸ್ಯಾಳೆ ಸುವ್ವಲಾಲಿ
ಆಕೆ—ರಂಗೋಲಿನಿಡುತಾಳೆ ಸುವ್ವಲಾಲಿ
ರಂಗೋಲಿ ಇಟ್ಯಾಳೆ ಸುವ್ವಲಾಲಿ
ಆಕೆ—ಕೈಕಾಲು ಮುಖವ ತೊಳೆದು ಸುವ್ವಲಾಲಿ
ಕೈಕಾಲು ಮುಖವ ತೊಳೆದು ಸುವ್ವಲಾಲಿ
ಆಕೆ—ವಾದಾಳು ಒಳವಿಕೆ ಸುವ್ವಲಾಲಿ
ವಾದಾಳು ಒಳವಿಕೆ ಸುವ್ವಲಾಲಿ
ಆಕೆ—ಅರಿಸಿನ ಕುಂಕುಮ ಧರಿಸ್ಯಾಳೆ ಸುವ್ವಲಾಲಿ
ಅರಿಸಿನ ಕುಂಕುಮ ಧರಿಸ್ಯಾಳೆ ಸುವ್ವಲಾಲಿ
ಆಕೆ—ನೀರಿಗೆ ಹೋದಳು ಸುವ್ವಲಾಲಿ
ಚಿನ್ನದ ಕೊಡಗಾಳು ಸುವ್ವಲಾಲಿ
ರನ್ನದ ತಲೆಸಿಂಬಿ ಸುವ್ವಲಾಲಿ
ರನ್ನದ ತಲೆಸಿಂಬಿ ಸುವ್ವಲಾಲಿ
ಆಕೆ—ನೀರಿಗೆ ಹೊರಟಾಳು ಸುವ್ವಲಾಲಿ
ಹಟ್ಟೀಯ ಗೆಳತೀರು ಸುವ್ವಲಾಲಿ
ನೀವು ನೀರಿಗೆ ಬರುತೀರ ಸುವ್ವಲಾಲಿ

ನಾವೀಗ ಬರುವಲ್ಲ ಸುವ್ವಲಾಲಿ
ಆವಾಗಲೇ ತಂದೇವು ಸುವ್ವಲಾಲಿ
ಆವಾಗಲೇ ತಂದೇವು ಸುವ್ವಲಾಲಿ
ಒಬ್ಬಾಳೆ ಹೊರಟಾಳು ಸುವ್ವಲಾಲಿ
ಒಬ್ಬಾಳೆ ಹೊರಟಾಳು ಸುವ್ವಲಾಲಿ
ನೀರನ್ನ ತಂದಾಳೆ ಸುವ್ವಲಾಲಿ
ನೀರನೀ ತಂದಾಳೆ ಸುವ್ವಲಾಲಿ
ಆಕೆ—ಏಳು ಗುಡೀಗೆ ಹೊರಟಾಳು ಸುವ್ವಲಾಲಿ
ಏಳು ಗುಡೀಗೆ ಹೊರಟು ಸುವ್ವಲಾಲಿ
ಆಕೆ—ಏಳು ಗೂಡಿನ ಸಗಣಿ ಸುವ್ವಲಾಲಿ
ಏಳು ಗೂಡಿನ ಸಗಣಿ ಸುವ್ವಲಾಲಿ
ಆಕೆ—ಹೊಡೆದು ಗುಡ್ಡಿಗೆ ಮಾಡಿ ಸುವ್ವಲಾಲಿ
ಹೊಡೆದು ಗುಡ್ಡಿಗೆ ಮಾಡಿ ಸುವ್ವಲಾಲಿ
ಆಕೆ—ಒಂದೆ ತಟ್ಟೀಗೆ ತುಂಬಿ ಸುವ್ವಲಾಲಿ
ಒಂದೆ ತಟ್ಟೀಗೆ ತುಂಬಿ ಸುವ್ವಲಾಲಿ
ಅವರತ್ತ್ಯಮನ ಕರೆದವಳೆ ಸುವ್ವಲಾಲಿ
ಅತ್ತ್ಯಮಸತ್ತ್ಯಮ ದೇವರೆ ಸುವ್ವಲಾಲಿ
ನೀವು ಸಗಣಿ ಹೊರಿಸಲು ಬನ್ನಿ ಸುವ್ವಲಾಲಿ
ನಾನೀಗ ಹೊರ್ಸ್ಸದಿಲ್ಲ ಸುವ್ವಲಾಲಿ
ನಿನ್ನಾದಿನಿ ಕರೆಯಮ್ಮ ಸುವ್ವಲಾಲಿ
ನಾದೀನಿ ನಂಜಮ್ಮ ಸುವ್ವಲಾಲಿ
ನಾದೀನಿ ನಂಜಮ್ಮ ಸುವ್ವಲಾಲಿ
ನೀವು ಸಗಣಿ ಹೊರ್ಸುಬನ್ನಿ ಸುವ್ವಲಾಲಿ
ನಾನೀಗ ಹೊರ್ಸ್ಸತ್ತಿದ್ದೆ ಸುವ್ವಲಾಲಿ
ಕಂದಯ್ಯ ತೊಡೆಯ ಮೇಲವ್ನೆ ಸುವ್ವಲಾಲಿ
ನಿನ್ನೋರಗಿತ್ತಿ ಕರಿಯತ್ಗೆ ಸುವ್ವಲಾಲಿ
ಓರಗಿತ್ತಿ ಹೊನ್ನಲುದೇವಿ ಸುವ್ವಲಾಲಿ
ಸಗಣಿ ಹೊರಿಸಲು ಬನ್ನಿ ಸುವ್ವಲಾಲಿ
ನಾನೀಗ ಹೊರ್ಸ್ಸದಿಲ್ಲ ಸುವ್ವಲಾಲಿ
ನಿನಗೆ ಬೇಕಿದ್ರೆ ಹೊತುಕೊಳ್ಳಿ ಸುವ್ವಲಾಲಿ
ಅಂಗಂದ ಮಾತಿಗೆ ಸುವ್ವಲಾಲಿ
ಆಕೀ ಏಳು ಗೂಡಿಗೆ ಬಂದೂ ಸುವ್ವಲಾಲಿ

ಏಳೂ ಗೂಡಿಗೆ ಬಂದ್ಲೊ ಸುವ್ವಲಾಲಿ
ಆಕೆ—ಏಳೂ ಮಾರುದ್ದ ಮಂಡೆ ಸುವ್ವಲಾಲಿ
ಏಳೂ ಮಾರುದ್ದ ಮಂಡೆ ಸುವ್ವಲಾಲಿ
ಆಕೆ—ಒದರಿ ಸಿಂಬೆಯ ಸುತ್ತಿ ಸುವ್ವಲಾಲಿ
ಒದರಿ ಸಿಂಬೆಯ ಸುತ್ತಿ ಸುವ್ವಲಾಲಿ
ಆಕೆ—ಇರುಮಂಡಿ ನೂಡಿದಾಳೆ ಸುವ್ವಲಾಲಿ
ಶಿವಪಾರ್ವತಿ ನೆನದಾಳೆ ಸುವ್ವಲಾಲಿ
ಶಿವಪಾರ್ವತಿ ನೆನೆದು ಸುವ್ವಲಾಲಿ
ತಟ್ಟೆಯನೆಸ್ವಳು ಸುವ್ವಲಾಲಿ
ಸಗಣೀಯನೆಸ್ವಳು ಸುವ್ವಲಾಲಿ
ಆಕೆ—ತಾಯಿತಂದೆ ನೆನೆದು ಸುವ್ವಲಾಲಿ
ತಾಯಿತಂದೆಯಾ ನೆನೆದಾಳೆ ಸುವ್ವಲಾಲಿ
ಆಕೆ—ಅಣ್ಣತಮ್ಮಗಳ ನೆನೆದು ಸುವ್ವಲಾಲಿ
ಅಣ್ಣ ತಮ್ಮಗಳ ನೆನೆದು ಸುವ್ವಲಾಲಿ
ಅವರತ್ತೆ ಮಾವಗಳ ನೆನೆದು ಸುವ್ವಲಾಲಿ
ಸಗಣೀಯ ಹೊತ್ತಾಳೆ ಸುವ್ವಲಾಲಿ
ಸಗಣೀಯನೊತ್ತಾಳೆ ಸುವ್ವಲಾಲಿ
ಆಕೆ—ಹೊಸಪೇಟೆ ನೂರ ಮುಂದಕೆ ಸುವ್ವಲಾಲಿ
ಹೊಸ ಪೇಟೆ ನೂರ ಮುಂದಕೆ ಸುವ್ವಲಾಲಿ
ಹಾದಿಲ್ಯಾಗಾಡುವ ಮಕ್ಕಳಿರ ಸುವ್ವಲಾಲಿ
ನೀವು ಬೀದ್ಯಾಗ ಬೆಳೆಯುವ ಮಕ್ಕಳಿರ ಸುವ್ವಲಾಲಿ
ಬೀದ್ಯಾಗ ಬೆಳೆಯುವ ಮಕ್ಕಳಿರ ಸುವ್ವಲಾಲಿ
ನಮ್ಮ ತಿಪ್ಪೇ ತೋರಿಸಬನ್ನಿ ಸುವ್ವಲಾಲಿ
ಎಡಗಡೆ ಸಣ್ಣತಿಪ್ಪೇ ಸುವ್ವಲಾಲಿ
ಬಲಗಡೆ ದೊಡತಿಪ್ಪೇ ಸುವ್ವಲಾಲಿ
ಮಧ್ಯವೈತಮ್ಮ ನಿಮ್ಮ ತಿಪ್ಪೆ ಸುವ್ವಲಾಲಿ
ಅಲ್ಲಿಗೆ ಹೋಗಮ್ಮ ಸುವ್ವಲಾಲಿ
ತಿಪ್ಯಾಗೆ ಹಾಕಾಳೆ ಸುವ್ವಲಾಲಿ
ಅರಮನೆಗೆ ಬಂದ್ಯಾಳೆ ಸುವ್ವಲಾಲಿ
ಬಂದ್ಯಾಳೆ ಅರಮನೆಗೆ ಸುವ್ವಲಾಲಿ
ಅವರತ್ತೆಮನ ಕೇಳ್ಯಾಳೆ ಸುವ್ವಲಾಲಿ
ಅತ್ತ್ಯಮ ಅತ್ತ್ಯಮನೆ ಸುವ್ವಲಾಲಿ

ಕೈಗೆ ನೀರು ಕೊಡಿ ಸುವ್ವಲಾಲಿ
ನಾನೀಗ ಕೊಡಲಾರೆ ಸುವ್ವಲಾಲಿ
ನಿನ್ನಾದುನಿ ಕೇಳಮ್ಮ ಸುವ್ವಲಾಲಿ
ನಾದುನಿ ನಂಜಮ್ಮ ಸುವ್ವಲಾಲಿ
ಕೈಗೆ ನೀರು ಕೊಡಮ್ಮ ಸುವ್ವಲಾಲಿ
ನಿನ್ನೊರಗಿತ್ತಿ ಕರೆಯಮ್ಮ ಸುವ್ವಲಾಲಿ
ವಾರುಗಿತ್ತಿ ಹೊನ್ನಾಲು ದೇವಿ ಸುವ್ವಲಾಲಿ
ಮಡಿಗಳ ಉಡುವಲ್ಲಿ ಸುವ್ವಲಾಲಿ
ನಾನೀಗ ಉಡುವಲ್ಲೆ ಸುವ್ವಲಾಲಿ
ನಿನಗೆ ಬೇಕಿದ್ರೆ ಉಟುಕೊಳ್ಳಿ ಸುವ್ವಲಾಲಿ
ಅಂಗಂದ ಮಾತಿಗೆ ಸುವ್ವಲಾಲಿ
ಆಕೆ—ಬಂದಾಳೆ ನೀರಮನೆಗೆ ಸುವ್ವಲಾಲಿ
ಆಕೆ—ಮೈಯನೆ ತೊಳೆದವಳೆ ಸುವ್ವಲಾಲಿ
ಮೈಯನ ತೊಳೆದವ್ಳು ಸುವ್ವಲಾಲಿ
ಆಕೆ—ಮಡಿಗಳನುಟ್ಟಾಳೆ ಸುವ್ವಲಾಲಿ
ಮಡಿಗಳನುಟ್ಕೊಂಡು ಸುವ್ವಲಾಲಿ
ಆಕೆ—ಬಂದಾಳೆ ಅರಮನೆಗೆ ಸುವ್ವಲಾಲಿ
ಅರಮನೆಗೆ ಬಂದಾಳೆ ಸುವ್ವಲಾಲಿ
ಅವರತ್ತ್ಯಾಮನ ಕೇಳುತಾಳೆ ಸುವ್ವಲಾಲಿ
ಅತ್ತ್ಯಮ ಅತ್ತ್ಯಮ ದೇನ್ರೆ ಸುವ್ವಲಾಲಿ
ಅಕ್ಕಿ ಒಡಕಲು ಕೊಡಿ ಸುವ್ವಲಾಲಿ
ನಾನೀಗ ಕೊಡುವಲ್ಲ ಸುವ್ವಲಾಲಿ
ನಿನ್ನ ನಾದುನಿ ಕೇಳಮ್ಮ ಸುವ್ವಲಾಲಿ
ನಾದಿನಿ ನಂಜಮ್ಮ ಸುವ್ವಲಾಲಿ
ನೀವು ಅಕ್ಕಿಯ ಒಡಕಲು ಕೊಡಿ ಸುವ್ವಲಾಲಿ
ನಾನೀಗ ಕೊಡುತ್ತಿದ್ದೆ ಸುವ್ವಲಾಲಿ
ಬಾಲಯ್ಯ ತೊಡಿ ವ್ಯಾಲವ್ನೆ ಸುವ್ವಲಾಲಿ
ನಿನ್ನೊರಗಿತ್ತಿ ಕೇಳಮ್ಮ ಸುವ್ವಲಾಲಿ
ಒರಗಿತ್ತಿ ಹೊನ್ನಲು ದೇವಿ ಸುವ್ವಲಾಲಿ
ಅಕ್ಕಿ ಒಡಕಲು ಕೊಡಿ ಸುವ್ವಲಾಲಿ
ನಾನೀಗ ಕೊಡಲೊಲ್ಲೆ ಸುವ್ವಲಾಲಿ
ನಿನಗೆ ಬೇಕಿದ್ರೆ ತಕಳ್ಳಿ ಸುವ್ವಲಾಲಿ

ಅಂಗಂದ ಮಾತಿಗೆ ಸುವ್ವಲಾಲಿ
ಆಕೆ ಅಟ್ಟಕೇಣಿಯ ಹಾಕಿ ಸುವ್ವಲಾಲಿ
ಆಕಿ ಅಕ್ಕಿ ಒಡಕಲು ತೆಗೆದು ಸುವ್ವಲಾಲಿ
ಅಕ್ಕಿ ಒಡಕಲು ತೆಗೆದು ಸುವ್ವಲಾಲಿ
ಆಕಿ ಅಡಿಗೆಯ ಮಾಡ್ಯಾಳೆ ಸುವ್ವಲಾಲಿ
ಅಡಿಗೆಯ ಮಾಡ್ಯಾಳೆ ಸುವ್ವಲಾಲಿ
ಅವರತ್ತೆಮನ ಕರೆದವಳೆ ಸುವ್ವಲಾಲಿ
ಅತ್ತ್ಯಮ ಅತ್ತ್ಯಮ ದೇವ್ರೇ ಸುವ್ವಲಾಲಿ
ನೀವು ಊಟ ಮಾಡಲು ಬನ್ನಿ ಸುವ್ವಲಾಲಿ
ಊಟ ಮಾಡೋದಿಲ್ಲ ಸುವ್ವಲಾಲಿ
ನೀನಾದಿನಿ ಕರೆಯಮ್ಮ ಸುವ್ವಲಾಲಿ
ನಾದೀನಿ ನಂಜಮ್ಮ ಸುವ್ವಲಾಲಿ
ನೀವು ಊಟ ಮಾಡಲು ಬನ್ನಿ ಸುವ್ವಲಾಲಿ
ನಾವೀಗ ಮಾಡುತಿದ್ವಿ ಸುವ್ವಲಾಲಿ
ಪುತ್ರಯ್ಯ ತೊಡಿ ಮೇಲನ್ನೆ ಸುವ್ವಲಾಲಿ
ಪುತ್ರಯ್ಯ ತೊಡಿ ಮೇಲನ್ನೆ ಸುವ್ವಲಾಲಿ
ನಿನ್ನೋರಗಿತ್ತಿ ಕರೆಯಮ್ಮ ಸುವ್ವಲಾಲಿ
ವಾರಗಿತ್ತಿ ಹೊನ್ನಲುದೇವಿ ನೀವು ಸುವ್ವಲಾಲಿ
ಊಟಮಾಡಲು ಬನ್ನಿ ಸುವ್ವಲಾಲಿ
ನಾವೀಗ ಮಾಡುದಿಲ್ಲ ಸುವ್ವಲಾಲಿ
ನಿನಗೆ ಬೇಕಿದ್ರೆ ಮಾಡುಕೊಳ್ಳೆ ಸುವ್ವಲಾಲಿ
ಅಂಗಂದ ಮಾತಿಗೆ ಸುವ್ವಲಾಲಿ
ಆಕೆ ಬಂದಾಳೆ ಸುವ್ವಲಾಲಿ
ಅರಮನೆಗೆ ಬಂದಿನ್ನು ಸುವ್ವಲಾಲಿ
ಬುತ್ತಿಯ ತುಂಬಿನ್ನು ಸುವ್ವಲಾಲಿ
ಆಕೆ ಅವರತ್ತೆಯಾ ಕರೆದಿನ್ನು ಸುವ್ವಲಾಲಿ
ಅತ್ಯಮ ಅತ್ಯಮ ದೇವ್ರು ನೀವು ಬುತ್ತಿ ಬುತ್ತಿ ಹೊರಿಸಲು ಬನ್ನಿ
ನಾನೀಗ ಹೊರ್ಸುದಿಲ್ಲ ಸುವ್ವಲಾಲಿ
ನಾದೀನಿ ಕರೆಯಮ್ಮ ಸುವ್ವಲಾಲಿ
ನಾದೀನಿ ನಂಜಮ್ಮ ಸುವ್ವಲಾಲಿ
ನೀವು ಬುತ್ತಿ ಹೊರಿಸಲು ಬನ್ನಿ ಸುವ್ವಲಾಲಿ
ನಾನೀಗ ಹೊರ್ಸುದಿಲ್ಲ ಸುವ್ವಲಾಲಿ

ನಿನ್ನೊರಗಿತ್ತಿ ಕರೆಯಮ್ಮ ಸುವ್ವಲಾಲಿ
ವಾರಗಿತ್ತಿ ಹೊನ್ನಲುದೇವಿ ಸುವ್ವಲಾಲಿ
ನೀವು ಬುತ್ತಿ ಹೊರಿಸಲು ಬನ್ನಿ ಸುವ್ವಲಾಲಿ
ನಾನೀಗ ಹೊರ್ಸ್ನದಿಲ್ಲ ಸುವ್ವಲಾಲಿ
ನಿನಗೆ ಬೇಕಿದ್ರೆ ಹೊತ್ತುಕೊಳ್ಳಿ ಸುವ್ವಲಾಲಿ
ನಿಮಗೆ ಬೇಕಿದ್ರೆ ಹೊತ್ತುಕೊಳ್ಳಿ ಸುವ್ವಲಾಲಿ
ಅಂಗಂದ ಮಾತಿಗೆ ಸುವ್ವಲಾಲಿ
ಆಕಿ ಬಂದಾಳು ಅಡಿಗೆಮನೆಗೆ ಸುವ್ವಲಾಲಿ
ಆಕಿ ಬುತ್ತೀಯ ತುಂಬ್ಯಾಳೆ ಸುವ್ವಲಾಲಿ
ಬುತ್ತೀಯ ತುಂಬಾಳೆ ಸುವ್ವಲಾಲಿ
ಆಕೆ ಏಳು ಮಾರುದ್ದ ಮಂಡ್ಯ ಸುವ್ವಲಾಲಿ
ಏಳು ಮಾರುದ್ದ ಮಂಡ್ಯ ಸುವ್ವಲಾಲಿ
ಆಕಿ ಒದರೀ ಸಿಂಬೆಯ ಸುತ್ತಿ
ಒದರೀ ಸಿಂಬೆಯ ಸುತ್ತಿ ಸುವ್ವಲಾಲಿ
ಬುತ್ತೀಯನೊತ್ತಾಳೆ ಸುವ್ವಲಾಲಿ
ಬಾಳೆಯ ತೋಟಕೆ ಸುವ್ವಲಾಲಿ
ಆಕೆ ಬುತ್ತಿಯಾನೊತ್ತ್ಯಾಳೆ ಸುವ್ವಲಾಲಿ
ಬಾಳೆಯ ತೋಟದಾಗೆ ಸುವ್ವಲಾಲಿ
ಆಕೆ ಬೇಸಾಯ ನೋಡ್ಯಾರು ಸುವ್ವಲಾಲಿ
ಮಾವಮಲ್ಲಪ ದೊರೆಯೆ ಸುವ್ವಲಾಲಿ
ನೀವು ಊಟ ಮಾಡಲು ಬನ್ನಿ ಸುವ್ವಲಾಲಿ
ಊಟವು ಬೇಡಮ್ಮ ಸುವ್ವಲಾಲಿ
ನಿನ್ನ ಗಂಡನ್ನ ಕರೆಯಮ್ಮ ಸುವ್ವಲಾಲಿ
ನಿನ್ನ ಮೈದುನ್ನ ಕರೆಯಮ್ಮ ಸುವ್ವಲಾಲಿ
ಮೈದುನ ಮಲ್ಲಪ್ಪ ದೊರೆಯೆ ಸುವ್ವಲಾಲಿ
ನೀವು ಊಟವ ಮಾಡಲು ಬನ್ನಿ ಸುವ್ವಲಾಲಿ
ಊಟವ ಮಾಡಮ್ಮ ಸುವ್ವಲಾಲಿ
ನಿನ್ನ ಗಂಡನ್ನ ಕರೆಯಮ್ಮ ಸುವ್ವಲಾಲಿ
ಅಂಡೆತ್ತು ಗುಂಡೆತ್ತು ಸುವ್ವಲಾಲಿ
ಮುಂದೋಗೋ ನವ ಜಾಣ ಸುವ್ವಲಾಲಿ
ಮುಂದೋಗೋ ನವ ಜಾಣ ಸುವ್ವಲಾಲಿ
ನೀವು ಊಟಮಾಡಲು ಬನ್ನಿ ಸುವ್ವಲಾಲಿ
ಊಟ ಮಾಡೋದಿಲ್ಲ ಸುವ್ವಲಾಲಿ

ನಿನಗೆ ಬೇಕಿದ್ರೆ ಉಂಡ್ಕೊ ಸುವ್ವಲಾಲಿ
ನನಗೆ ಊಟವು ಬೇಕಿಲ್ಲ ಸುವ್ವಲಾಲಿ
ನಿನಗೆ ಬೇಕಿದ್ರೆ ಉಂಡುಕೊಳ್ಳಿ ಸುವ್ವಲಾಲಿ
ಅಂಗಂದ ಮಾತಿಗೆ ಸುವ್ವಲಾಲಿ
ಆಕೆ ಬುತ್ತೀಯನೊತ್ಕ್ಯಾಳೆ ಸುವ್ವಲಾಲಿ
ಬುತ್ತೀಯನೊತ್ತ್ಕೈಳೆ ಸುವ್ವಲಾಲಿ
ಹಿಂದುರಿಗಿ ಹೊತ್ತಾಳೆ ಸುವ್ವಲಾಲಿ
ಬಂದಾಳ ಅರಮನೆಗೆ ಸುವ್ವಲಾಲಿ
ಆಕಿ ಹೋದಾಳೆ ಒಳವೀಕೆ ಸುವ್ವಲಾಲಿ
ಒಳವೀಕೆ ಹೋದಾಳೆ ಸುವ್ವಲಾಲಿ
ಆಕೆ ಬುತ್ತೀಯನಿಳುವ್ಯಾಳೆ ಸುವ್ವಲಾಲಿ
ಬುತ್ತೀಯನಿಳುವ್ಯಾಳೆ ಸುವ್ವಲಾಲಿ
ಅಟ್ಟಕೇಣಿಯನಾಕಿ ಸುವ್ವಲಾಲಿ
ಅಟ್ಟಕೇಣಿಯನಾಕಿ ಸುವ್ವಲಾಲಿ
ಆಕಿ ನೂಲಗ್ಗ ತೆಗೆದಾಳೆ ಸುವ್ವಲಾಲಿ
ನೂಲಗ್ಗ ತೆಗೆದಾಳೆ ಸುವ್ವಲಾಲಿ
ಆಕಿ ಮೇಣಿಗೆ ಹಾಕ್ಕೊಂಡು ಸುವ್ವಲಾಲಿ
ಮೇಣಿಗೆ ಹಾಕ್ಕೊಂಡು ಸುವ್ವಲಾಲಿ
ಬಾಳೆ ತೋಟದಾಗೆ ಸುವ್ವಲಾಲಿ
ಬಾಳೆ ತೋಟದಾಗೆ ಇರುವ ಗಂಡಗೆ ಸುವ್ವಲಾಲಿ
ಕೆಟಸಪನವು ಬಿದ್ದವು ಸುವ್ವಲಾಲಿ
ಅವ(ನಿ)ಗೆ ಎಡಗಣ್ಣೆ ಅದುರಿತು ಸುವ್ವಲಾಲಿ
ಊರಿಗೆ ಬಂದಾನು ಸುವ್ವಲಾಲಿ
ಆವನೋದಾನು ಅರಮನೆಗೆ ಸುವ್ವಲಾಲಿ
ಅರಮನೆಗೆ ಹೋಗಿನ್ನು ಸುವ್ವಲಾಲಿ
ಒಳಗೆಲ್ಲಾ ಹುಡುಕುತಾನೆ ಸುವ್ವಲಾಲಿ
ಒಳಗೀಗ ವುಡುಕಿದ್ನೆ ಸುವ್ವಲಾಲಿ
ಅವರವ್ವನ್ನ ಕೇಳ್ಯಾನ ಸುವ್ವಲಾಲಿ
ಅವ್ವಯ್ಯ ಅವ್ವಯ್ಯ ಸುವ್ವಲಾಲಿ
ಹೊನ್ನಾಲತ್ತೋದ್ಲು ಸುವ್ವಲಾಲಿ
ನಾವೂನು ನೋಡಲಿಲ್ಲ ಸುವ್ವಲಾಲಿ
ನಾವೂನು ಕಾಣಲಿಲ್ಲ ಸುವ್ವಲಾಲಿ

ನೀರಿಗೋಗೊ ಅಕ್ಕತಂಗೇರ ಸುವ್ವಲಾಲಿ
ನಮ್ಮ ಹೊನ್ನಾಲಿ ಕಾಣಲಿಲ್ಲ ಸುವ್ವಲಾಲಿ
ನಾವು ಕಾಣಲಿಲ್ಲ ಸುವ್ವಲಾಲಿ
ನಾವೂನು ನೋಡಲಿಲ್ಲ ಸುವ್ವಲಾಲಿ
ಸೌದೆಗೋಗೋ ಅಣ್ಣಗಳಿರಾ ಸುವ್ವಲಾಲಿ
ಸೌದೆಗೋಗೋ ತಮ್ಮಗಳಿರ ಸುವ್ವಲಾಲಿ
ನಮ್ಮ ಹೊನ್ನಾಲಿ ಕಾಣಲಿಲ್ಲವೆ ಸುವ್ವಲಾಲಿ
ನಾವೂ ಕಾಣಲಿಲ್ಲ ಸುವ್ವಲಾಲಿ
ನಾವು ನೋಡಲಿಲ್ಲ ಸುವ್ವಲಾಲಿ
ಎದಿಎದಿಯ ಚಚ್ಚಿಕೊಂಡು ಸುವ್ವಲಾಲಿ
ಅವನು ಕೆರೆಭಾವಿ ಹುಡುಕಿದ್ನೆ ಸುವ್ವಲಾಲಿ
ಕೆರೆ ಭಾವಿ ಹುಡುಕಿದ್ನೆ ಸುವ್ವಲಾಲಿ
ಎಲ್ಲೂವೆ ಸುಳಿವಿಲ್ಲಾ ಸುವ್ವಲಾಲಿ
ಹರ ಹರ ಶಿವ ಶಿವ ಸುವ್ವಲಾಲಿ
ಹೊನ್ನಾಲೆತ್ತೋದ್ಲು ಸುವ್ವಲಾಲಿ
ಎದಿಎದಿಯ ಚಚ್ಚಿಕೊಂಡು ಸುವ್ವಲಾಲಿ
ಅವನು ಅರಮನೆಗೆ ಬಂದಾನು ಸುವ್ವಲಾಲಿ
ಅಟ್ಟಕೇಣಿಯ ಹಾಕಿ ಸುವ್ವಲಾಲಿ
ಅವನು ಅಟ್ಟಾವ ಹತ್ತ್ಯಾನು ಸುವ್ವಲಾಲಿ
ಅಲ್ಲಿ ಹೆಂಡತಿಯ ನೋಡ್ಯಾನು ಸುವ್ವಲಾಲಿ
ನೇಣನೆ ಹಾಕ್ಕೊಂಡು ಸುವ್ವಲಾಲಿ
ಆಕೆ ಪ್ರಾಣವ ಬಿಟ್ಟಿದ್ಲೆ ಸುವ್ವಲಾಲಿ
ಪ್ರಾಣವ ಬಿಟ್ಟವಳ ಸುವ್ವಲಾಲಿ
ಹಗ್ಗಾವ ಕೊಯ್ದವನೆ ಸುವ್ವಲಾಲಿ
ಹಗ್ಗಾವ ಕೊಯ್ದಿನ್ನು ಸುವ್ವಲಾಲಿ
ಅವನು ಕೆಳವೀಕೆ ತಂದಿನ್ನು ಸುವ್ವಲಾಲಿ
ಕೆಳವೀಕೆ ತಂದನ್ನೆ ಸುವ್ವಲಾಲಿ
ಆಕೀನು ಮಂಚದ ಮೇಲೆ ಮಲಗ್ಸನ್ನೆ ಸುವ್ವಲಾಲಿ
ಮಂಚದ ಮೇಲೆ ಮಲಗ್ಸ್ಯನೆ ಸುವ್ವಲಾಲಿ
ಅವರಪ್ಪನ ಕೇಳವನೆ ಸುವ್ವಲಾಲಿ
ಅಪ್ಪಯ್ಯ ಅಪ್ಪಯ್ಯ ಸುವ್ವಲಾಲಿ
ಎಣ್ಣೆ ಬಾಚಣಿಗೆ ಕೊಡೊ ಸುವ್ವಲಾಲಿ

ಎಣ್ಣೆ ಬಾಚಣಿಗೆ ಕೊಡೊ ಸುವ್ವಲಾಲಿ
ತಲೆಗೆ ಬಾಚಾಣ ಸುವ್ವಲಾಲಿ
ಅವ್ವಯ್ಯ ಅವ್ವಯ್ಯ ಸುವ್ವಲಾಲಿ
ಚೌಲಿಜೆಡೆಯ ಕೊಡೊ ಸುವ್ವಲಾಲಿ
ಹೊನ್ನಾಲಿಗೆ ತಿರುಗೋಣ ಸುವ್ವಲಾಲಿ
ಸತ್ತಾನೆ ಸವಿಗೆ ಸುವ್ವಲಾಲಿ
ಸೃಂಗಾರ ವ್ಯಾತಕ ಸುವ್ವಲಾಲಿ
ಸೃಂಗಾರ ವ್ಯಾತಕ ಸುವ್ವಲಾಲಿ
ಅವ್ವಯ್ಯ ಅವ್ವಯ್ಯ ಸುವ್ವಲಾಲಿ
ಒಳ್ಳೆ ಸೀರೆ ಕೊಡೊ ಸುವ್ವಲಾಲಿ
ಒಳ್ಳೆ ಸೀರೆ ಕೊಡೊ ಸುವ್ವಲಾಲಿ
ಹೊನ್ನಾಲಿಗೆ ಉಡುಸೋಣ ಸುವ್ವಲಾಲಿ
ಸತ್ತಾನೆ ಸವಿಗೆ ಸುವ್ವಲಾಲಿ
ದುಃಖವಿನ್ಯಾತಕೆ ಸುವ್ವಲಾಲಿ
ದುಃಖವಿನ್ಯಾತಕೆ ಸುವ್ವಲಾಲಿ
ಸತ್ತಾನೆ ಸವಿಗೆ ಸುವ್ವಲಾಲಿ
ಅವ್ವಯ್ಯ ಅವ್ವಯ್ಯ ಸುವ್ವಲಾಲಿ
ಅರಿಸಿನ ಕುಂಕುಮ ಕೊಡೆ ಸುವ್ವಲಾಲಿ
ಅರಿಸಿನ ಕುಂಕುಮ ಕೊಡೆ ಸುವ್ವಲಾಲಿ
ಹೊನ್ನಾಲಿಗೆ ಇಡುವಾನ ಸುವ್ವಲಾಲಿ
ಮಗ ಸತ್ರೆ ಮನೆ ಹಾಳು ಸುವ್ವಲಾಲಿ
ಸೊಸೆ ಸತ್ರೆ ಸೋಬಾನೆ ಸುವ್ವಲಾಲಿ
ಯಾಕಪ್ಪ ಅಳತೀಯ ಸುವ್ವಲಾಲಿ
ಯಾಕಪ್ಪ ನನಮಗನೆ ಸುವ್ವಲಾಲಿ
ದುಃಖಾನ ಮಾಡಬ್ಯಾಡ ಸುವ್ವಲಾಲಿ
ಗುಡ್ಡಕ್ಕೆ ಹೊರಟಾನೆ ಸುವ್ವಲಾಲಿ
ಗುಡ್ಡಕೆ ನಡೆದಾನು ಸುವ್ವಲಾಲಿ
ಅಲ್ಲಿ ಶ್ರೀಗಂಧದ ಸೌದೆಯ ಕಡಿದು ಸುವ್ವಲಾಲಿ
ತಲೆ ವ್ಯಾಲೆ ಹೊತ್ತು ನಡೆದಾನು ಸುವ್ವಲಾಲಿ
ಅವನೂರ ಮುಂದಕೆ ಬಂದಾನು ಸುವ್ವಲಾಲಿ
ಊರ ಮುಂದಕೆ ಹೊತ್ತಾಕಿ ಸುವ್ವಲಾಲಿ
ಅವ ಕಿಚ್ಚನ್ನೆ ಮಾಡ್ಯಾನೆ ಸುವ್ವಲಾಲಿ

ಕಿಚ್ಚನ್ನೆ ಮಾಡಿದ್ನೆ ಸುವ್ವಲಾಲಿ
ಬಂದ್ಯಾನೆ ಅರಮನೆಗೆ ಸುವ್ವಲಾಲಿ
ಹೆಂಡತಿಯು ಹೊತ್ತಿನ್ನು ಸುವ್ವಲಾಲಿ
ಹೆಂಡತಿಯು ಹೊತ್ತಾನೆ ಸುವ್ವಲಾಲಿ
ಕಿಚ್ಚಿನ ಮ್ಯಾಲೆ ಮನಗ್ಯಾನೆ ಸುವ್ವಲಾಲಿ
ಕಿಚ್ಚಿನ ಮ್ಯಾಲೆ ಮನಗ್ಗಿದ್ನೆ ಸುವ್ವಲಾಲಿ
ಅವನು ಶಿವನ ಪಾರ್ವತಿ ನೆನೆದ್ನ ಸುವ್ವಲಾಲಿ
ಕಿಚ್ಚ್ಯಾನೆ ಹೊಚ್ಚಿಸಿಯಾನು ಸುವ್ವಲಾಲಿ
ಕಿಚ್ಚ್ಯಾನೆ ಹೊಚ್ಚಿದ್ನೆ ಸುವ್ವಲಾಲಿ
ಕಿಚ್ಚಿನೆ ಹೊತ್ತಿಸಿ ಚಣದಲಿ ಸುವ್ವಲಾಲಿ
ಅವನೂವೆ ಬಿದ್ದಾನೆ ಸುವ್ವಲಾಲಿ
ಪ್ರಾಣವ ಬಿಟ್ಟಾನೆ ಸುವ್ವಲಾಲಿ
ತಾಯಿ ತಂದೆಯ ನೆನೆದು ಸುವ್ವಲಾಲಿ
ಅವನು ಪ್ರಾಣವ ಬಿಟ್ಟಾನೆ ಸುವ್ವಲಾಲಿ
ಅವನು ಪ್ರಾಣವ ಬಿಟ್ಟಾನೆ ಸುವ್ವಲಾಲಿ
ಹೆಂಡ್ತಿಯ ಮಡಲೀಗೆ ಸುವ್ವಲಾಲಿ
ಹೊಂಟಾನೆ ಜೊತೆಯಾಗಿ ಸುವ್ವಲಾಲಿ
ಇಲ್ಲಿಗೆ ಹರ ಹರ ಸುವ್ವಲಾಲಿ
ಇಲ್ಲೀಗೆ ಸಿವ ಸಿವ ಸುವ್ವಲಾಲಿ

# ಆಳು ಕೂಗಿನ ಹಕ್ಕಿ

ಸುವ್ವಿ ಸುವ್ವಿ ಸುವ್ವಿಯೋ ಸುವ್ವಿಯೋಳ್ ಸುವ್ವಿ (ಸೊಲ್ಲು)
ಏಳು ಜನ ಅಣ್ಣತಮ್ಮಂದೀರು । ಸುವ್ವಿ ।
ಒಬ್ಬಳೆ ಹೆಣ್ಣು ಮಗಳು । ಸುವ್ವಿ ।
ಹೆಣ್ಣು ಮಗಳು ಲಗ್ನವಾಗಿ । ಸುವ್ವಿ ।
ಆರು ಜನಕು ಲಗ್ನವಾಗಿ । ಸುವ್ವಿ ।
ಎಲ್ಲಕ್ಕಿಂತ ಕಿರಿ ತಮ್ಮ । ಸುವ್ವಿ ।
ಎಲ್ಲು ಹೆಣ್ಣು ಕೇಳುದ್ರುವೆ । ಸುವ್ವಿ ।
ಅವನು ಏನಂಥ ಮಾತನಾಡಿದನು । ಸುವ್ವಿ ।
ಎಲ್ಲೂ ಹೆಣ್ಣು ಒಪ್ಪುದಿಲ್ಲ । ಸುವ್ವಿ ।
ಹಿರಿಯ ಮಗನು ತಾಯಿಯ ತವಕೆ । ಸುವ್ವಿ ।
ತಮ್ಮ ನೋಡಿದ್ರೆ ಒಪ್ಪೋದಿಲ್ಲವಲ್ಲ । ಸುವ್ವಿ ।
ಇನ್ನೆಲ್ಲಿ ಹೆಣ್ಣು ಬೇಕು ತಮ್ಮ । ಸುವ್ವಿ ।
ಅಕ್ಕನ ಮಗಳು ತರಬೇಕೆಂದ । ಸುವ್ವಿ ।
ಆ ಮಾತ ಕೇಳಿ ಅಕ್ಕನ ಮನೆಗೋದನು (ಅಣ್ಣ) । ಸುವ್ವಿ ।
ಅಕ್ಕನ ಮನೆಗೆ ಹೋದನವನು । ಸುವ್ವಿ ।
(ಎಂದು ಬಾರದ ಅಣ್ಣ ಇಂದೇನು ಬಂದೆ । ಸುವ್ವಿ ।
ತಮ್ಮನಾದ್ರು ಬರುತಾನೆ ನಿನ್ನ ಮನೆ ಹೆಣ್ಣ ತರುವೊಕ । ಸುವ್ವಿ ।)
ಎಂದು ಬರದ ತಮ್ಮ ಇಂದೇನು ಬಂದೆ । ಸುವ್ವಿ ।
ನಿನ್ನ ಮನೆ ಹಾಲು ಅನ್ನಕೆ ಬಂದಿವಿನಿ ಅಕ್ಕ । ಸುವ್ವಿ ।
ಅವಳು ಆ ಮಾತ ಕೇಳಿ ಬಿರ್ರನೆ ನೀರ ಕೊಟ್ಟಳು । ಸುವ್ವಿ ।
ಅವಳು ಹುಡುಗಿನಾದರೆ ತಮನಿಗೆ ಮಾಡಿ । ಸುವ್ವಿ ।
ತವರಿನ ಋಣವ ತೀರಿಸ್ಬೇಕು ಅಂತ ಮಾಡಿ । ಸುವ್ವಿ ।
ಊಟ ಆದ್ಮೇಲೆ ತಾಂಬೂಲ ಕೊಟ್ಟವಳೆ । ಸುವ್ವಿ ।

ಅವರ ಬಾವನ್ನಾದರೆ ಕರೆದವಳೆ । ಸುವ್ವಿ ।
ನಿನ ಬಾವವ್ನ್ಯದ ಎಲ್ಲು ಹೆಣ್ಣೊಪ್ಪೊದಿಲ್ಲ । ಸುವ್ವಿ ।
ನಿನ್ನ ಮಗಳನಾದರೆ ಕೊಡಬೇಕು । ಸುವ್ವಿ ।
ಆಗಲಿ ಎಂದು ಒಪ್ಪಿಕೊಂಡ್ರು । ಸುವ್ವಿ ।
ಒಪ್ಪಿ ಕೊಂಡಾಯ್ತಲೆ ಮಾತ ತಿರುಗಿಸಿಕೊಂಡ್ರು । ಸುವ್ವಿ ।
ಅವನು ಹಟ್ಟಿಗೆ ಮಾತ ತೀರಿಸಿಕೊಂಡು ಬಂದು । ಸುವ್ವಿ ।
ಹೆಣ್ಣು ಒಪ್ಪಿ ಅವನ ಮಾತು ಆಯಿತು ಕಾಣವ್ವ । ಸುವ್ವಿ ।
ಅವರು ಆರು ಜನುವೆ ಸೇರಿಕೊಂಡ್ರು । ಸುವ್ವಿ ।
(ಈ ಹೆಣ್ಣೀನ ರೂಪ ತಡಿನಾರ್ದೆಹೋದ್ರು । ಸುವ್ವಿ !)
ಅವರು ಏನಂತ ಮಾತಾಡುತಾರೆ । ಸುವ್ವಿ ।
ನೋಡು ಎಲ್ಲು ಹೆಣ್ಣು ಕೇಳ್ದ್ರು ಒಪ್ಪಲ್ಲ । ಸುವ್ವಿ ।
ಅಕ್ಕನ ಮಗಳ್ಗ ವಾಲಾಡ್ಕಂಡು । ಸುವ್ವಿ ।
ಈಗ ಅರಿಸಿನ ಬಾಳೆ ಹಣ್ಣಿಗೆ ಹೋಗಬೇಕು । ಸುವ್ವಿ ।
ಶಾಸ್ತ್ರವಾದರೆ ಕೇಳಬೇಕು । ಸುವ್ವಿ ।
ಅವರ ತಾಯಿಯನಾದರೆ ಕರೆದವನೆ । ಸುವ್ವಿ ।
ಹಣ್ಣು ಕಾಯ ತಕಂಡು ಬವ್ವ । ಸುವ್ವಿ ।
ಗಂಧದ ಕಡ್ಡಿ ಕರ್ಪೂರ ತಕ್ಕಂಡು ಬವ್ವ । ಸುವ್ವಿ ।
ಅವನು ಒಂದು ಹಣವನಾದರೆ ತಕ್ಕಂಡು । ಸುವ್ವಿ ।
ಅವರ ತಾಯಿಯನಾದರೆ ಕರಕಂಡು । ಸುವ್ವಿ ।
ಅವನು ಶಾಸ್ತ್ರಕಾದರೆ ಹೊಯ್ತಾನೆ । ಸುವ್ವಿ ।
ಏಳು ದಿನಕೆ ಲಗ್ನವೆ ಬಿಳುತು । ಸುವ್ವಿ ।
ಅವನು ಸಾಮಾನನಾದರೆ ತಗಿಯಕೆ । ಸುವ್ವಿ ।
ಅವನು ಮೈಸೂರಿಗಾದರೂ ಹೋದಾನು । ಸುವ್ವಿ ।
ಅವರು ಏಳು ದಿನಕೆ ಅಂಬರಿಸವರೆ । ಸುವ್ವಿ ।
ಅವರು ಇಳ್ಳಿ ಶಾಸ್ತ್ರಕ್ಕೆ ಹೊರಟವರೆ । ಸುವ್ವಿ ।
ಶಾಸ್ತ್ರಕಾದರೆ ಅಕ್ಕನ ಮನೆಗೆ ಹೊರಟವರೆ । ಸುವ್ವಿ ।
ಇಲ್ಲಿ ಮೇಲಕಟ್ಟೆ ಕಟ್ಟುತ್ತಾರೆ । ಸುವ್ವಿ ।
ವಾಲಗದವರು ಬಂದವರೆ । ಸುವ್ವಿ ।
ಶಾಸ್ತ್ರಗಾರರು ಬಂದವರೆ । ಸುವ್ವಿ ।
ಹೆಣ್ಣನಾದರೆ ಕರಕಂಡು । ಸುವ್ವಿ ।
ದೇವಸ್ಥಾನಕ್ಕೆ ಬಂದವರೆ । ಸುವ್ವಿ ।
ಶಾಸ್ತ್ರ ಮುಗಿಸಿ ಬಂದವರೆ । ಸುವ್ವಿ ।

ಲಗ್ನವಂತು ಆಗೋಯ್ತು । ಸುವ್ವಿ ।
ಊಟಕಾದರು ಬಡಿಸುತಾರೆ । ಸುವ್ವಿ ।
ಅವರು ಹೆಣ್ಣು ಗಂಡು ಕರಕೊಂಡೋದ್ರು । ಸುವ್ವಿ ।
ಇವರು ಮೂರು ದಿವಸಕೆ ಹೆಣ್ಣು ಗಂಡು । ಸುವ್ವಿ ।
ಕರೆಯಕಾದ್ರು ಹೋದಾರು । ಸುವ್ವಿ ।
ಕರೆಕೊಂಡಾದ್ರು ಮನೆಗೆ ಬಂದ್ರು । ಸುವ್ವಿ ।
ಕರಕೊಂಡು ಬಂದ ಮೂರನೆಗೆ । ಸುವ್ವಿ ।
ಅವರ ಹಿರೀ ಅಣ್ಣ ಏನಂದ । ಸುವ್ವಿ ।
ನಮ್ಮ ಸರೀಕರೆಲ್ಲ ಹೆಜ್ಜೇನು ಬೇಟೆಗೆ । ಸುವ್ವಿ ।
ಎಲ್ಲ ಹೊಯ್ತಾರೆ ನಡಿ ತಮ್ಮ । ಸುವ್ವಿ ।
ನಾವು ಏಳು ಜನುವೆ ಹೋಗಬೇಕು । ಸುವ್ವಿ ।
ನಮ್ಮ ಕುಲದವರು ಬರುತಾರೆ । ಸುವ್ವಿ ।
ಹಂಗಂದ ಮಾತಿಗೆ ತಮ್ಮ ಏನಂದ । ಸುವ್ವಿ ।
ಅರಿಸಿನದ ಮೈಯ ತೊಳೆದಿಲ್ಲ । ಸುವ್ವಿ ।
ಅಣ್ಣ ನಾ ಹೇಗೆ ಬರಲಣ್ಣ । ಸುವ್ವಿ ।
ಇವರು ಆರು ಜನುವೆ ಮಾತಾಡಿಕೊಂಡು । ಸುವ್ವಿ ।
ಇವನ ಹೆಂಡತಿನಾದ್ರು ಅಪಹರಿಸಬೇಕು । ಸುವ್ವಿ ।
ಇವನು ಮಾತ್ರ ಕರಕೊಂಡು ಹೋಗಬೇಕು । ಸುವ್ವಿ ।
ಇವನು ಕಾಣದಂಗಾಗ ಮಾತಾಡಿಕೊಂಡ್ರು । ಸುವ್ವಿ ।
ಹಂಗಂದ ಮಾತಿಗೆ ಏನಂದ । ಸುವ್ವಿ ।
ಅಣ್ಣ ನಿಮ್ಮೊಂದಿಗೆ ನಾನುಟ್ಟಿಲ್ಲವಣ್ಣ । ಸುವ್ವಿ ।
ನನ ಕರಕೊಂಡು ಹೋಗೋದು ಧರ್ಮವಲ್ಲಣ್ಣ । ಸುವ್ವಿ ।
ನೀನು ಏನು ಆಟವಾಡಿದ್ರು ಬರಬೇಕು ತಮ್ಮ । ಸುವ್ವಿ ।
ಆವನು ಅವ್ವನ ತಕೆ ಹೋಗುತಾನೆ । ಸುವ್ವಿ ।
ಅವ್ವೆ ನಾನೇನಂತ ಇದ್ನ ಹೇಳಲವ್ವ । ಸುವ್ವಿ ।
ನನ್ನ ಹೆಜ್ಜೇನು ಬೇಟೆಗೆ ಕರಿತಾರೆ । ಸುವ್ವಿ ।
ಅಂಗಂದ ಮಾತಿಗೆ ಆವನ ತಾಯಿಯು । ಸುವ್ವಿ ।
ಆರು ಜನ ಅಣ್ಣದೀರುಗೂ ಹೆಜ್ಜೇನು ಬೇಟೆ ಯಾಕಪ್ಪ । ಸುವ್ವಿ ।
ನಿನ್ನ ತಮ್ಮನ ನೀವು ಯಾಕಪ್ಪ ಕರಿದೀರಿ । ಸುವ್ವಿ ।
ಆವನು ಅರಿಶಿನದ ಮೈಯ ತೊಳೆದಿಲ್ಲ । ಸುವ್ವಿ ।
ನಾವು ಅವನ ಬುಟ್ಟು ಮಾತ್ರ ಹೋಗೋದಿಲ್ಲವ್ವ । ಸುವ್ವಿ ।

ಹಂಗಂದ ಮಾತಿಗೆ ನಿನ್ನ ಸೊಸೆಯನಾದ್ರು ಕರಗೊಂಡು ಬನ್ನ । ಸುವ್ವಿ ।
ತಮ್ಮನಾದ್ರೂ ಹೇಳಿದ ಮಾತಿಗೆ ತಾಯಿಯಾದ್ರು ಕರೆದು
ತಂದಳು । ಸುವ್ವಿ ।

ಅವಳಕಂಡು ಹಿಂಗಂತ ಅಂದಾನು । ಸುವ್ವಿ ।
ನಿನ್ನ ಗಂಡ ಸತ್ತೋದ ಅಂತ ತಿಳ್ಕೊ ಹೆಣ್ಣೆ । ಸುವ್ವಿ ।
ಅರಿಶಿನ ಕುಂಕುಮ ಕೆಡಿಸೆಣ್ಣೆ । ಸುವ್ವಿ ।
ಬಳೆಯನಾದ್ರು ಒಡೆದುಬುಡು ಹೆಣ್ಣೆ । ಸುವ್ವಿ ।
ನಿನ್ನ ಹೂವನಾದ್ರು ತೆಗೆದು ಹಾಕುಬುಡು । ಸುವ್ವಿ ।
ಅವಳು ಹಂಗಂದ ಮಾತ ಕೇಳಕಂಡು । ಸುವ್ವಿ ।
ಅವಳು ಬೇಕಂತ ಶೋಕ ಪಡುತಾಳೆ । ಸುವ್ವಿ ।
ನೀನು ಶೋಕನಾದರೆ ಮಾಡಬೇಡೆಣ್ಣೆ । ಸುವ್ವಿ ।
ನೀನು ಮನೆಯ ಕೋಣೆ ತಾರಿಸೆಣ್ಣೆ । ಸುವ್ವಿ ।
ನೀನು ನೀರನಾದರೆ ಕಾಯಿಸೆಣ್ಣೆ । ಸುವ್ವಿ ।
ನೀನು ಮೂರು ಬುತ್ತಿ ಕಟ್ಟೆಣ್ಣೆ । ಸುವ್ವಿ ।
ನನಗೆ ನೀರನಾದರೆ ಉಯ್ಯಿಬಾರೆ । ಸುವ್ವಿ ।
ನೀನು ಅರಿಶಿನ ಕುಂಕುಮ ತಗೆಂಡು ಬಾರೆ । ಸುವ್ವಿ ।
ಅವನು ನಡಂಗಳದಲ್ಲಿ ನಿಂತವನೆ । ಸುವ್ವಿ ।
ಅವಳು ಮಣೆನಾದರೆ ಹಾಕವಳೆ । ಸುವ್ವಿ ।
ಅವಳು ಅರಿಶಿನ ಕುಂಕುಮ ಇಕ್ಕುತಾಳೆ । ಸುವ್ವಿ ।
ಅವಳು ಪಾದಪೂಜೆ ಮಾಡುತಾಳೆ । ಸುವ್ವಿ ।
ಇಸತಿ ನನ್ನ ಆಸೆ ನಿನಗೆ ಬೇಡೆಣ್ಣೆ । ಸುವ್ವಿ ।
ನಿನ್ನಾಣೆ ನನಗೆ ಬೇಡಕಾನೆಣ್ಣೆ । ಸುವ್ವಿ ।
ಅವರ ತಾಯಿಗಾದರು ಹೇಳುತಾನೆ । ಸುವ್ವಿ ।
ಅವ್ವ ನನ್ನಾಸೆ ನಿನಗೆ ಬೇಡಕಾನವ್ವ । ಸುವ್ವಿ ।
ಅವರು ಆಮಾತ ಕೇಳೆಲ್ಲ ಸಂಕಟಪಡುತಾರೆ । ಸುವ್ವಿ ।
ಅವರು ಬುತ್ತಿನಾದರು ಹೆಗಲಿಗಾಕಿ । ಸುವ್ವಿ ।
ಅವರು ಏಳು ಜನುನೆ ಕಾಡಿಗಾದರೂ । ಸುವ್ವಿ ।
ಅವರು ಕಾಡಿಗಾದರು ಹೊರಟು ಹೋದರು । ಸುವ್ವಿ ।
ಅವರು ಏಳು ಜನುವೆ ಒಂತಾವು ಕೂತುಕಂಡು । ಸುವ್ವಿ ।
ಹುಲಿ ಬರುವ ಜಾಗಕವನ । ಸುವ್ವಿ ।
ಅವರ ತಮ್ಮನಾದ್ರು ಒಂತಾವು ಕೂಂಡ್ರಿಸಿ । ಸುವ್ವಿ ।

ಇವರು ಆರುಜನನ ಒಂತಾವುನಾದೆ । ಸುವ್ವಿ ।
ಅಲ್ಲಿ ಅವನು ಏನಂತಾನೆ । ಸುವ್ವಿ ।
ಅವರು ಆರು ಜನುವೆ ಒಂದುತಾವು । ಸುವ್ವಿ ।
ನಾನು ಒಬ್ಬಾನೆ ಒಂದುತಾವು । ಸುವ್ವಿ ।
ಹುಲಿಯನಾದರು ಬಂದದೆ । ಸುವ್ವಿ ।
ಅವನು ಏನಂತ ಮಾತ ಹುಲಿಗಂದ । ಸುವ್ವಿ ।
ನನಗೆ ಅಣ್ಣಂದಿರು ಅನ್ಯಾಯ ಮಾಡಿದರು । ಸುವ್ವಿ ।
ನನ್ನ ನೀನು ತಿನ್ನಬೇಡ । ಸುವ್ವಿ ।
ಆಗ ಬಂದುಲಿಯದು ಬಯಲಾಗಿ ಹೋಯ್ತು । ಸುವ್ವಿ ।
ಆವೋಗೆ ಅಣ್ಣಂದಿರು ಬಂದರು । ಸುವ್ವಿ ।
ಇವನಿಗೆ ಏನ ಮಾಡಿದರೂ ಸಾಯಲಿಲ್ಲ । ಸುವ್ವಿ ।
ಮರಕೆನಾದರೆ ಹತ್ತಿಸಬೇಕು । ಸುವ್ವಿ ।
ಆಗ ಈ ಮರಕೆ ನೀನು ಹತ್ತು ಅಂತ । ಸುವ್ವಿ ।
ದೊಡ್ಡ ಮರಕೆ ಹತ್ತಿಸಿಬುಟ್ರು । ಸುವ್ವಿ ।
ಮರಕ್ಕೆನಾದರೆ ಹತ್ತಿಬುಟ್ಟ । ಸುವ್ವಿ ।
ಆಚಾರಿ ಈಚಾರಿ ಇದ್ದ ಮೊಟ್ಟೆಗಳ । ಸುವ್ವಿ ।
ಎಲ್ಲನು ಕತ್ತರಿಸಿ ಹಾಕಿ । ಸುವ್ವಿ ।
ಕೊನೆಯ ಮೊಟ್ಟೆಲಿ ಕೂತವನೆ ತಮ್ಮ । ಸುವ್ವಿ ।
ಇಸತಿ ನೀನು ಬಿದ್ದಿರು ತಮ್ಮ । ಸುವ್ವಿ ।
ನಿನ್ನ ಹೆಂಡ್ತಿ ಇವತಿಗೆ ಮುಂಡೆಕಾನೊ । ಸುವ್ವಿ ।
ನಮ್ಮೊಗ್ರು ಜನಕೆ ನಿನ್ನ ಹೆಂಡ್ತಿ । ಸುವ್ವಿ ।
ಅಣ್ಣ ನಿಮ್ಮೊಂದಿಗೆ ನಾನು ಹುಟ್ಟಿಲ್ಲವಣ್ಣ । ಸುವ್ವಿ ।
ನನ್ನನಾದರು ಕರಕಳ್ರಣ್ಣ । ಸುವ್ವಿ ।
ಅವನು ಮರದ ಮೇಲೆ ಶೋಕಪಡುತಾನೆ । ಸುವ್ವಿ ।
ಅಂಗಂದ್ರೂ ಅವರು ಕರಕಳಲಿಲ್ಲ । ಸುವ್ವಿ ।
ಅವರು ಊರಿಗಾದರೆ ಬಂದವರೆ । ಸುವ್ವಿ ।
ಅವರ ತಾಯಿ ಎಲ್ಲಪ್ಪ ಕಿರಿಮಗನು । ಸುವ್ವಿ ।
ಅಂಥ ತಾಯಿ ಕೇಳಿದ ಮಾತಿಗೆ ಏನಂದ । ಸುವ್ವಿ ।
ಅವನು ನೆನ್ನೆಯನಾದರೆ ಬಂದನಲ್ಲವ್ವ । ಸುವ್ವಿ ।
ಇತ್ತ ಮರದ ಮೇಲಿದ್ದವನಿಗೆ ಹೊಟ್ಟೆಗೆ ಅನ್ನಿಲ್ಲ । ಸುವ್ವಿ ।
ಕುಡಿಕಾದರೆ ನೀರಿಲ್ಲ । ಸುವ್ವಿ ।

ಅಲ್ಲಿಗಲ್ಲಿಗೂ ಹದಿನೈದು ದಿನಗಳು ಆಗೋದೊ । ಸುವ್ವಿ ।
ಹಲ್ಲಿ ಹಂಗೆ ಅತ್ತವನೆ । ಸುವ್ವಿ ।
ಅವರ ತಾಯಿಯು ಸಪುನಕೆ ಬಿದ್ದವನೆ । ಸುವ್ವಿ ।
ಆ ಸಪುನದಲ್ಲಿ ಏನಂತ ಹೇಳುತಾನೆ । ಸುವ್ವಿ ।
ನನ್ನ ಹೆಂಡ್ತಿನಾದರು ಕರಕಂಡು । ಸುವ್ವಿ ।
ಒಂದು ಮೊರದಲಿ ರತ್ನ ತುಂಬಿ । ಸುವ್ವಿ ।
ಒಂದು ಮೊರದಲಿ ಮುತ್ತ ತುಂಬಿ । ಸುವ್ವಿ ।
ಹಣ್ಣುಕಾಯಿ ತಕ್ಕೊಂಡು । ಸುವ್ವಿ ।
ಅರಿಸಿನ ಕುಂಕುಮ ತಕ್ಕೊಂಡು । ಸುವ್ವಿ ।
ನನ್ನ ಹೆಂಡ್ತಿ ಸಿಸ್ತು ಸ್ರುಂಗಾರ ಮಾಡಿಕೊಂಡು । ಸುವ್ವಿ ।
ಮೂಡಲಾಗಿ ಬರಲೆಂದು । ಸುವ್ವಿ ।
ಅಂಥ ಸಪುನವ ಕಂಡಳು ತಾಯಿ । ಸುವ್ವಿ ।
ಆ ಮಾತನಾದರೆ ಕೇಳಿಕೊಂಡು । ಸುವ್ವಿ ।
ಸೊಸೆನಾದರು ಕರಕೊಂಡು । ಸುವ್ವಿ ।
ಅವನು ಹೇಳಿದ ಸಾಮಾನೆಲ್ಲ ತಕ್ಕಂಡು । ಸುವ್ವಿ ।
ಆ ಮರದ ತಕೆ ಹೊರಟಾರು । ಸುವ್ವಿ ।
ಆ ಮರದ ಮೇಲಾದ್ರೆ ಕೂತುಕಂಡವನೆ । ಸುವ್ವಿ ।
ಇವರು ಅತ್ತೆ ಸೊಸೆ ಮರದಡಿಯಲ್ಲಿ । ಸುವ್ವಿ ।
ಅವರು ಮೇಲೆ ನೋಡಿ ಸಾಕಾಗವರೆ । ಸುವ್ವಿ ।
ಅವನ ಹೆಂಡ್ತಿ ಸೋಕ ಮಾಡ್ತಾವ್ಳೆ । ಸುವ್ವಿ ।
ಅವನು ಮೇಲೆ ಕೂತ್ಕಂಡು ಶೋಕ ಮಾಡುತಾನೆ । ಸುವ್ವಿ ।
ಅವನು ಏನಂತ ಶೋಕ ಮಾಡ್ತಾನೆ । ಸುವ್ವಿ ।
ಮರದ ಬುಡದಲ್ಲಿ ಎಲ್ಲನುವೆ । ಸುವ್ವಿ ।
ಮಡಗಿ ಪೂಜೆ ಮಾಡ್ರವ್ವ । ಸುವ್ವಿ ।
ನಿನ್ನ ಸೊಸೆ ಕೈಯಲ್ಲಿ ಮಾಡಿಸವ್ವ । ಸುವ್ವಿ ।
ಮಾಡಯ್ತಲೆ ಅವನು ಏನ್ ಹೇಳ್ತಾನೆ । ಸುವ್ವಿ ।
ನೀನು ತಿರುಗಿಕೊಂಡು ಮಾತ್ರ ನೋಡಬೇಡವ್ವ । ಸುವ್ವಿ ।
ನಾನು ನಿಮ್ಮೊಂದಿಗೆ ಇಳಿದು ಬರ್ತೀನಿ ಅವ್ವ । ಸುವ್ವಿ ।
ನೀವು ನೋಡದೆ ಮಾತ್ರ ಹೋಗಿರವ್ವ । ಸುವ್ವಿ ।
ಅದರಂತವರು ತಿರುಗಿ ನೋಡದೆ ಬರುತಾರೆ । ಸುವ್ವಿ ।
ಅವನು ಅರ್ಧಕ್ಕೆ ಆದ್ರೆ ಇಳಿದವನೆ । ಸುವ್ವಿ ।

ತಾಯಿ ಹೆತ್ತ ಕರುಳಿಗೆ ತಿರುಗಿ ನೋಡಿಬಿಡುತಾಳೆ । ಸುವ್ವಿ ।
ಇವಳು ತಿರುಗಿ ನೋಡುತಳೆ ಗಗನಕೆ । ಸುವ್ವಿ ।
ಮರ ಹೋಗಿ ಬುಡುತು । ಸುವ್ವಿ ।
ಗಗನಕೆ ಮರಹೊಯ್ತ್ತಲೆ । ಸುವ್ವಿ ।
ನೀನು ಯಾವತಿದ್ರುವೆ ಕೆಟ್ಟಿಕನ ಹೋಗು । ಸುವ್ವಿ ।
ಹಿಂದಕ್ಕೆ ಅವನು ಕರಕೊಂಡು । ಸುವ್ವಿ ।
ನಾನು ಇಸತಿ ಅಳು ಕೂಗಿನ ಹಕ್ಕಿ ಅಗುತೀನಿ । ಸುವ್ವಿ ।
ನಾನು ಸಂಜೆಗೆ ನಿಮ್ಮಯ ಮನೆ ಮೇಲ್ಕೆ ಬರುತೀನಿ । ಸುವ್ವಿ ।
ನಾನು ಆರು ಜನ ಅಣ್ಣದಿರನು ಕೂಗಿದಾಗ । ಸುವ್ವಿ ।
ಆರು ಜನುವೆ ಮಡಿದು ಹೋಗುತಾರೆ । ಸುವ್ವಿ ।
ಆರು ಜನ ಅತ್ತಿಗೆರುವೆ ಮಡಿದು ಹೊಗ್ತಾರೆ । ಸುವ್ವಿ ।
ಮನೆ ಮಠವೆ ಮಡಿದು ಹೊಯ್ತಾದೆ । ಸುವ್ವಿ !
ನನ್ನ ಹೆಂಡ್ತಿ ನೀನು ಕರಕೊಂಡು । ಸುವ್ವಿ ।
ಅಕ್ಕನ ಮನೆಗೆ ಸೇರಿಕವ್ವ । ಸುವ್ವಿ ।
ಹಿಂಗೆಂಗೋ ಬದುಕು ಮುಗಿದೋಯ್ತು । ಸುವ್ವಿ ।

# ನೀಲಮ್ಮ

ಅತ್ತಿಗೆ ಅತ್ತಿಗೆ ನೀಲಮ್ಮ ದೇವಿಯೊ ಮಾವಿನ ವನುವೆ । ಮಾವಿನ ವನುವೆ।
ಅವನಿಗೆ ಏಳು ಜನುವೆ ಗಂಡು ಮಕ್ಕಳು । ಮಾ. ವ ।
ಲಗ್ನವಾದರೂ ಮಾಡವನೆ ಮಕ್ಕಳಿಗೆ । ಮಾ. ವ ।
ಅವನು ಬೇಕಾದಂತ ಅನುಕೂಲವಾಗಿ ಬಾಳುತಾನೆ । ಮಾ. ವ ।
ಅವರ ಪಕ್ಕದ ಮನೆಯುವರು ಏನೆಂದು ನುಡಿದಾರು । ಮಾ. ವ ।
ಇವನ ಬಾಳಾಟ ನೋಡಿದರೆ ದೊಡಬಾಳು ಬಾಳುತಾನೆ । ಮಾ. ವ ।
ಇಲ್ಲ ಒಂದು ಕೆರೆಯುನಾದ್ರಿವನು ಕಟ್ಟಿಸಿದ್ದಾನೆ । ಮಾ. ವ ।
ಎಲ್ಲರು ಅವನ್ನೊಂದು ಜರಿದವರೆ । ಮಾ. ವ ।
ಜನಗಳ ಮಾತ ಕೇಳಿಕೊಂಡು ನೀಲಯ್ಯ । ಮಾ. ವ ।
ಮಂಚದ ಮೇಲೆ ಮಕಾಡೆ ಮಲಗವನೆ । ಮಾ. ವ ।
ಹಂಗಂದ ಮಾತಿಗೆ ನೀಲಯ್ಯ ಏನಂದ । ಮಾ. ವ ।
ನೀವು ಏಳು ಜನ ಗಂಡು ಮಕ್ಕಳು ಹುಟ್ಟಿದೀರಿ । ಮಾ. ವ ।
ಒಂದು ಕೆರೆಯುನಾದ್ರು ಕಟ್ಟಿಸಬೇಕು ಎಂದವನೆ । ಮಾ. ವ ।
ಆಗಲೆಂದು ಈರಯ್ಯ ಒಪ್ಪಿಕೊಂಡ । ಮಾ. ವ ।
ಏಳಿ ತಂದೆ ನೀವು ಸ್ನಾನನಾದ್ರೆ ಮಾಡೇಳಿ । ಮಾ. ವ ।
ಮಗನ ಮಾತ ಕೇಳಿಕೊಂಡವನು ಸ್ನಾನಾದರೆ ಮಾಡುತಾನೆ । ಮಾ. ವ ।
ಅವನು ವಡ್ಡರತಕೆ ಹೋಗುತಾನೆ । ಮಾ. ವ ।
ವಡ್ಡರನಾದರೆ ಕರಕೊಂಡು ಬಂದವನೆ । ಮಾ. ವ ।
ಅಪ್ಪನ ತಕೆ ಕರಕಂಡು ಬಂದವನೆ ಈರಯ್ಯ । ಮಾ. ವ ।
ಲಕ್ಷ್ಯಕ್ಷ ರೂಪಾಯಿ ಕೊಟ್ಟವನೆ ಈರಯ್ಯ । ಮಾ. ವ ।
ಒಂದು ಕೆರೆಯುನಾದ್ರೆ ನೀವು ಕಟ್ಟಬೇಕು । ಮಾ. ವ ।
ಅವರು ಒಪ್ಪಿಕೊಂಡು ತೆಗೆಯಕೆ ಹೋಗುತಾರೆ । ಮಾ. ವ ।
ಹನ್ನೆರಡು ಬಚ್ಚಲ ಮಡಗಬೇಕು ವಡ್ಡರೆ । ಮಾ. ವ ।
ಗುದ್ದಲಿ ಪಳಕ ತಗದವರೆ । ಮಾ. ವ ।

ಕೆರೆಯ ಹತ್ತಿರಕೆ ಪೂಜೆಯು ಮಾಡಲು ಹೊರಟವರೆ । ಮಾ. ವ ।
ಅವರು ಒಂದೇ ತಿಂಗಳ ಹೊತ್ತಿಗೆ ಕೆರೆಯನಾದ್ರು ತೆಗೆದವರೆ । ಮಾ. ವ ।
ಹನ್ನೆರಡು ಬಚ್ಚಲನೆ ಮಡಗವರೆ । ಮಾ. ವ ।
ಕುಡಿಯಕೊಂದನಿ ನೀರು ಬರಲಿಲ್ಲ ಆ ಕೆರೆಲಿ । ಮಾ. ವ ।
ಅವರು ಕಟ್ಟ್ಯಾಯ್ತು ಹೊರಟು ಹೋದರು । ಮಾ. ವ ।
ಬಾಯಾರಿ ಬಂದಕ್ಕಿ ಗಕ್ಕನೆ ನಿಂತವೆ । ಮಾ. ವ ।
ಎಂಥ ನಿಜಗಾರ ಕೆರೆಯನಾದ್ರೆ ಕಟ್ಟಸಿದ್ದಾನೊ । ಮಾ. ವ ।
ಬಾಯಾರಿ ಬಂದ ಗೋವುಗಳು ಗಕ್ಕನೆ ನಿಂತವೆ । ಮಾ. ವ ।
ಅವುಗಳೆಲ್ಲವು ಎಂಥ ನಿಜಗಾರ ಕೆರೆಯ ಕಟ್ಟಸಿದ್ದಾನೊ । ಮಾ. ವ ।
ಎಲ್ಲಾರೂ ನೀಲಯ್ಯಗೌಡನ ಜರಿಯುತವರೆ । ಮಾ. ವ ।
ಆ ಮಾತ್ಗಳ ಕೇಳಿಕೊಂಡು ಶೋಕನಾದ್ರೆ ಮಾಡ್ತನೆ । ಮಾ. ವ ।
ಆ ದಿನ ಇಳ್ಕೊತ್ತು ಸಪ್ಪನದಲ್ಲಿ ಏನ ಹೇಳಿತು । ಮಾ. ವ ।
ನಿನ್ನ ಹಿರಿಯ ಸೊಸೆನಾದ್ರು ಕೊಟ್ಟರೆ ನೀಲಯ್ಯ । ಮಾ. ವ ।
ದಡಬಡನೆ ನೀಲಯ್ಯ ಎದ್ದುಕುಂತವನೆ ಮಂಚದ ಮೇಲೆ । ಮಾ. ವ ।
ಇಂಥ ಸಪುನವ ಕಂಡೆನಲ್ಲ ಅಯ್ಯೋ ಶಿವಶಿವ । ಮಾ. ವ ।
ನನ್ನ ಸೊಸೆ ಹಿರಿಯವಳು ನೀಲಮ್ಮ ಅನ್ನೋಳು । ಮಾ. ವ ।
ಅವಳಾದ್ರೆ ಏಳು ತಿಂಗಳ ಬಿಮ್ಮನ್ಸೆ ನೀಲಮ್ಮ । ಮಾ. ವ ।
ನಾನು ಹೇಗಪ್ಪ ನನ್ನ ಸೊಸೆಗೆ ಹೀಗಂತ ಹೇಳಲಿ । ಮಾ. ವ ।
ನನ್ನ ತಮ್ಮದಿರು ಆರು ಜನ ಮೂರ್ಖರು । ಮಾ. ವ ।
ನನ್ನ ಹೆಂಡತಿಯ ನೀವು ಏನು ಹೊಟ್ಟೆ ಉರಿಸಬೇಡಿ । ಮಾ. ವ ।
ಅವನು ಮಲಗಿ ಬಹಳ ಯೋಚನೆ ಮಾಡ್ತಾನೆ । ಮಾ. ವ ।
ಅವನು ಮಲಗಿದ್ಹೊತ್ತಿನಲ್ಲಿ ಹಿರಿಯ ಮಗ ಬರುತಾನೆ । ಮಾ. ವ ।
ನಾನು ದಂಡಿಗಾದರೆ ಹೋಗಬೇಕು । ಮಾ. ವ ।
ನನಗೆ ಒಪ್ಪಿ ವೀಳ್ಯ ಕೊಡಯೇಳು । ಮಾ. ವ ।
ನಮ್ಮ ಕುಲದವರು ಎಲ್ಲಿ ಹೊಯ್ತಾರೆ ಅಪ್ಪಯ್ಯ । ಮಾ. ವ ।
ನಾನು ಹೊಯ್ತಿನಿ ದಂಡಿಗೆ ಕಣಪ್ಪಯ್ಯ ಅನುತಾನೆ । ಮಾ. ವ ।
ಅಪ್ಪನಿಗೆ ಬುದ್ಧಿ ಏನಂತೇಳುತಾನೆ । ಮಾ. ವ ।
ನಾನು ಬರುವುದು ಆರುತಿಂಗಳು ದಂಡಿನಿಂದ । ಮಾ. ವ ।
ನನ್ನ ಹೆಂಡತಿ ಏಳು ತಿಂಗಳ ಬಿಮ್ಮನ್ಸೆ । ಮಾ. ವ ।
ತಮ್ಮದಿರನು ಅವನು ಕರೆದವನೆ । ಮಾ. ವ ।
ನಿಮ್ಮತ್ತಿಗೆ ನೋಡಿದರ ಜೋಪಾನದಲ್ಲಿಡಬೇಕು । ಮಾ. ವ ।
ನಾದಿನಿಯನು ಭಾವ (ಈರಯ್ಯ) ಕರೆದವನೆ ಏನಂತ ಹೇಳುತಾನೆ । ಮಾ. ವ ।

ನನ್ನ ಹೆಂಡ್ತಿಯು ಜೋಪಾನದಲ್ಲಿಡಬೇಕು । ಮಾ. ವ ।
ದಂಡಿಗಾದರೆ ಬುತ್ತಿಕಟ್ಟವ್ವ । ಮಾ. ವ ।
ಎಲ್ಲರು ಐಭೋಗದಲಿ ಕಳುಹ ಬನ್ನಿ ನನ್ನ । ಮಾ. ವ ।
ವಾಲಗ ಸಹಿತವಾಗಿ ಹೊರಟವನೆ । ಈರಯ್ಯ । ಮಾ. ವ ।
ಅವನು ದಂಡಿಗಾದರೆ ಹೋಗಬುಟ್ಟ ಈರಯ್ಯ । ಮಾ. ವ ।
ಇವನು ಹೋಗಿದ್ದೆ ಸರಿ ಅಪ್ಪನು ಮಲಗವನೆ । ಮಾ. ವ ।
ಇಷ್ಟು ಬುದ್ಧಿಯ ನನ ಮಗ ಹೇಳವನೆ । ಮಾ. ವ ।
ನನ್ನ ಸೊಸೆಗೆ ನಾನು ಏನಂತ ಹೇಳಲಿ । ಮಾ. ವ ।
ಅವನು ಸ್ನಾನನು ಮಾಡಿಲ್ಲ ಜಪವನು ಮಾಡಿಲ್ಲ । ಮಾ. ವ ।
ಸೊಸೆಯು ನೀಲಮ್ಮ ಬಾಗಿಲ ತೆಗೆದು । ಮಾ. ವ ।
ಯಾಕೆ ಮಾವಯ್ಯ ಮಲಗಿದ್ದರೀಯು । ಮಾ. ವ ।
ತಾನನಾದರೆ ಮಾಡ್ಹೇಳಿ । ಮಾ. ವ ।
ಊಟನಾದರೆ ಮಾಡೇಳಿ ಮಾವಯ್ಯ । ಮಾ. ವ ।
ಊಟ ಯಾರಿಗೆ ಬೇಕಮ್ಮ ತಾನ ಯಾರಿಗೆಬೇಕು । ಮಾ. ವ ।
ನಿಮಗೆ ಬಂದ ಕಷ್ಟ ನಮಗಲ್ಲವ ಮಾವಯ್ಯ । ಮಾ. ವ ।
ನನ್ನ ಕಷ್ಟ ನೀನು ತೀರಿಸುತೀಯವ್ವ ಅಂದವನೆ । ಮಾ. ವ ।
ತೀರಿಸುತೀನಿ ನಾನು ಏಳಿ ಮಾವಯ್ಯ ಅಂದವಳೆ । ಮಾ. ವ ।
ನಾವು ಕಟ್ಟಿಸಿದ ಕೆರೆ ಅಂದವನೆ ನೀಲಮ್ಮಗೆ । ಮಾ. ವ ।
ಅಲ್ಲಿಗೆ ನೀನು ಹೋದರೆ ನೀರು ಬರುತದಂತೆ ನೋಡಮ್ಮ । ಮಾ. ವ ।
ಅದಕ್ಕೆ ನೀವು ಹೆದರಿದಿರ ಏಳೀರಿ ಮಾವಯ್ಯ । ಮಾ. ವ ।
ನೀವು ಸಂತೋಷದಿಂದ ಇಳ್ಯೇವ ಕೊಡಏಳಿ । ಮಾ. ವ ।
ಅಂಗನ್ನುತಲೆ ಎದ್ದವನೆ ಮಾವಯ್ಯ । ಮಾ. ವ ।
ತಾನನಾದರೆ ಮಾಡವನೆ ನೀಲಯ್ಯ । ಮಾ. ವ ।
ಊಟನಾದರೆ ಮಾಡವನೆ ನೀಲಯ್ಯ । ಮಾ. ವ ।
ಮಾವನ ಏನಂತ ಕೇಳುತಾಳೆ ಅವಳಿನ್ನು । ಮಾ. ವ ।
ನಮ್ಮ ತಾಯಿ ಮನೆಗೆ ನನ್ನ ಕಳುಹಿಬನ್ನಿ ಹೋಗುತೀನಿ । ಮಾ. ವ ।
ನೀನು ಹೋಗಿ ಬವ್ವ ಅಂದು ಇಳ್ಯೆನಾದ್ರು ಕೊಟ್ಟವನೆ । ಮಾ. ವ ।
ಅವಳು ಶಿಸ್ತು ಸೃಂಗಾರ ಆಗವಳೆ ನೀಲಮ್ಮ । ಮಾ. ವ ।
ಅವಳು ಮಾವಗೆ ಶರಣು ಮಾಡವಳೆ ನೀಲಮ್ಮ । ಮಾ. ವ ।
ಅವಳು ಅಪ್ಪನ ಮನೆಗೆ ಹೊರಟವಳೆ ನೀಲಮ್ಮ । ಮಾ. ವ ।
ಅವಳು ತೌರು ಮನೆಗೆಂದು ಹೋಗಿಬಿಟ್ಟಳು ನೀಲಮ್ಮ । ಮಾ. ವ ।
ಅವರ ಅತ್ತಿಗೆಗೆ ಬಹಳ ಸಂತೋಷವೆ ಆಗಯ್ತೆ । ಮಾ. ವ ।

ಆವರ ತಾಯಿ–ತಂದ್ಗೆಬಲು ಸಂತೋಷ ಆಗದೆ । ಮಾ. ವ ।
ಆವರ ತಾಯಿ ಏನಂತ ಕೇಳುತಾಳೆ ನೀಲಮ್ಮನ । ಮಾ. ವ ।
ಎಂದು ಬಾರದ ಮಗಳು ಇಂದೇನು ಬಂದವ್ವ । ಮಾ. ವ ।
ಅವಳ ಅಪ್ಪ ಬಂದವನೆ ಏನಂತ ನುಡಿದವನೆ । ಮಾ. ವ ।
ಎಂಥ ಮಗಳವ್ವ ಇಂದೇನು ಬಂದವ್ವ । ಮಾ. ವ ।
ಅವರ ಅಣ್ಣಂದೀರು ಐದು ಜನ ಬಂದು ಏನಂದು ಕೇಳವರೆ । ಮಾ. ವ ।
ಎಂದು ಬಾರದ ತಂಗಿ ಇಂದೇನು ಬಂದವ್ವ । ಮಾ. ವ ।
ನಾನು ತಿಂಗಳ ಬಿಮ್ಮನ್ಸೆ ಅವ್ವಯ್ಯ । ಮಾ. ವ ।
ನಾನು ಮೈಯಾರಿಂಗದ ಮೇಲೆ ಬಂದಾನೆ । ಮಾ. ವ ।
ಅದ್ಕೆ ಎಲ್ಲಾರ್ನು ನೋಡಿ ಹೋಗೋದ ಅಂತ ಬಂದಿವ್ನಿ । ಮಾ. ವ ।
ಅವರೆಲ್ಲರಿಗೂ ಬಾಳ ಸಂತೋಷವಾಯಿತು । ಮಾ. ವ ।
ಅವರು ಬಾರಿ ಅಡಿಗೇನ ಮಾಡವರೆ ಮಗಳಿಗೆ । ಮಾ. ವ ।
ಅವಳು ಊಟಉಪಚಾರ ಮುಗಿಸಿ ಏನಂತ ನುಡಿದವಳೆ । ಮಾ. ವ ।
ನನಗೆ ಬಹಳ ಸಂತೋಷವಾಯ್ತು ಕಾಣವ್ವ ನಾನಿನ್ನು ಬರ್‍ತೀನಿ । ಮಾ. ವ ।
ಎಂದವಳೆ ಗಂಡನ ಮನೆಕಡೆ ಹೊರಟವಳೆ । ಮಾ. ವ ।
ಬಂದು ಮಾವನಿಗೆ ಶರಣು ಮಾಡ್ತಾಳೆ । ಮಾ. ವ ।
ನಾನು ಕೆರೆಗಾದ್ರು ಹೋಗುತೀನಿ ಮಾವಯ್ಯ । ಮಾ. ವ ।
ನಾನೇಳಿದ ಸಾಮಾನ ಕೊಂಡುತನ್ನಿ ದಾಮಯ್ಯ । ಮಾ. ವ ।
ನನಗೊಂದು ಹೊಸಸೀರೆ ಕೊಂಡುಬನ್ನಿ ಮಾವಯ್ಯ । ಮಾ. ವ ।
ಹಣ್ಣುಕಾಯಿ ಗಂಧದಕಡ್ಡಿ ಕೊಂಡುಬನ್ನಿ ಅಂದವಳೆ । ಮಾ. ವ ।
ವಾಲಗದವ್ರ ಕರೆಸಿ ಮಾವಯ್ಯ ಅಂದವ್ಳೆ । ಮಾ. ವ ।
ಮಡಿಯನಾದ್ರೆ ತರಿಸಿ ಮಾವಯ್ಯ ಅಂದವಳೆ । ಮಾ. ವ ।
ತಾನ ಮಡಿನಾದರೆ ನೀಲಮ್ಮ ಮಾಡವಳೆ । ಮಾ. ವ ।
ಶಿಸ್ತು ಸೃಂಗಾರ ಆಗವಳೆ ನೀಲಮ್ಮ । ಮಾ. ವ ।
ಅತ್ತೆ ಕಾಲಿಗೆ ಶರಣು ಮಾಡವಳೆ । ಮಾ. ವ ।
ಮಾವನ ಕಾಲಿಗೆ ಶರಣು ಮಾಡವಳೆ । ಮಾ. ವ ।
ನೀವು ಸಂತೋಷದಿಂದ ನನ್ನ ಕಳುಹಿಸಿ । ಮಾ. ವ ।
ಮುಂದೆ ನಡೆಮುಡಿಯವರ ಬಿಟ್ಟವಳೆ । ಮಾ. ವ ।
ಬೇಕಾದಂತ ಪರುಷೆ ಸೇರವರೆ । ಮಾ. ವ ।
ಮುಂದುಗಡೆ ವಾಲಗದವರ ಬುಟ್ಟವಳೆ । ಮಾ. ವ ।
ಹಣ್ಣು ಕಾಯಿ ತಟ್ಟೆ ಹಿಡಿದವಳೆ ನೀಲಮ್ಮ । ಮಾ. ವ ।

ಅವಳು ಸಂತೋಷದಿಂದ ಮೇಲೆ ಹೊಯ್ತಾನೈ ನೀಲಮ್ಮ । ಮಾ. ವ ।
ಆ ಕೆರೆ ಏರಿ ಮೇಲೆ ಹೋಗಿ ನಿಂತವಳೆ ನೀಲಮ್ಮ । ಮಾ. ವ ।
ಅರಿಸಿನ ಕುಂಕುಮ ಇಕ್ಕವಳೆ ಏರಿಗೆ । ಮಾ. ವ ।
ಹಣ್ಣು ಕಾಯಿಂದ ಪೂಜೆ ಮಾಡವಳೆ । ಮಾ. ವ ।
ಪೂಜೆ ಮಾಡಿದ ಮೇಲೆ ಕೈ ಎತ್ತಿ ಮುಗಿದವಳೆ । ಮಾ. ವ ।
ಕೆರೆಯ ಒಳಕಾದರೆ ಇಳಿದವಳೆ ನೀಲಮ್ಮ । ಮಾ. ವ ।
ಕೆರೆಯ ಒಳಕೆ ಇಳಿದ ಮೇಲೆ ಅಂಗಾಲಿಗೆ ನೀರು ಬಂದಿತು । ಮಾ. ವ ।
ಅಂಗಾಲಿಗೆ ಬಂದ ಮೇಲೆ ಕುಣಕಾಲಿಗೆ ಬಂದದೆ । ಮಾ. ವ ।
ಕುಣಕಾಲಿಗೆ ಬಂದ ನೀರು ನಡಿಗೆ ಬಂದದೆ । ಮಾ. ವ ।
ನಡೀಗೆ ಬಂದ ನೀರು ಕತ್ತಿಗೆ ಬಂದದೆ । ಮಾ. ವ ।
ಮುಳುಗಿಕೊಂಡಿದ್ದ ನೋಡಿ ಪಾರ್ವತಿ ಪರಮೇಶ್ವರ । ಮಾ. ವ ।
ಇವಳು ಎಂಥ ನಿಜಗಾತಿ ಪಾಳುಗೆರೆ ತುಂಬೀತು । ಮಾ. ವ ।
ಆ ಪರಮೇಶ್ವರನೆ ಅಂಗೈಲಿ ಹಿಡಿದವನೆ । ಮಾ. ವ ।
ಅವಳ ನಿಜ ನೋಡಿ ಒಳಗೆ ನೆಲಮಾಳಿಗೆ ಕಟ್ಟಿಸವರೆ । ಮಾ. ವ ।
ಅವಳಿಗೆ ಬೇಕಾದಂತ ದೀರರು ಉಪಕಾರ ಮಾಡಿದರು । ಮಾ. ವ ।
ಅವಳಿಗೆ ಅಮವಾಸ್ಯೆಗೆ ಒಂಬತ್ತು ತಿಂಗಳು । ಮಾ.ವ ।
ಅಲ್ಲೇನಾದ್ರು ಅವಳಿಗೆ ವ್ಯೆಯಾರಿಂಗಡೆ । ಮಾ. ವ ।
ನೀಲಮ್ಮನಿಗೆ ಅಲ್ಲೆ ಗಂಡು ಮಗನು ಜನಿಸಿದನು । ಮಾ. ವ ।
ಹೆರಿಗೆನಾದರೆ ದೇವ ಕನ್ನಿಕೆಯರು ಬಂದು ಮಾಡ್ತಾರೆ । ಮಾ. ವ ।
ಹಂಗಾಡಿ ಹಿಂಗಾಡಿ ತಿಂಗಳ ಮಗನೆ ಆದಾನು । ಮಾ. ವ ।
ಎರಡು ತಿಂಗಳ ಮಗನೆ ಆದಾನು । ಮಾ. ವ ।
ಆರೊಂಬತ್ತು ತಿಂಗಳ ಮಗನೆ ಆದಾನು । ಮಾ. ವ ।
ಆ ಮಗನಾದ್ರೇನಂತ ಕೇಳುತಾನೆ । ಮಾ. ವ ।
ಅವ್ವಯ್ಯ ಅವ್ವಯ್ಯ ನೀನೊಬ್ಬಳೆ ಇದ್ದೀಯ । ಮಾ. ವ ।
ನನಗೆ ಅಪ್ಪ ಇಲ್ಲವ ತೋರವ್ವ ಎಂದವನೆ । ಮಾ. ವ ।
ನಿಮ್ಮಪ್ಪ ದಂಡಿಗೆ ಹೋಗವರೆ । ಮಾ. ವ ।
ದಂಡಿಗೆ ಹೋದಪ್ಪ ಇನ್ನಾವ ಬಂದಾನು । ಮಾ. ವ ।
ಅವ್ವ ನಾ ಆಡಕಾದ್ರು ಹೊಯ್ತಿನಿ ಅವ್ವಯ್ಯ । ಮಾ. ವ ।
ಅಯ್ಯೊ ಹೋಗಬೇಡ ಕಣೊ ಒಬ್ಬನೆ ಮಗನೆ । ಮಾ. ವ ।
ದಂಡಿಗೆ ಹೋದ ಅಪ್ಪಯ್ಯನ ಕನಸಿಗೆ ಹೋಗವನೆ । ಮಾ. ವ ।
ದಂಡಿಗೋದಪ್ಪನಿಗೆ ಏನಂತ ಹೇಳಾನು । ಮಾ. ವ ।

ದಂಡಿನವರೊಂದಿಗೆ ಏನಂತ ಹೇಳ್ತಾನೆ । ಮಾ. ವ ।
ನನ್ನ ಹೆಂಡ್ತಿ ನೀಲಮ್ಮನಿಗೆ ಏನು ಕಷ್ಟವೋ । ಮಾ. ವ ।
ನಾನು ಹೊಯ್ತಿನಿ ನಾನು ಮನೆಗೆ ನಾನು । ಮಾ. ವ ।
ದಂಡಿನಿಂದ ಆವನೆ ಹೊರಟವನೆ । ಮಾ. ವ ।
ಆರು ದಿನಕೆ ಬರೊ ಪಯಣ ಮೂರು ದಿನಕೆ ಬಂದವನೆ । ಮಾ. ವ ।
ಕೆರೆಯ ತಕೆ ಬಂದವನೆ ಈರಯ್ಯ । ಮಾ. ವ ।
ನಾನು ಹೋಗಾಗ ಪಾಳುಗೆರೆ ಇತ್ತಲ್ಲ । ಮಾ. ವ ।
ಇಷ್ಟು ಮಟ್ಟಿಗೆ ನೀರು ಬಂದದೆ ಅಂತ ಸಂತೋಷ । ಮಾ. ವ ।
ಈ ಕೆರೆಗೆ ಒಂದೆ ಹೂವು ಅದೆ ಅಲ್ಲಿ ಅಂತವನೆ । ಮಾ. ವ ।
ಅಲ್ಲಿರೊ ತಾವರೆ ಹೂವು ಇಲ್ಲಿಗೆ ಬಂದರೆ । ಮಾ. ವ ।
ಅಲ್ಲಿದ್ದ ಹೂವು ಏರಿತಕೆ ಬಂದದೆ । ಮಾ. ವ ।
ಅಯ್ಯೋ ಏರಿಗೆ ಬಂದ ಹೂವು ಕೈಯಿಗೆ ಸಿಕ್ಕಲಿ । ಮಾ. ವ ।
ಅವನು ಬಾಯೆಂದು ಹೂವು ಕೈಯಿಗೆ ಸಿಕ್ಕಲಿ । ಮಾ. ವ ।
ಅವನು ಬಾಯೆಂದು ಕರಿತಲೆ ಹತ್ತಿರಕ್ಕೆ ಬಂದದೆ । ಮಾ. ವ ।
ಮುಟ್ಟುಕೋದರೆ ಏನೆಂದುದೆ ಆ ಹೂವು । ಮಾ. ವ ।
ಮುಟ್ಟಬೇಡ ಮುಟ್ಟಸ್ಸಯ್ಯ ಮುಟ್ಟಿದರೆ ಮಾಸೋದೇನು । ಮಾ. ವ ।
ಹಂಗಂದ ಆ ಹೂವು ಹಿಂದಕೆ ಹೋದಾದು । ಮಾ. ವ ।
ಹಿಂದಕೆ ಹೋದಾರೆ ತಿರುಗಿ ಬೇಡುತಾನೆ । ಮಾ. ವ ।
ಅಪ್ಪಂದ ಹೂವು ಇಲ್ಲಿಗೆ ಬರಲಂದ । ಮಾ. ವ ।
ತಿರುಗ ಬಂದೇನಂತ ಹೇಳ್ತದೆ ಆ ಹೂವು । ಮಾ. ವ ।
ನಿನಗೆ ಎಲ್ಲಾನು ನಾನಾದ್ರೆ ಹೇಳ್ತಿನಿ ಕೇಳಪ್ಪ । ಮಾ. ವ ।
ನಿನಗೆ ಎಲ್ಲಾನು ನಾನಾದ್ರೆ ಹೇಳುತೀನಿ ಕೇಳಪ್ಪ । ಮಾ. ವ ।
ನನ್ನ ಅಜ್ಜನಾದ್ರೆ ಕರೆಸಪ್ಪ ಇಲ್ಲಿಗೆ । ಮಾ. ವ ।
ತಾತನಾದ್ರ ಕರೆಸಪ್ಪ ಇಲ್ಲಿಗೆ । ಮಾ. ವ ।
ಚಿಕ್ಕಪ್ಪ ಚಿಕ್ಕಮ್ಮದೀರೈದು ಆರು ಮಂದಿ ಕರಿಸಪ್ಪ । ಮಾ. ವ ।
ಎಲ್ಲರನು ಕರಿಸದೆ ಆ ಹೂವು । ಮಾ. ವ ।
ಇವರೆಲ್ಲರನು ಕರಿಸಿದಲ್ಲ ನಮ್ಮ ತಾತನ್ನ ಕರಿಸಿರಪ್ಪ । ಮಾ. ವ ।
ನನ್ನ ಸೋದರ ಮಾವದಿರ ಕರಿಸಿರಪ್ಪ ಅಂದವನೆ । ಮಾ. ವ ।
ಹಾಗಂದ ಮಾತ ಕೇಳಿ ಎಲ್ಲರನು ಕರಸವನೆ । ಮಾ. ವ ।
ಎಲ್ಲರನು ಕರಸಿ ಏರಿ ಮೇಲೆ ಕೂರಿಸವನೆ । ಮಾ. ವ ।
ಅಲ್ಲಿದ್ದ ಹೂವು ಇಲ್ಲಿಗೆ ಬಾ ಹೂವೆ । ಮಾ. ವ ।
ಆಮೇಲೆ ಏನ ಹೇಳ್ತದೆ ತಾತನ ಕರಿತದೆ । ಮಾ. ವ ।

ತಾತ ಅಂದೇಟಿಗೆ ಅಯ್ಯೋ ಹೂವೆ ಎಂದು ಹೊಯ್ತುದೆ । ಮಾ. ವ ।
ಹೂವು ಮುಟ್ತ್ತಲೆ ಏನು ಅಂತಪೆ । ಮಾ. ವ ।
ಮುಟ್ಟಬೇಡ ತಾತ ನಾ ಮುಟ್ಟಿದರೆ ಮಾಸೇನು । ಮಾ. ವ ।
ಅವರ ಸೋದರ ಮಾವದಿರು ಮುಟ್ಟಕೆ ಹೊಯ್ತಾರೆ । ಮಾ. ವ ।
ನನ್ನ ಮುಟ್ಟಬೇಡ ಮಾವಯ್ಯ ಮುಟ್ಟಿದರೆ ಮಾಸೇನು । ಮಾ. ವ ।
ನಿಮ್ಮೆಲ್ಲರ ಮುಖವನು ನೋಡುತೀನಿ । ಮಾ. ವ ।
ನೀವೆಲ್ಲ ಹೋಗಿ ಸಂತೋಷದಿಂದ । ಮಾ. ವ ।
ನಪ್ಪಯ್ಯನ ನಾನು ಕರೆದುಕೊಂಡು ಹೋಗುತೀನಿ । ಮಾ. ವ ।
ನೆಲಮಾಳಿಗೆಯೊಳಗೆ ರಸ್ತೆಯನೆ ಮಾಡಿಸದೆ । ಮಾ. ವ ।
ಅಪ್ಪನಾದರೆ ಕರಕೊಂಡು ಹೋಗಿನ್ನು ! ಮಾ. ವ ।
ಅವ್ವನ ತಾಕೆ ಕರಕೊಂಡು । ಮಾ. ವ ।
ಅಪ್ಪನ ಕರಕೊಂಡು ಬಂದಿವಿನಿ ಅನುತಾನೆ । ಮಾ. ವ ।
ದಂಡಿಗೋದ ಅಪ್ಪ ಇನ್ನೆಲ್ಲಿ ಬಂದಾರು । ಮಾ. ವ ।
ಈ ಗಂಗೆಯೊಳಕೆ ಬಂದರ ಬಾ ಕಂದ । ಮಾ. ವ ।
ಈಚೆಗೆ ಬಂದು ನೋಡ್ತಾಳೆ ನೀಲಮ್ಮ । ಮಾ. ವ ।
ನನ್ನ ಮಗನ್ನ ನೋಡಿದರೆ ಬಾಲತ್ವ । ಮಾ. ವ ।
ನೀನು ಯಾವತರದಿಂದ ಕರೆದು ತಂದೆ ಮಗನೆ । ಮಾ. ವ ।
ಆರತಿ ಅಕ್ಷತೆ ಮಾಡ್ತಾಳೆ ನೀಲಮ್ಮ । ಮಾ. ವ ।
ಅವನ ಪಾದವನ್ನೆ ಹಿಡಿದವಳೆ ನೀಲಮ್ಮ । ಮಾ. ವ ।
ಅವನು ನೆಲಮಾಳಿಗೆಯೊಳಗೆ ಕುಳಿತವನೆ ಈರಯ್ಯ । ಮಾ. ವ ।
ಅವರು ಸಂತೋಷದಿಂದ ಬಾಳ್ತಾರೆ ಒಳಗೆ । ಮಾ. ವ । ಮಾ. ವ ।

(ಕೊನೆಯಲ್ಲಿ ಎರಡು ಬಾರಿ ಸೊಲ್ಲು)

# ಸತ್ಯವಂತೆ ಹಡೆದವ್ವ

ಭೂಲೋಕದಲ್ಲಿ ಹುಟ್ಟಿದಳು ಬೇಗನಾದರೆ ಮುದುಕಮ್ಮ । ಸುವಾ ಬಸುವ್ವಿ ।
ಅಂಥ ಮುದುಕಿಗೆ ಮಕ್ಕಳಿಲ್ಲವೆ ವರವನಾದರೂ ಬೇಡುತಾಳೆ । ಸು.ಸು ।
ವರವ ಬೇಡಿದ ಕಾಲಕಾಗಲೆ ಶಿವನೆ ಪ್ರತ್ಯಕ್ಷನಾದನು । ಸು.ಸು ।
ಪ್ರತ್ಯಕ್ಷವಾದ ತಕ್ಷಣಕೆ ಒರ್ವಮಗನೆ ಹುಟ್ಟಿದನು । ಸು.ಸು ।
ಅಂಥ ಮಗನಿಗೆ ಮುದುಕಮ್ಮ ಲಗ್ನವಾದರೆ ಮಾಡುತಾರೆ । ಸು.ಸು ।
ಲಗ್ನವಾದರೆ ಮಾಡುತಾರೆ ಬಡಗಲ ದೇಶಕೆ ಹೋಗುತಾರೆ । ಸು.ಸು ।
ಬೆಡಗಿನ ಹುಡುಗಿಯ ತರುತಾರೆ ಮಗನಿಗೆ ಮದುವೆಯ ಮಾಡ್ತಾರೆ । ಸು.ಸು ।
ಅತ್ತೆಗಾದರೊಂದಾಗದಣ್ಣ ಸೊಸೆಗೆ ಮೊದಲೆ ಆಗದಯ್ಯ । ಸು.ಸು ।
ಒಣರೊಟ್ಟಿ ಕರಸೀಕು ಅತ್ತೆಗೆ ಸೊಸೆ ಕೊಡ್ತಾಳೆ । ಸು.ಸು ।
ಅತ್ತೆಗಾದರೆ ನೆಲವಾಯ್ತು ಸೊಸೆಗೆ ಮಂಚವಾಯ್ತು । ಸು.ಸು ।
ಒಣರೊಟ್ಟಿ ತಾಗೊಡ್ಡುಗಾರ ಮುದುಕಿ ಕೈಲಿ ಹಿಡಿದವರೆ । ಸು.ಸು. ।
ಮುದುಕಿಯು ಕೈಲಿ ಹಿಡುಕೊಂಡು ಶಿವ ಪಾರ್ತನೆಯ ಮಾಡುತಾಳೆ । ಸು.ಸು ।
ಹಲ್ಲಿಲ್ಲದ ಮುದುಕಮ್ಮ ನಾ ಹೇಗೆ ಒಣರೊಟ್ಟಿ । ಸು.ಸು !
ನಾ ಹೇಗೆ ತಿನ್ನಲಿ ಗೊಡ್ಡಾಗ್ರ । ಸು.ಸು ।
ಹಾಗಂದ ಮಾತ ಸೊಸೆ ತಕ್ಷಣ ತಾ ಕೇಳುತಾಳೆ । ಸು.ಸು ।
ತಾಳೆ ಅತ್ತೆ ನನಗಂಡ ಬರಲಿ ತಕ್ಕ ಪ್ರಾಯಶ್ಚಿತ ಮಾಡಿಸೇನು । ಸು.ಸು ।
ಮಹಾಂತ ಪ್ಯಾಟೆಯಿಂದ ನನಗಂಡೆ ಬರುತಾನೆ । ಸು.ಸು ।
ಬಂದಂಥ ಗಂಡನಿಗೆ ಏನಂದು ಬುದ್ಧಿ ಹೇಳುತಾಳೆ । ಸು.ಸು ।
ಕೇಳಿ ಕೇಳಿ ನನಗಂಡಯ್ಯ ನನ್ನ ಮಾತನೆ ಕೇಳಿರಿ । ಸು.ಸು ।
ನಿಮ್ಮ ತಾಯಿಂದ ನನಗೇನಾದರೂ ಬಾಳಿಲ್ಲ । ಸು.ಸು ।
ನಾನಾದರೆ ಬಾಳಲಾರೆ ನಮ್ಮೂರಿಗೆ ನಾನು ಹೋಗುತೀನಿ । ಸು.ಸು ।
ಅದಕೇನ ಮಾಡಲೆಣ್ಣೆ ನನ್ನ ಹೆಂಡ್ತಿ ಪುಟ್ಟರತ್ನ । ಸು.ಸು ।
ನಿಮ್ಮ ತಾಯಿಯ ಹಿಡಕಂಡು ಕೈಕಾಲನು ಕಟ್ಟಯ್ಯ । ಸು.ಸು ।
ಕೈಕಾಲ್ಗಳ ಕಟ್ಟಿದ ಗಂಡಯ್ಯ ಮಡುವಿಗೆ ಕೊಂಡ್ಹೋಗಿ ಎಸೆದು ಬಾರೋ । ಸು.ಸು ।

ಹೆಂಡತಿ ಮಾತನ ಕೇಳಿದೋನು ಏನೆಂದು ಹೆಂಡ್ತಿಗೆ ಹೇಳುತಾನೆ । ಸು.ಸು ।
ಹೆತ್ತ ತಾಯಿಯ ಕೈಕಾಲ ನಾಕಟ್ಟಲಾರೆ ಎಲೆ ಪುಟ್ಟರತ್ನ । ಸು.ಸು ।
ಒಂಬತ್ತು ತಿಂಗಳು ಹೊತ್ತು ಹಡೆದ ತಾಯಿಯ ಹೇಗೆ ಕೊಲ್ಲಲಿ ನಾನೀಗ
। ಸು.ಸು ।

ಹಾಗಾದರೆ ನಿಮ್ಮೂರಿನಲ್ಲಿ ನೀವೇ ಬಾಳಿಕೊಳ್ಳಿ । ಸು.ಸು ।
ನಮ್ಮೂರಿಗೆ ನಾನೇ ಹೋಗುತೀನಿ । ಸು.ಸು ।
ಕಂಕುಳಲ್ಲಿ ಸೀರೆ ಇರಿಕವಳೆ ಹಿತ್ತಲು ಬಿದ್ದು ಓಡ್ತಾಳೆ । ಸು.ಸು ।
ಬೇಡ ಬೇಡ ಎಲೆ ಪುಟ್ಟರತ್ನ ನನ ಮಾತನಾದರೆ ಕೇಳೆಣ್ಣೆ । ಸು.ಸು ।
ನೀನೇಳಿದಂತೆ ಮಾಡ್ತಿನಿ ಎಂದು ಹೆಂಡ್ತಿಯನಾದರು ಕರೆತಂದ । ಸು.ಸು ।
ಅಟ್ಟಕಾದರು ಹತ್ತವನೆ ಸೂಲಿನ ಹಗ್ಗವ ತೆಗೆದವನೆ । ಸು.ಸು ।
ಹೆತ್ತತಾಯಿಯ ಹಿಡಿದವನೆ ಕಾಲುಕೈಗಳ ಬಿಗಿದವನೆ । ಸು.ಸು ।
ಹಸುಬೆ ತಾಟೊಂದಾಸವನೆ ತಾಟಗ್ಹಾಕೆ ಬಿಗಿದವನೆ । ಸು.ಸು ।
ಹೊತ್ತುಕೊಂಡೋಗಿ ತಾಯಿಯ ತಾ ಮಡುವಿಗೊಂದೆಸೆದವನೆ । ಸು.ಸು ।
ಮುದುಕಿ ಬಲು ಧರ್ಮಗಾತಿ ಕಾಲದಲ್ಲಿ । ಸು.ಸು ।
ಅದಕಾಗೆ ದಯದಿಂದ ತೇಲಿಕೊಂಡು ತಾ ಹೋಗುತಾಳೆ । ಸು.ಸು ।
ತೇಲುವಂಥ ಮುದುಕಮ್ಮ ಏನೆಂದು ಮಗನಿಗೆ ಹೇಳ್ತವಳೆ । ಸು.ಸು ।
ನಾ ಇದ್ದಿದ್ದು ನನ ಮಗನೆ ನಿನ್ನ ಹೆಂಡ್ತಿಗು ನಿನಗು ಬಲು ತೊಂದ್ರೆ । ಸು.ಸು ।
ನಿನ ಹೆಂಡತಿಯು ನೀನು ಮಗನೆ ಸುಖದಿಂದಾದರೂ ಬಾಳಿರಿ । ಸು.ಸು ।
ಹಾಗಂತೇಳಿ ಮುದುಕಮ್ಮ ಸರ್‍ರನಾದರೆ ಮುಳುಗಿದಳು । ಸು.ಸು ।
ಮುಳುಗಿದ ತಕ್ಷಣ ಪಾರ್ವತಿ ಪರಮೇಶ್ವರ ಅಲ್ಲಿ ತಾ ಕಂಡವಳೆ । ಸು.ಸು ।
ಮುದುಕಿಯ ಕೈಕಾಲ ಬಿಚ್ಚವರೆ ಇಲ್ಲೆಕೇ ಬಂದೆ ಎನುತಾರೆ । ಸು.ಸು ।
ನನ್ನ ಸೊಸೆಯಿಂದ ಶಿವನೆ ನನಗೆ ಬದುಕಲು ಬಾಳಿಲ್ಲ । ಸು.ಸು ।
ನಾನಾದರೆ ಬಾಳಲಾರೆ ನಮ್ಮೂರಿಗೆ ನಾನೆ ಹೋಗುತೀನಿ । ಸು.ಸು ।
ನಿಮ್ಮೂರಿಗೆ ನೀ ಹೋಗಲು ಮುದುಕಿ ಇನ್ನೂ ಬಾಳಕಾಲ ಉಂಟು । ಸು.ಸು ।
ದ್ರವ್ಯದ ಮಡಕೆ ಹೊರಿಸವರೆ ಮುದುಕಿಯ ಮೇಲೆ ಶಿವನಾಗ । ಸು.ಸು ।
ಹೊತ್ತುಕೊಂಡಾಗ ಮುದುಕಮ್ಮ ತನ್ನ ಸೊಸೆಯ ಮನೆಗೆ ಬರುತಾಳೆ
। ಸು.ಸು ।

ನೋಡು ನೋಡು ನನ್ನ ಸೊಸೆಯೇ ಹಣವನು ನೀ ನೋಡು ಎನುತಾಳೆ
। ಸು.ಸು ।

ನೋಡಿದಂಥ ಸೊಸೆ ಪುಟ್ಟರತ್ನ ಸಂತೋಷವನೆ ಪಟ್ಟವಳೆ । ಸು.ಸು ।
ಎಲ್ಲಿಂದ ತಂದ್ರಿ ನಮ್ಮತ್ತೆ ಹಣವನು ಎಂದು ಕೇಳುತಾಳೆ । ಸು.ಸು ।
ಸೊಸೆಯ ಮಾತನು ಕೇಳಿದ ಅತ್ತಮ್ಮ ಏನೆಂದು ಸ್ಥಿತಿಯ ಹೇಳಿದಳು । ಸು.ಸು ।

ಮಡುವಿನಲ್ಲಿ ನೋಡೋಗೆ ಸೊಸೆ ಬೇಕಾದ ಹಣವೆ ತುಂಬುಂಟು । ಸು.ಸು ।
ನಾನಾದರೆ ಮುದುಕಿ ಹೊರಲಾರದೆ ತಾ ಬುಟ್ಟು ಬಂದೆ । ಸು.ಸು ।
ನೀನಾದರೆ ಪ್ರಾಯವಂತೆ ಶಕ್ತಿಯಿಂದಲೆ ತರಬಹುದು । ಸು.ಸು ।
ಹಾಗೆಂದ ಮಾತನು ಕೇಳಿದ ಸೊಸೆಯು ಗಂಡಯ್ಯನ ಕರಿತಾಳೆ । ಸು.ಸು ।
ಬಾರೊ ಬಾರೊ ನನ್ನ ಗಂಡಯ್ಯ ನನ ಕೈಕಾಲು ಕಟ್ಟಿಬಾರೊ । ಸು.ಸು ।
ನಮ್ಮತ್ತೆ ತಂದ ಮಡುವಿನಲ್ಲಿ ನಾನು ಹಣವನು ತರುತೀನಿ । ಸು.ಸು ।
ನನ್ನನ್ನು ಮಡುವಿಗೆ ಎಸೆ ಬಾರೋ ಬೇಗನಾದರೆ ನನ ಗಂಡ । ಸು.ಸು ।
ಅಯ್ಯೋ ನನ ತಾಯಿಯು ಸತವಂತೆ ಹಣವನು ತಂದವಳೆ । ಸು.ಸು ।
ನಿನ್ನ ಕೈಲಿ ಸಾಧ್ಯವಿಲ್ಲ ಖಂಡಿತ ಬೇಡ ಕೆಡಬೇಡ । ಸು.ಸು ।
ಎಸಿಯಲು ಶಕ್ತಿಯಿಲ್ಲದಿದ್ದರೆ ಜಂಭವೇತಕೊ ನನಗಂಡ । ಸು.ಸು ।
ಹೆಂಡ್ತಿ ಮಾತನು ಕೇಳಾದ ಮೇಲೆ ನೀನೆಂಥ ಮುಟ್ಠಾಳ । ಸು.ಸು ।
ಹೆಂಡ್ತಿಯ ಮಾತ ಕೇಳಿದವನೆ ಹೆಂಡ್ತಿಯ ಕೈಕಾಲು ಬಿಗಿದವನೆ । ಸು.ಸು ।
ಬೆನ್ನಿಗೊಂದು ಕಲ್ಲು ಗುಂಡನ್ನು ಬಿಗಿದವನೆ । ಸು.ಸು ।
ದೊಡ್ಡ ಮಡುವಿಗೆ ಎಸೆದವನೆ । ಸು.ಸು ।
ಅಪಾರ ಹಣವನು ತಕಬಾರೆ ಅಂತ ಕೂಗಿ ಕೂಗಿ ತಾ ಹೇಳುತಾನೆ । ಸು.ಸು ।
ಅವಳು ಮಾಡಿದ ಕರ್ಮದಿಂದಲೆ ಸೊಸೆಯು ಮಡುವಿನಲಿ ಮುಳಗವಳೆ । ಸು.ಸು ।
ಅತ್ತೆ ಮಾಡಿದ ಸತ್ಯದಿಂದ ಮಗನಿಗೆ ಇನ್ನೊಂದು ಮದುವೆ ಮಾಡ್ತಾಳೆ । ಸು.ಸು ।
ಮಮ್ಮಕಳನೆ ಕಂಡವಳೆ ಮುದುಕಿ ಮುಮ್ಮಕಳನೆ ಕಂಡವಳೆ ಮುದುಕಿ ।ಸು. ಸು ।
ಕಿರಿಯ ಸೊಸೆಯ ಕೂಡಿಕೊಂಡು ಸಂಪತ್ತಿನಿಂದ ಬಾಳುತಾಳೆ । ಸು.ಸು ।
ಹಿರಿಸೊಸೆ ಪುಟ್ಟರತ್ನ ಯಮನ ಪಟ್ಟಣವ ಸೇರವಳೆ । ಸು.ಸು ।
ಕಲಿಯುಗದಲಿ ಬಾಳುವ ಜನರಿಗೆ ತತ್ವವ ಬರೆದು । ಸು.ಸು ।
ತಿಳಿಸವರೆ ಒಂದೇ ಲಗ್ನ ಆದವರು । ಸು.ಸು ।
ಇಂಗಾದ ಪಕ್ಷಕ್ಕೆ ಎರಡು ಲಗ್ನವ । ಸು.ಸು ।
ಆಗಿರಿ ಹೆಂಡತಿ ಮಾತ ಕೇಳಬೇಡಿ ನೀವು ಖಂಡಿತ ಮರಣ । ಸು.ಸು ।
ವಾಗಬೇಡಿ ಹಾಗೆಂಬುದಾಗಿ ಶಿವನಾದರು ತತ್ವವ । ಸು.ಸು ।
ರಚಿಸವರೆ ಸತ್ಯವಂತೆ ಆ ಮುದುಕಮ್ಮ । ಸು.ಸು ।
ಸ್ವರ್ಗಲೋಕವ ಸೇರಿದಳು । ಸು.ಸು ।

## ಕಂಡ್ಹೆಣ್ಣ ಬಾಡೋರಲ್ಲ ಗಿರಿವಾಸಕೆ ಬರೋರಲ್ಲ

ಸಂಕು ಚಕ್ರಿಯ ಲೆಂಕಿಗ ಸೌಹಾರಿ
ತೆಂಕಣ ನಾಡಿನ ಅಲಂಕಾರಿ । ನಾರಾಯಣ
ಸ್ವಾಮಿ ನಮ್ಮ ಮ್ಯಾಲ ದಯವಾಗಿ

ಕಾಳಿಕಾಂಕಾಳಿ ಲೋಕ ಚೆಂಚಾರಿ
ಲೋಕದ ಮ್ಯಾಲ ತಿರುಗ ಅಲಂಕಾರಿ । ನಾರಾಯಣ
ಸ್ವಾಮಿ ನಮ್ಮ ಮ್ಯಾಲ ದಯವಾಗು

ಹಾಲುಗುಲದವನ ಆದು ನಾಡು ಮಾನ್ಯದವನ
ನೀಲಿನಾಮದ ಒಡೆಯನು । ನಾರಾಯಣ
ಸ್ವಾಮಿ ನಮ್ಮ ಮ್ಯಾಲ ದಯವಾಗು

ಅಚ್ಚ ದಯವಾಗು ಅಚ್ಚಯ್ಯ ದಯವಾಗು
ಮಚ್ಛಲ ಅವತಾರಿ ದಯವಾಗು । ಮದನ ಗೋಪಾಲನೆ
ಲಕ್ಷ್ಮಿ ತಂದಯ್ಯ ದಯವಾಗು

ಮಂತ್ರಿಗುಲದವನ ಮದನಗೋಪಾಲನ
ನೀ ಚಂತ್ರಿ ಇದ್ಯಾಕ ಗುರುಡಾನ । ನಾರಾಯಣ
ಸ್ವಾಮಿ ಥಮಗ ದಿಷ್ಟಿಯು ಕೊಡಬೇಕು

ಹತ್ತಂಕಣದ ಗುಡಿಯಲ್ಲಿ ನಿಸ್ತ್ರರಿಬ್ಬರ ಕಟ್ಟಿಕೊಂಡು
ಒರುಗನ ನಮ್ಮ ನಾರಾಯಣ
ಎಡದಲ್ಲಿ ತೊಳಸಮ್ಮ ಬಲದಲ್ಲಿ ಲಕ್ಷ್ಮಿದೇವಿ
ನಡುವ ರಂಗಯ್ಯ ವೈರುಮುಡಿಯಾದರ
ನೀ ಹೆಣ್ಣಗುಲದವನ ದಯವಾಗು

ಆಕಳಿಕ ಘನವಾದೊ ತೂಕಡಿಕ ಘನವಾದೊ
ಯಾವ ನನ್ನ ಸೂಳ ನೆನೆದಾಳೊ । ಅಂದರ
ನನ್ನ ದಬ್ಬದಾಳಿಂಬ ಮನೆಯವ । ಪಾರ್ವಳದ್ದಟ್ಟಿ
ನನ್ನ ಹುಲ್ಲು ಮನ ಸೂಳ ನೆನೆದಾಳೊ

ಬುಟ್ಟು ಕಣ್ಣು ಬುಟ್ಯಾಗ ನೀಟಿದ ಕಾಲು ನೀಟಿದಾಗ
ಸೂಳಾಯು ಮನಗ ಹೋಗವು ಅಂದಾರ
ಕಾದು ಮನಗವರ ಮಡದೀರು ನನ್ನನು ಎಂದು
ತನ್ನ ಮೊಳಸಂದಿಲಿ ಸ್ವಾಮಿ ತಳ್ಳಿದರು

ಹೆಣ್ಣು ಅತ್ತ್ಹೋಸಿ ಮನಿಕನ್ನಿ ಇತ್ಹೋಸಿ ಮನಿಕನ್ನಿ
ಸೊಳ್ಳಾಯ ಕಡನ ನನಗ ಬಲು ಕಡಿತ । ಎಂದು ನಾರಾಯಣ
ಮೊಳಸಂದಲಿ ಮಡದಿರ ತಳ್ಳಿದರು

ಮೊಳಸಂದಿನ ಒಳಗೆ ತಳ್ಳಿದರ ಮಡದಿರ
ಮಾಯದ ನಿದ್ದ ದೊರುಕದ
ಅವರ್ಗ ಮಾಯಾದ ನಿದ್ದ ದೊರಕಿರುವ ಗಳಿಗಲಿ
ಹಿಂದು ಪರಕನಾಗ ಜಾರಿಕೊಂಡ । ನಾರಾಯಣ

ಗಕ್ಕನ ಎದ್ದು ಕೂತರಾಗ
ಗಕ್ಕನ ಎದ್ದು ಕೂತ್ಕೊಂಡು ನಾರಾಯಣ
ಗರುಡಿಯು ಮನೆಗ ವ್ಹಾದರಾಗ

ಗರುಡಿಯು ಮನಗ ವ್ಹಾದರಾಗ
ಒಂದು ಗಂಡು ಕೊಡಲಿಯ ಎತ್ತಿದರಾಗ
ಒಂದು ಗಂಡು ಕೊಡಲಿಯ ಎತ್ತಿಕೊಂಡು ನಾರಾಯಣ
ಮೂಡಲ ಕಾಡಿಗ ಹೋಯ್ತಾರ

ಮೂಡಲ ಕಾಡಿಗ ವ್ಹಾದಾರು ನಾರಾಯಣ
ಕಂಡಾರು ಒಂದು ಕಗ್ಗಲಿಯ ಮರವ । ನಾರಾಯಣ
ತುಂಡು ತುಂಡಿಗ ತರಿದಾರೊ
ತುಂಡು ತುಂಡಿಗ ತರಿದಾರು ಮರವ ಸ್ವಾಮಿ
ಎತ್ತಿ ಕಿದ್ದಿದರು ತಮ್ಮ ನಿಜರೂಪವ

ಕಾಲು ಬಾವುಣ ತಿದ್ದಿ ಕೈ ಬಾವುಣ ತಿದ್ದಿ
ತವ್ಮ್ರ ಬಾವುಣ ತಿದ್ದಿರಾಗ
ತವ್ಮ್ರ ಬಾವುಣ ತಿದ್ದಿ ನಾರಾಯಣ
ಮರದ ಗೊಂಬಿಗ ಸುಂಗಾರವ ಮಾಡಿದರಾಗ

ಹಳದಿಯ ಪಾಗ ತಕ್ಕಂಡು ನಾರಾಯಣ
ಎತ್ತಿ ಎಡಗಸಿಯ ತಗಿದಾರೊ

ಚೆಂಡಿನ ಕುಚ್ಚ್ನ ಗರುಡುಗಂಭ ವೈರ್ಮ್ರುಡಿಯ
ಎತ್ತಿ ತಿದ್ದಿದ ಗೊಂಬಿಗ ಇರಿಸಿದರು

ಚಿಕ್ಕ ಚೀಲ ನಾವು ಚಿನ್ನದ ಬಟ್ಟಿನ ನಾವು
ಬೇಕಾದ ನಾವು ಬೆಳಿಯ ನಾವು । ನಾರಾಯಣ
ಅದ್ರ ಹಣುಗ ಬರೆದರು ಆರುನಾವು

ಅವರಿಬ್ಬರ ಮಧ್ಯೆ ಮಲಗಿಸಿ
ಎಡಚೋರಿ ಮಲಗಿರುವ ತೊಳಸವ್ಮ್ರನ
ರಟ್ಟೆಯ ಎತ್ತಿ ಗೊಂಬಿಗ ತಬ್ಬಿಸಿದರು
ಬಲಚೋರಿ ಮಲಗಿರುವ ಭಾಗ್ಯದ ಲಕ್ಷ್ಮ್ರಿಯ
ರಟ್ಟೆಯ ಎತ್ತಿ ಗೊಂಬಿಗ ಮಡಗಿದರು

ಇಬ್ಬರ ಮಧ್ಯವೇ ಮಾಯಾದ ಗೊಂಬ ಮಲಗಿಸಿ ಬುಟ್ಟು
ಮಜ್ಜನದ ಬಾವಿಗ ವ್ಹಾಯ್ತಾರ
ಮಜ್ಜನದ ಬಾವಿಗ ವ್ಹಾದಾರು ನಾರಾಯಣ
ಮೂಡು ಮಡಿಯ ಉಡುತಾರ
ಮೂಡು ಮಡಿಗಳ ಉಟ್ಟುಕೊಂಡು ನಾರಾಯಣ
ಒಂದು ಜೋಳಿಗ ಹೊನ್ನ ತುಂಬಿಕೊಂಡು

ಮೂಡಲಗಿರಿಲಿರುವ ಮುದ್ದು ಮಾದಯ್ಯನವರ್ಯ
ನನ್ನ ಮುದ್ದು ಮಡದಿರಿಗ ನಿದ್ದ ಕೊಡಬೇಕು
ನನ್ನ ಮುದ್ದು ಮಡದಿರಿಗ ನಿದ್ದಾಯ ಕೊಟ್ಟಾದೆ ಉಂಟಾದ್ರ
ನಿಮ್ಮ ಏಳು ಮಲಗ ಗಂಡು ಹುಲಿ ವಾನವ ಗೇಯಿಸಿ ಕಳುಸ್ತಿನಿ ಅಂತ
ಎತ್ತಿ ಕಟ್ಟಿದರು ಮೊತ್ತಗಾಣಿಕೆಯ

ಬಡಗಲ ರಾಜ್ಯದಲ್ಲಿರುವ ಬಾಲುತೆಂಡ ಹನುಮಯ್ಯ
ನನ್ನ ಬಾಲರಿಗ ನಿದ್ದಯ ಕೊಡುಸಯ್ಯ
ಬಾಲರಿಗ ನಿದ್ದಯ ಕೊಟ್ಟದೆ ಉಂಟಾದರ
ನಿನ್ನ ಬಾಲಕ ಮುತ್ತ ಬಿಗಿಸೇನು । ಎಂದು ನಾರಾಯಣ
ಎತ್ತಿ ಕಟ್ಟಿದರು ಮೊತ್ತಗಾಣಿಕೆಯ

ಕನ್ನಂಬಾಡಿಯಲ್ಲಿರುವ ಚೆನ್ನ ಗೋಪಾಲನೆ
ನಮ್ಮ ಕನ್ನರಿಗೆ ನಿದ್ದ ಕೊಡುಸಯ್ಯ
ಕನ್ನರಿಗೆ ನಿದ್ದ ಕೊಟ್ಟದ್ದೆ ಉಂಟಾದರ
ನಿನ್ನ ಕನ್ನಡಿಗ ಮುತ್ತ ಬಿಗಿಸೇನು

ಮುಡುಕುದೊರಲಿರುವ ಮುಮ್ಮೆಳದ ಮಲ್ಲಣ್ಣ
ನನ್ನ ಮಡದಿರಿಗ ನಿದ್ದಯ ಕೊಡುಸಯ್ಯ
ಮಡದಿರಿಗ ನಿದ್ದಯ ಕೊಡುಸುದ್ರ ಭಾವಯ್ಯ
ನಿನ್ನ ಪರ್ವತಕ ಅರವತ್ತು ಕಂಬಿಯ ಕಳುಗೀನು

ಎಲ್ಲ ದೇವರಿಗೂ ಕಾಣ್ಕಾಯ ಕಟ್ಟು ಬುಟ್ಟು
ಮಡದಿರ ದಂಡಕ ಬಂದಾನು

ಮೂಗಿನ ಮೊರೆತವ ಕೇಳಿ ಬಾಯಿನ ಉಸುರ ಕೇಳಿ
ಅವರ ಎದ ಮ್ಯಾಲ ಹಸ್ತಾವ ಮಡಗಿದರು
ಎದಮ್ಯಾಲ ಹಸ್ತಾವ ಮಡುಗಿ ಬುಟ್ಟು ನಾರಾಯಣ
ಅವ್ರ ಬಾಯಿಗ ಬೆರಳಿಕ್ಕಿ ನೋಡಿದರು
ಬಾಯಿಗ ಬೆರಳಿಕ್ಕಿ ನೋಡಿದರ
ಅವರಿಗ ಮಾಯಾದ ನಿದ್ದ ಕವಿದಾದ

ಮಾಯಾದ ನಿದ್ದ ನೋಡಬುಟ್ಟು ನಾರಾಯಣ
ತಬ್ಬಿರಿ ನಿಮ್ಮ ಗಂಡನ ತಬ್ಬಿರಿ ನಿಮ್ಮ ಮಿಂಡನ
ತಬ್ಬಿರಿ ನಿಮ್ಮ ಲಾಳಿಯವನ । ಮಡದಿರ
ನಾ ಹೋಯ್ತಿನಿ ಸೂಳ ಅರಮನೆಗೆ

ಹನ್ನೆರಡು ಆಯುಧ ಮಸ್ತೇಪ ತಕ್ಕಂಡು
ಹಣಗ ಸುಲುಸಾಮು ಸುಲುಕೆಂಡು । ನಾರಾಯಣ
ಮುಂಬಾಗಲಿಗ ಸ್ವಾಮಿ ಬಂದರಾಗ

ಮುಂಬಾಗಲಿಗ ಬರುವಾಗ ನಾರಾಯಣ
ಅಲ್ಲಿ ಕಂಡಾನು ತಮ್ಮ ಬಾಗಲ ಹನುಮಯ್ಯ

ಹತ್ತಂಕಣದ ಗುಡಿಯಲಿ ನಿಸ್ತ್ರರಿಬ್ಬರ ಬುಟ್ಟು
ಯಾವ ಮುಂಡ ಮನಗ ವ್ಹಾದಾರಿ

ಆರಂಕಣದ ಗುಡಿಯಲಿ ನಾರಿರಿಬ್ಬರ ಬುಟ್ಟು
ಯಾವ ನಾರಿ ಮನಗ ತೆರಳಿರಿ | ಎಂದರ
ಅಲ್ಲಿಯೇ ನಿಂದರು ಜಗದೊಡೆಯ

ಬಾಗಲ ಹನುಮಯ್ಯ ಆಡಿದ ಮಾತ ಕೇಳಿ
ಬಾರೋ ಹನುಮಯ್ಯ ನಮ್ಮ ಹತ್ರಕ

ಒಪ್ಪತ್ತಿನ ಊಟ ಸೊಕ್ಕಿತು ಹನುಮಯ್ಯ
ಕಲ್ಯಾಣಿಗಂಟೆ ಹೋಯ್ತಿನಿ ಹನುಮಯ್ಯ
ಬಾರಯ್ಯ ಇಲ್ಲಿ ನಿನಗೊಂದು ಪಿಸುಮಾತ ಹೇಳುತಿನಿ
ಬಾರೆಂದು ಬಾಗಲ ಹನುಮಯ್ಯನ ಬೊಳ್ಳಗ ಕರಕೊಂಡು
ತೇರಿನ ಬೀದಿಗ ಬರುತಾರ

ತೇರಿನ ಬೀದಿಗ ಬಂದಾರೊ ಹನುಮಯ್ಯನ
ತೇರಿನ ಬಾಳಿಗೆ ಕಟ್ಟಿದ ರಾಗ
ತೇರಿನ ಬಾಳಿಗೆ ಕಟ್ಟುಬಿಟ್ಟು ಹನುಮಯ್ಯನ

ಬಿದ್ದಿರು ನನ್ನ ಸೂಳ ಹಳಮಗನ | ಎನುತೇಳಿ
ತೇರಿನ ಬಾಳಿಗ ಕಟ್ಟಿದರಾಗ

ತೇರಿನ ಬಾಳಿಗ ಕಟ್ಟುಬುಟ್ಟು ನಾರಾಯಣ
ಹೋಯ್ತಿನಿ ಸೂಳ ಅರಮನಗ

ಅಡವಿ ಅರಣ್ಯದಲ್ಲಿ ಹೋದಾಗ ನಾರಾಯಣ
ಇಂದ್ರದೇವನಿಗೆ ಹರಕೆ ಮಾಡಿದರು

ನಾಗುಳದ ಮಳೆಬ್ಯಾಡ ಮೂಗುಳೆದ ಮಳೆಬ್ಯಾಡ
ಒಕ್ಕುಳದ ಮಳೆಯು ಸಾಲ ಕೊಟ್ಟರ
ಚಿಕ್ಕರಂಗಿ ನನ್ನ ಕೈವಾಸ

ಆಯ್‌ತ್ವಾರ ಹಾಸಿತು ಸ್ವೋವಾರ ಗುಡುಗಿತು
ಮಂಗಳವಾರ ಮಳದೊರಕಿತು

ಮಂಗಳವಾರ ಮಳ ಮಡುಕುವ ಗಳುಗಲಿ
ನನ್ನ ಮಂತ್ರಿ ಹೊರಡಿರು ನಾರಾಯಣಾ

ಆಕಾಸಮೂಗಿವ್ರ ಭೂಮಿ ತಲ್ಲಣಿಸಿತು
ಒಮ್ಮೊಖದ ಸಿಡಿಲು ಹೊಡೆದಾದ
ಒಮ್ಮೊಖದ ಸಿಡಿಲು ಹೊಡೆಯಗಳುಗಲಿ
ಜಿಕ್ಕರಂಗಿ ಮನೆಗ ದಯಮಾದ

ಸೂಳಯ ಅರಮನೆ ಬಾಗಲಲ್ಲಿ ನಿಂತುಕೊಂಡು
ಸಂಕಿನ ಸದ್ದ ಮಾಡಿದರಾಗ

ಸಂಕಿನ ಸದ್ದನ್ನೆ ಮಾಡಿದರ ನಾರಾಯಣಾ
ಬಗ್ಗಿ ಸೂಳರಂಗಮ್ಮ ನೋಡಿದಳಾಗ

ಆಳು ದಾಸಯ್ಯ ಹಾದಿಲಿ ಯಾಕೆ ನೆನೆದಯಾ
ನಮ್ಮ ಸೂರಂಡಲ್ಯಾರು ನಿಂತುಕ

ಸೂಳರಂಗಮ್ಮ ನಿನ್ನ ಸೂರಂಡದಲಿ ನಿಂತುಕೊಂಡರ
ನಮ್ಮ ಗುರುಗಳು ಕಂಡಾರ ಗುರುಕಾಣಿಕ ಕೇಳುತಾರ
ನಾ ಎಲ್ಲಿ ಕೊಡಲಿ ಸೂಳರಂಗಿ

ಗುರುಗಳು ನಿನ್ನ ಕಂಡು ಗುರುಗಾಣಿಕ ಕೇಳಿದ್ರ
ನನ್ನ ಮೂಲ ಸಂದಿಲ್ಯಾರು ನಿಂತುಕೊ

ಸೂಳಾಯ ರಂಗಿ ನಿನ್ನ ಮೂಲ ಸಂದೀಲಿ ನಿಂತುಕೊಂಡರ
ನಮ್ಮ ಸ್ವಾಮಿಗಳು ಕಂಡು ತಪ್ಪುಗಾಣಿಕ ಕೇಳಿದರ
ನಾ ಎಲ್ಲಿ ಕೊಡಲಿ ಸೂಳರಂಗಿ

ನಿಮ್ಮ ಸ್ವಾಮಿಗಳು ಕಂಡು ತಪ್ಪುಕಾಣಿಕ ಕೇಳಿದರ
ನನ್ನ ನಡುಮಲ್ಲಿ ಒಂದುಂಕಣ ಕೊಡುತೀನಿ

ಒಂದುಂಕಣ ಜಾಗವ ಈಸುಕೊಂಡು ನಾರಾಯಣಾ
ಸಂಕು ಜಾಗಟವ ಮಡಗಿದರು

ನೀ ಕೊಟ್ಟ ಜಾಗ ಸಂಕು ಜಾಗಟೆಗ ಆಯ್ತಲ್ಲ
ನನಗೊಂದು ಅಂಕಣವ ಕೊಡುಸ್ಹೆಣ್ಣೆ

ಇನ್ನೊಂದು ಅಂಕಣವ ಈಸುಕೊಂಡು ನಾರಾಯಣ
ಹುಲ್ಲು ಕಿಷ್ಣನ ಮಡುಗಿದ

ಹೆಣ್ಣೆ ನೀ ಕೊಟ್ಟ ಜಾಗವು ನಮ್ಮ ಹುಲ್ಲು ಕಿಷ್ಣಂಗ ಆಯ್ತಲ್ಲ
ನನಗೊಂದು ಅಂಕಣವ ಕೊಡುಸ್ಹೆ

ಇನ್ನೊಂದು ಅಂಕಣವ ಈಸುಕೊಂಡು ನಾರಾಯಣ
ಬಾಂಕಿಯ ಸ್ವಾಮಿ ಮಡುಗಿದರು

ಹೆಣ್ಣೆ ನೀನು ಕೊಟ್ಟ ಜಾಗವು ಬಾಂಕಿಗ ಆಯ್ತಲ್ಲ
ನನಗೊಂದು ಅಂಕಣವ ಕೊಡುಸ್ಹೆಣ್ಣೆ

ಇನ್ನೊಂದು ಅಂಕಣವ ಈಸಿಕೊಂಡು ನಾರಾಯಣ
ಗರುಡುಗಂಭವ ಮಡುಗಿದರು

ಹೆಣ್ಣೆ ನೀ ಕೊಟ್ಟ ಜಾಗವು ಗರುಡುಗಂಭಕಾಯ್ತಲ್ಲ
ನನಗೊಂದು ಅಂಕಣವ ಕೊಡುಸ್ಹೆಣ್ಣೆ

ಇನ್ನೊಂದು ಅಂಕಣವ ಈಸಿಕೊಂಡು ನಾರಾಯಣ
ವೈರುಮುಡಿಯ ಮಡುಗಿದರು

ಹೆಣ್ಣೆ ನೀ ಕೊಟ್ಟ ಜಾಗವು ವೈರುಮುಡಿಗಾಯ್ತಲ್ಲ
ನನಗೊಂದು ಅಂಕಣವ ಕೊಡುಸ್ಹೆಣ್ಣೆ

ಇನ್ನೊಂದು ಅಂಕಣವ ಈಸಿಕೊಂಡು ನಾರಾಯಣ
ನವಿಲುಗರಿಯದೊಂಡ ಮಡುಗಿದರು

ಹೆಣ್ಣೆ ನೀ ಕೊಟ್ಟ ಜಾಗವು ನವಿಲುಗರಿದೊಂಡುಗಾಯ್ತಲ್ಲ
ನನಗೊಂದು ಅಂಕಣವ ಕೊಡುಸ್ಹೆಣ್ಣೆ

ಇನ್ನೊಂದು ಅಂಕಣವ ಈಸುಕೊಂಡು ನಾರಾಯಣ
ಚೆಂಡಿನ ಕುಚ್ಚ ಮಡುಗಿದರು

ಹೆಣ್ಣೆ ನೀ ಕೊಟ್ಟ ಜಾಗವು ಚೆಂಡಿನಕುಚ್ಚಕಾಯ್ತಲ್ಲ
ನನಗೊಂದು ಅಂಕಣವ ಕೊಡುಸ್ಹೆಣ್ಣೆ

ಇನ್ನೊಂದು ಅಂಕಣವ ಈಸಿಕೊಂಡು ನಾರಾಯಣ
ಗುಂಬುಗೊರಳ ಮಡುಗಿದ

ಹೆಣ್ಣೆ ನೀ ಕೊಟ್ಟ ಜಾಗವು ಗುಂಬುಗೊರಳಿಗಾಯ್ತಲ್ಲ
ನನಗೊಂದು ಅಂಕಣವ ಕೊಡಿಸ್ಹೆಣೆ

ಇನ್ನೊಂದು ಅಂಕಣವ ಈಸಿಕೊಂಡು ನಾರಾಯಣ
ನೆತ್ತಿಯ ದಂಡ ಮಡಗಿದರು

ಹೆಣ್ಣೆ ನೀ ಕೊಟ್ಟ ಜಾಗವು ನೆತ್ತಿಯದಂಡಿಗಾಯ್ತಲ್ಲ
ನನಗೊಂದು ಜಾಗವ ಕೊಡುಸ್ಹೆಣ್ಣೆ

ಎಲ್ಲಿಯವನ ಕಾಣೆ ಹೆಡ್ಡದಾಸಯ್ಯ ಬಂದು
ಒಂದಂಕಣ ಜಾಗ ಕೇಳಿಕೊಂಡ । ದಾಸಯ್ಯ
ಹನ್ನೆಡು ಅಂಕಣವ ತನುಕೊಂಡನಲ್ಲ
ಇವ ಎಲ್ಲಿಯವ ಕಾಣೆ ಹೆಡ್ಡ ದಾಸಯ್ಯ

ನಿನ್ನ ಹನ್ನೆಡು ಅಂಕಣ ಆಯುಧಾನ ಮುಸ್ತಿಪ್ಪಗಾದೊ
ನನಗೊಂದು ಅಂಕಣವ ಕೊಡುಸ್ಹೆಣ್ಣಾ

ಅತ್ತೊತೀಸಿ ಬಂದನಲ್ಲ ಇತ್ತೊತೀಸಿ ಬಂದನಲ್ಲ
ಒತ್ತುರುಸಿಕೊಡು ಬಂದನಲ್ಲವ ಒಲಮುಂದಕೆ
ಇವ ಎಲ್ಲಿಯವ ಕಾಣೆ ಹೆಡ್ಡದಾಸಯ್ಯ

ಉಬ್ಬ ನೋಡಿದರ ಗೊಬ್ಬಳಿಯ ಮರದಾಗ
ಇವ್ನ ಕಣ್ಣು ನೋಡಮ್ಮ ಗುಳ್ಳಗಣ್ಣ
ಕಣ್ಣು ನೋಡಿದರ ಗುಳ್ಳಗಣ್ಣು ದಾಸಯ್ಯನಿಗ

ಮೂಗು ನೋಡಮ್ಮ ಮೂಲಂಗಿ ಗೆಡ್ಡ್ಯಾಗ
ಇವ್ನ ಬಾಯಿ ನೋಡಮ್ಮ ಬಳ್ಳದಾಗ
ಬಾಯಿನೋಡಿದರ ಬಳ್ಳದಾಗ ದಾಸಯ್ಯನಿಗ

ಇವ್ನ ನಾಲಿಗ ನೋಡವ್ವ ಕೊಂಗದಾಗ
ನಾಲಿಗ ನೋಡಿದರ ಕೊಂಗದಾಗ ದಾಸಯ್ಯನಿಗ

ಇವ್ನ ಹಲ್ಲು ನೋಡವ್ವ ಹಲುಬ್ಯಾಗ
ಹಲ್ಲು ನೋಡವ್ವ ಹಲುಬ್ಯಾಗ ದಾಸಯ್ಯನಿಗ
ಇವ್ನ ಕಾಲು ನೋಡವ್ವ ತಮಕೋಲಾಗ

ಇವ್ನ ಹೊಟ್ಟಿ ನೋಡವ್ವ ಬಳ್ಳದಾಗ
ಹೊಟ್ಟಿ ನೋಡಿದರೆ ಬಳ್ಳದಾಗ ದಾಸಯ್ಯನಿಗ

ನನ್ನ ಯಾಸವ ನೀನು ಅರಿದಡಕ ಸೂಳರಂಗಿ
ನಿನ್ನ ಮಂಚದ ಮ್ಯಾಲ ಒರಗೀನು

ಮಂಚದ ಮ್ಯಾಲ ಕೂತುಕೊಂಡು ನಾರಾಯಣ
ಅವಳೊಂದಿಗ ಹಾಸುರಾಸ್ಯವ ಆಡುತಾರ

ಹಾಸುರಾಸ್ಯದ ಮಾತ ಆಡಿ ತಾ ನಾರಾಯಣ
ಅವಳ ಮಂಚದ ಮ್ಯಾಲ ಒರಗಿದ

ಕೋಳಿ ಕೂಗಿತು ಕೊನಗಾಳಿ ಬೀಸಿತು
ಎದ್ದಿರಿ ಸ್ವಾಮಿ ಮಂಚಬುಟ್ಟು ! ಅನ್ನಾಗ
ಈ ಕಗ್ಗಲಿಯ ಮರವ ಕಂಡರಾಗ

ಕಗ್ಗಲಿಯ ಮರವ ಕಂಡು ಲಕ್ಷ್ಮಿದೇವಿ
ಎದ್ದು ನೋಡವ್ವ ಎಳಯ ತೊಳಸಿ

ಅಕ್ಕಯ್ಯ ಆಡಿದ ಮಾತ ಕೇಳಿದಳು ತೊಳಸವ್ವ
ಗಕ್ಕಾಗ ಎದ್ದು ನೋಡುತಾಳ

ಮರದ ಗೊಬ್ಬಾಯ ಇಬ್ಬಾರು ಹಿಡಕೊಂಡು
ಅತ್ತಿಂದ ಇತ್ತಿಂದ ಹಿಡಕೊಂಡು ತಳ್ಳುತ್ತಾರ

ಮಾಯದ ಗೊಂಬೆಯು ಇದಲ್ಲ ತಂಗವ್ವ
ಇದೇನು ಮಾಯೆವು ತಿಳಿಯಾದು

ಮಾಯಾದ ಗೊಂಬಾಯ ಮಲಗಿಸಿ ಹೋಗಾಗ
ನಮ್ಮ ಬಾಗಲ ಹನುಮಯ್ಯ ಎಲ್ಲಿಗೋದ
ಬಾಗಲ ಹನುಮಯ್ಯ ಎಲ್ಲಿಗೋದ
ಸಾರಿ ಕೂಗಿದ ತೊಳಸಮ್ಮ

ಬಾರೋ ಹನುಮ ನೀ ಲಂಕ ಹನುಮ
ವೈರಮುಡಿಯ ಬಾಗಲ ತಡಿಯ ಹನುಮ
ಆರಾಳ ಕೊಂಡು ಹಾರಿ ಲಂಕ ಸುಟ್ಟ
ನೀ ಬಾಲದಲಿ ಕಿಚ್ಚ ಹರಡಿದ್ದ । ಹನುಮಯ್ಯ
ನೀ ಈ ಸಿರಹರಿ ಹೋದದ ಕಾಣನಿಲ್ಲ

ತೊಳಸಮ್ಮ ಆಡಿದ ಮಾತ ಕೇಳಿದ ಹನುಮ
ತೇರಿನ ಬೀದಿಲಿ ಅಳುತಾನ

ತೇರಿನ ಬೀದಿಲಿ ಅಳುವಾಗ ಹನುಮ
ಓಡಿ ವ್ಹಾಯ್ತಾಳ ತೊಳಸಮ್ಮ

ಇಬ್ಬರು ಸೇರಿ ಓಡಿ ಹೋಗಾಗ
ತೇರಿನ ಬೀದಿಯ ಕಂಡರ್ಹಾಗ

ತೇರಿನ ಬೀದಿಗ ವ್ಹಾದಾಳು ತೊಳಸಮ್ಮ
ಕಟ್ಟಿದ್ದ ಕಟ್ಟ ಬುಡಸಿದರಾಗ

ಕಟ್ಟಿದ್ದ ಕಟ್ಟ ಬುಡುಸಿಬಿಟ್ಟ
ಅವನ ಮುಂಡ ಸವರಿ ಮೈ ಸವರಿ

ಮಾಯ ರೂಪಲಿ ಮರದ ಗೊಂಬ ಮಾಡಿ
ನಮ್ಮಿಬ್ಬರ ಮಧ್ಯ ಮಲಗಿಸಿ । ಹನುಮಯ್ಯ
ಕದ್ದು ಹೋಗಾರ ಜಗದೊಡೆಯ । ಸಿರಹರಿ
ಅವ ಎಲ್ಲಿದ್ರು ನೀನು ಬುಡಬ್ಯಾಡ । ಸಿರಹರಿಯ
ನೀ ಕರದು ಬಾರಯ್ಯ ಹನುಮಂತು

ಒಡತಿಯರು ಆಡಿದ ಮಾತ ಕೇಳಿದರು ಹನುಮಯ್ಯ
ಅವ್ರು ಏರಿದರು ಗಗನ ಮಂಡಲವ
ಏರಿದರು ಗಗನ ಮಂಡಲವ ಹನುಮಂತು

ಎಲ್ಲಿ ನೋಡಿದರೂ ಇಲ್ಲ
ಎಲ್ಲಿ ನೋಡಿದರು ಇಲ್ಲವಲ್ಲ । ಅನುತೇಳಿ
ಅವ್ರು ಹದಿನಾಲ್ಕು ಲೋಕ ಹುಡುಕೀರು

ಹದಿನಾಲ್ಕು ಲೋಕಾವ ತಿರುಗಿದರು ಹನುಮಯ್ಯ
ಅಲ್ಲು ಇಲ್ಲವಲ್ಲ ಜಗದೊಡೆಯ । ಅನುತೇಳಿ
ಅವ್ರು ಅರಣ್ಯದೊಳಗ ಬರುತಾರ

ಅರಣ್ಯದೊಳಗ ಬರುವಾಗ ಹನುಮಂತು
ಸೂಳರಂಗಮ್ಮನ ಮನೆಯು ಕಂಡಾರು । ಹನುಮಂತು
ಅವ್ರು ಬಗ್ಗಿ ನೋಡಿದರು ಅವಳ ಕದದ ಕಿಂಡಿಯು
ಬಗ್ಗಿ ನೋಡಿದರು ಕದದ ಕಿಂಡಿಯು ಹನುಮಂತು
ಸೂಳರಂಗಮ್ಮನ ಹಟ್ಟಿ ಒಳಗ
ಸೂಳರಂಗಮ್ಮನ ನಡ್ಡಟ್ಟಿಯು ಒಳಗ ಎಳಬಿಸಲು
ಸ್ವಾಮಿ ಕಾಯುತಾರ

ಕದುವ ತಗಿಯೆಂದ್ರು ಕೈ ಎತ್ತಿ ಮುಗಿದಾಳೊ
ರುದ್ರು ಗ್ನಾಪಕ ತಾಳುತಾನ

ರುದ್ರು ಗ್ನಾಪದಲ್ಲಿ ಹೊದ್ದಾರ ಕದವ
ನಗ್ಗಿ ನರಿಯಾಡೊ ಮರದಲಗ
ನಗ್ಗಿನರಿಯಾಡೊ ಮರದಲಗ ರಂಗಮ್ಮ
ಗುಬ್ಬಿ ಹಾರಿದ ಗಕನಕ

ಹನುಮಂತನ ವಾಕ್ಯವ ಕೇಳಿದರು ನಾರಾಯಣ
ಗುಡುಗುಡನ ಓಡಿ ವ್ಹಾಯ್ದಾರ
ಗುಡುಗುಡನ ಓಡಿ ಹೋಗಿ ಸೂಳರಂಗಮ್ಮನ
ಹಟ್ಟಲೇರಿಕೊಂಡು ಬಟ್ಟಳಗ ಒಳಗ ಕೂತುಕೊಂಡ್ರು

ಗಕ್ಕನ ನುಗ್ಗಿರೊ ಓಡಿವ್ಹಾದಾರೊ
ಸೂಳರಂಗಮ್ಮನ ಹಟ್ಟಲೇರಿ ನುಗ್ಗಿದರು
ಸೂಳರಂಗಮ್ಮನ ಹಟ್ಟಲೇರಿ ಹನುಮಂತು
ಅವಳ ಬಟ್ಟಳಗೆಯು ತಬ್ಬಿಕೊಂಡು ಬರುತಾರ

ಬಟ್ಟಳಗೆಯ ತಬ್ಬಿಕೊಂಡು ಓಡಿಬಂದು
ನಡಟ್ಟೆಯ ಒಳಗ ಕುಕ್ಕುತಾನ
ನಡಟ್ಟೆಯ ಒಳಗ ಕುಕ್ಕುದ್ರ ನಾರಾಯಣ
ಹಲ್ಲು ಕಿರಕೊಂಡು ಮಲಗವನ

ಬಿದ್ದನು ದಾಸಯ್ಯ ಬಿದ್‌ರ್ ಕೋಲು ಮೇಲಾಗಿ
ಗ್ವೋಪಾಳದ ಪುಟ್ಟಿ ತಳತಳನ । ನಾರಾಯಣ
ಅವ ಹಲ್ಲು ಕಿರಕೊಂಡು ಮಲಗವನ

ಆರಂಕಣದ ಗುಡಿಯಲ್ಲಿ ನಾರಿರಿಬ್ಬರ ಬುಟ್ಟು
ನಿಮಗ್ಯಾಕ ಸ್ವಾಮಿ ಇಂಥ ಪಾಡು

ಹತ್ತಂಕಣದ ಗುಡಿಯಲಿ ನಿಸ್ತ್ರರಿಬ್ಬರ ಬುಟ್ಟು
ನಿಮಗ್ಯಾಕ ಸ್ವಾಮಿ ಇಂಥ ಪಾಡು

ನಮ್ಮ ಒಡತಿಯರು ತೊಳಸಮ್ಮ ಲಕ್ಷ್ಮಿದೇವಿ
ನಿಮ್ಮ ಕರಕೊಂಡು ಬರುಹೋಗು । ಎನುತ್ಲೇಳಿ
ನನಗೊಂದು ಕಾಗದವ ಕೊಟ್ಟರಲ್ಲಿ

ಕಾಗದವ ಹಿಡಕೊಂಡು ಕಣ್ಣೊಳಗ ನೋಡಿ ತ
ಅವ್ರು ಬರದಿರುವ ಒಲಾಯ ಓದಿದರು । ನಾರಾಯಣ
ಗಕ್ಕಾನ ಎದ್ದು ಬರುತಾರ

ಗಕ್ಕನ ಎದ್ದು ಜಗದೊಡೆಯನ ಕರಕೊಂಡು
ಬಾಗಿಲ ಹನುಮಂತ ಬರುತಾನ

ಬರುವ ಮೈನ ಸಿರ್ಧರಿಯ ಕಂಡು
ಓಡಿ ಬಂದಾಳೊ ಸೂಳರಂಗಿ

ಒಂಟೊಂಟಿ ದಕ್ಕು ಒಂಟಿಗ ಮರುದಕ್ಕು
ನಾರಾಯಣ ನನಗ ಮರುದಕ್ಕು ಎಂದ

ಆನಾನ ದಕ್ಕು ಆನಿಗ ಮರುದಕ್ಕು
ಸಿರಹರಿ ನನಗ ದಕ್ಕು ಎಂದು । ಸೂಳರಂಗಿ

ಏಳುವಾರದಿಂದ ನನ್ನ ಮಂಚದಲಿ ಒರಗಿದ್ದಕ
ನನಗ ಏಳುವಾರದ ಒತ್ತ ಕೊಡಬೇಕು

ಏಳುವಾರದ ಒತ್ತವ ಕೊಟ್ಟುಬುಟ್ಟು ಹನುಮಯ್ಯ
ನಿಮ್ಮ ಒಡೆಯಾನ ನೀನು ಕರಕೊಂಡ್ಹೋಗಿ

ಸೂಳ ರಂಗಮ್ಮ ಆಡಿದ ಮಾತ ಕೇಳಿದರು ಹನುಮಯ್ಯ
ಅವನ್ಗ ಏಳು ಮಂಡಲವ ಬರೆದರು

ಏಳು ಮಂಡಲವ ಬರೆದಿನಿ ಸಿರಿರಿ
ಈ ಮಂಡಲ ಬರೆದಿರ ಮಾತಿಗ ನೀ ತಪ್ಪಕೂಡದು । ಜಗದೊಡೆಯ
ಸತ್ಯಾವು ನಿಮ್ಮೊಳಗ ಇರಲಯ್ಯ

ಒಂದ್ಹಾರ ಹಾರಿ ಇಂಗಣ್ಣ ಹೊಡೆದು
ವೈಕುಂಠಕ ಸ್ವಾಮಿ ಇಳಿದಾರೊ । ಹನುಮಂತು
ಏಳಿಯು ತೊಳಸಮ್ಮನ ಕರೆದಾರೊ

ಹದಿನಾಲ್ಕು ಲೋಕ ತಿರುಗಿ ಬಂದಿ ತೊಳಸಮ್ಮ
ಎಲ್ಲು ಸಿಕ್ಕನಿಲ್ಲ ಜಗದೊಡೆಯ

ಆಡವಿ ಅರಣ್ಯದಲ್ಲಿ ಬರುವಾಗ ತೊಳಸಮ್ಮ
ಸೂಳರಂಗಿಯ ಅರಮನಲ್ಲಿ । ನಮ್ಮ ನಾರಾಯಣ
ಒರಗಿದ್ರು ತಾಯಿ ನಿಜದಿಂದ

ಸೂಳ ರಂಗಮ್ಮನ ಅರಮಲ್ಲಿ ಒರಗಿರುವ ಜಗದೊಡೆಯನ
ನಾನು ಕರಕೊಂಡು ಬರುತ್ತಿದ್ದಿ ತಾಯಿ
ಕರಕೊಂಡು ನಾನು ಬರುವಾಗ ತಾಯಿ
ಸೂಳ ರಂಗಮ್ಮ ತಡೆದಾಳೊ

ಆನಾದದಕ್ಕು ಆನಮರಿ ದಕ್ಕು
ನನಗ ಜಗದೊಡೆಯ ದಕ್ಕಿಂದು । ಸೂಳರಂಗಮ್ಮ
ನಮ್ಮ ಸ್ವಾಮಿಯ ಹಳದಿಯ ಪಾಗು ಹಿಡಕಂಡು । ರಂಗಮ್ಮ
ಹಿಂದಕ್ಕ ನಮ್ಮ ಸ್ವಾಮಿಯ ಎಳದಾಳೊ

ಏಳುವಾರದಿಂದ ನನ್ನ ಮಂಚದಲಿ ಒರಗಿದ್ದಕ
ನನಗ ಏಳುವಾರದ ಒತ್ತ ಕೊಡಬೇಕು । ಎಂದ ಸೂಳರಂಗಿ

ಆಗಂಡ ಮಾತ ಕೇಳಿಸಿ ತೊಳಸಮ್ಮ
ನಾ ಮಂಡಲ ಬರೆದು ಬಂದಿನಿ

ಹನುಮಂತ ಆಡಿದ ಮಾತ ಕೇಳಿದಳು ತೊಳಸಮ್ಮ
ಏಳುವಾರದ ಒತ್ತ ಕೊಡುತಾಳ

ಏಳುವಾರದ ಒತ್ತ ಈಸುಕೊಂಡು ಹನುಮಂತ
ಸೂಳರಂಗಮ್ಮನ ಮನಗ ಬಂದಾನು

ಸೂಳರಂಗಮ್ಮನ ಕರದಾನು ಹನುಮಂತು
ಹಿಡಿಯಮ್ಮ ನಿನ್ನ ವರಗೋಳ । ಎಂದು ಕೊಟ್ಟುಬುಟ್ಟ

ನಮ್ಮ ಮಂತ್ರಿ ನಾರಾಯಣನ ಕರಕೊಂಡು । ಹನುಮಂತು
ವೈಕುಂಠಕ ಸ್ವಾಮಿ ಬರುತಾರ

ವೈಕುಂಠಕ ಸ್ವಾಮಿ ಬರುವದ ಕಂಡು ತೊಳಸಮ್ಮ
ಮೇಲಗಿರಿ ಒಳಗ ನಿಂದರಲ್ಲ

ಮೇಲಗಿರಿ ವ್ಯಾಲ ನಿಂತ್ಕಂಡು ತೊಳಸಮ್ಮ
ಕೂಗಿ ಬಯ್ಯತಾಳ ನಾರಾಯಣನ

ಜಾತ್ಕೆಟ್ಟ ರಂಗಯ್ಯನ ಮೇಲಗಿರಿಗ ಕರತರಬ್ಯಾಡ
ಅವ ಏಳುವಾರದ ಗಂಟೆ ಸೂಳಮಲ್ಲಿ । ಇದ್ದದಕ
ಏಳುವಾರದ ತನಕ ಗುಂಗುರು ಮೂಳದಲ್ಲಿ ಕೂಡಬೇಕು

ಜಾತ್ಕೆಟ್ಟ ರಂಗಯ್ಯನ ಮೇಲುಗಿರಿಗ ಕರತಂದ್ರ
ನಾವು ಕುಲಗೆಟ್ಟು ಹೋಯ್ತೀವಿ । ಹನುಮಯ್ಯ
ಆವನ ಗುಂಗುರುಮಾಳ್ಗ ಕೂಡಬೇಕು

ಗುಂಗುರು ಮಾಳ್ಗ ಕೂಡಿದರು ನಾರಾಯಣನ
ನಾಳುಮುಂಡಿಗೆಯ ಜಡಿದಾರು । ರಂಗಯ್ಯನಿಗ

ಮುದ್ದುರಂಗಯ್ಯ ಕದ್ದು ವ್ಹಾಯ್ತಾರಂದು
ಮುತ್ತುರೊತ್ತುಗ ಬಡುತಾರ
ಮುದ್ದುರಂಗಯ್ಯಕಡದು ವ್ಹಾಯ್ತಾರಂದು
ಹವಳದ ಸರೊತ್ತುಗ ಬಡುತಾರ

ಹವಳದ ಸರೊತ್ತ್ಗ ಬುಟ್ಟುಬುಟ್ಟು ತೊಳಸವ್ಮ
ಮೇಲಗಿರಿಗ ಬಂದರು

ಕಳ್ಳರಂಗಯ್ಯನಿಂದ ಅನ್ನಹಾರ ನಮಗಿಲ್ಲ
ನೀರು ನಿದ್ರ ನಮಗಿಲ್ಲ
ಅನ್ನಹಾರವಿಲ್ಲ ನೀರುನಿದ್ದ ನಮಗಿಲ್ಲ
ನಡೆಯವ್ವ ನಾವು ಕಲ್ಯಾಣಿಗ

ಕಲ್ಯಾಣಿ ಕೊಳಕ ವ್ಯಾದಾರು ತೊಳಸವ್ಮ
ಮೊದು ಮಡಿಯು ಉಡುತಾರ
ಮೊದು ಮಡಿಯು ಉಟ್ಟಾರು ಕೊಳದಲ್ಲಿ
ಅವ್ವು ಆಗ್ನೇಯು ತಂದರು ಅರಮನಗ

ಆಗ್ನೇಯು ತಂದಾರು ಆರಮಲ್ಲಿ ಇರುಸೀರು
ಅಡಗಿಗ ತೊಳಸವ್ಮ ಇಳಿದಾಳು

ಅಂಗೈಲಿ ಅಕ್ಕಿ ಹಾದು ಮುಂಗೈಲಿ ಬ್ಯಾಳ ಹಾದು
ಹಾಲಿಗ ಅಕ್ಕಿ ಸುರಿದು । ನೀರಿಗ ಬ್ಯಾಳ ಸುರಿದು
ಬ್ಯಾಗದಲಿ ಅಡುಗ್ಯ ದುಡುಕಿಳು

ಬಟ್ಟ ಕುಂಬಳ ಹಣ್ಣ ತೊಟ್ಟು ತಗದು ಈಡಾಡಿ
ಹಟ್ಟಿಣ್ಣ ಒಳಗ ಕ್ರಮುಗೂಡಿ
ಹಟ್ಟಿಣ್ಣ ಒಳಗ ಕ್ರಮುಗೂಡಿದ ತಾಳದ
ಯೋಜನಕ ಗಮನ ಎಸೆದಾವು

ದಾರು ಈರದ ಕಾಯು ಬೇರು ತಗೆದು ಬಿಸಾಡಿ
ಒಳ್ಳೆಣ್ಣ ಒಳಗ ಕ್ರಮುಗೂಡಿ
ಒಳ್ಳೆಣ್ಣ ಒಳಗ ಕ್ರಮುಗೂಡಿದ ತಾಳದ
ದೂರಕ ಗಮನ ಎಸೆದಾವು

ಹುಳಿ ಈರದ ಕಾಯು ಉಗುರಲ್ಲಿ ನಾರ ತಗದು
ಒಳ್ಳೆಣ್ಣ ಒಳಗ ಕ್ರಮುಗೂಡಿ
ಒಳ್ಳೆಣ್ಣ ಒಳಗ ಕ್ರಮುಗೂಡಿದ ತಾಳದ
ದೂರಕ ಗಮನ ಎಸೆದಾವೊ

ಹಗ್ಗ ನುಗ್ಗಕಾಯಿ ನುಗ್ಗಾಯಿ ಎಳಗಾಯಿ
ಉದ್ದಿಸಿ ಬೆಳೆಯು ತಡಗುಣಿ

ಉದ್ದಿಸಿ ಬೆಳೆಯು ತಡಗುಣಿಯು ತಾಳದ
ದೂರಕ ಗಮನ ಎಸದಾವ್ರೊ

ಅರುವ ಹಾಗಲದ ದಂಟು ಕೋಗಲ ಚಪ್ಪರದಕಾಯಿ
ನಾಗುನಲ್ಲವರ ತಡಗುಣಿ
ನಾಗುನಲ್ಲವರ ತಡಗುಣಿಯು ತಾಳದವ
ನಾನಾ ಪರಿಯಾಗ ಮಡುಕಿದ

ನಾನಾ ಪರಿಯಾಗ ಮಡುಕಿದರ ತೊಳಸಮ್ಮ
ಅದು ದೂರಕ ಗಮನ ಎಸೆದಾವು

ಬೆಟ್ಟದ ವ್ಯಾಲ ಒಬ್ಬ ಅವ್ವ ಕರಿಯು ಸೀರ್ಯವ
ಅವಳಿಗ ಏಳುಸುತ್ತಿನ ನಡುಕಟ್ಟು । ಬಿದುರುಗಳ ತಾಳದ
ದೂರಕ ಗಮನ ಎಸೆದಾವು
ಗುಳುಕ ಮುಳ್ಳಾಕಿ ತಾಳೂ ಚಪ್ಪರ ಹೂಡಿ
ಅದು ನೂರುದ್ದ ಬೆಳೆಯುದು
ನೂರು ನೂರುದ್ದ ಬೆಳೆಯು ಪಡಲಕಾಯು
ಅದವಾಡಿದ ತೊಳಸಮ್ಮ । ವೈಕುಂಠದಲ್ಲಿ
ಅದು ಗಾವುದಕೆ ಗಮನ ಎಸೆದಾವು

ಅಡಗ ಊಟವೆಲ್ಲ ಅವರ ವೈಕುಂಠದಲ್ಲಿ ಅದುವಾದು
ನಾವು ಯಾಗ ಮಾಡವು ಊಟಗಳ
ಅವನ ದರುಶನ ಮಸ್ತೇವು ಇಲ್ಲದೆ ತಂಗಮ್ಮ
ನಾವು ಯಾಗ ಅಳಿಯುವವ್ವ ಊಟವ

ಹನ್ನೆಡು ದರುಶನವ ಅವ ಅಪ್ಪಿಕೊಂಡು ಮಲಗವನಲ್ಲ
ನಾವು ಯಾಗ ಅಳಿಯುವವ್ವ ಊಟವ
ಊಟವ ನಾವು ಯಾಗ ಮಾಡವು ತಂಗಮ್ಮ
ನಾವು ಹೋಗಿ ಕರೆಯುವು ಬಾ ತಂಗಮ್ಮ

ಅನ್ಯಾಯಕಾರನ ಕರೆದು ಯಾಗ್ಯವ್ವ.
ನನಗ ನಾಚಿಕಕವ್ವ

ನನಗು ನಾಚಿಕ ನಿನಗು ನಾಚಿಕೆ
ನಮ್ಮ ಬಾಗಿಲ ಹನುಮಯ್ಯನ ಕರತಾರವು

ಬಾಗಲ ಹನುಮಯ್ಯ ಬಾರಪ್ಪ ನನ ಕಂದ
ನೀ ಹೋಗಿ ಕರೆಯಪ್ಪ ನಮ್ಮ ಜಗದೊಡೆಯುನ

ಒಡತಿಯರು ಆಡಿದ ಮಾತು ಕೇಳಿನು ಹನುಮ
ಅನ ಹಾರಿ ಇಳಿದನು ತೇರಿನ ಬೀದಿಗ

ತೇರಿನ ಬೀದಿಗ ಇಳಿಯದು ಕಂಡು
ಒಳಗಿರುವ ನಾರಾಯಣ ಕೈಕಾಲ ನರವನ್ನೆಲ್ಲ । ಬಂದೇತಮಕ
ತುಯ್ಯ ಕಂಡು ಅವನು ಉಸಿರಿಡಿದು ಸ್ವಾಮಿ ಮನುಗಾನ

ಸಣ್ಣಾ ಎರನೆಲ್ಲ ಕರದು ಕಣ್ಣಿಗ ಮುತ್ತಿಸಿಕಂಡು
ಅನ ಕಟ್ಟಿರುವ ಕರದು ಕಾಲಿಗ ಮುತ್ತಿಸಿಕಂಡು
ಸಂದು ಹೋದವರ್ಗಾಗ ಮಲಗವನ

ಒಂದುಹಾರಿಗ ಹಾರಿದ ಅಲ್ಲಿಗ ಇಳಿದ
ನಾಡು ಮುಂಡಿಗೆಯು ಕಿತ್ತಾನು । ಹನುಮಯ್ಯ
ಬಗ್ಗಿ ನೋಡಿದರು ಜಗದೊಡೆಯುನ
ಬಗ್ಗಿ ನೋಡಿದರ ಜಗದೊಡೆಯು ಸಿರ್ದಾರಿ ಸಂದು ವ್ಹಾಗನ
ಅವ್ರು ಕುಟ್ಟಿಕೊಂಡಾರು ಎದಭುಜವ

ತುಂಬಿದ ಶುಕ್ರವಾರ ಒಪ್ಪತ್ತಿನ ಗಳುಗಲಿ
ಈ ಸಿರ್ದಾರಿ ನಾರಾಯಣ ಗುಂಗುರುಮಾಳಕ ಕೊಡಬಹುದ

ನಿಮ್ಮ ಬಳಾಯ ತೋಳೆಲ್ಲ ಬರಿದಾಯಿತಲ್ಲ
ನೀವು ಸಾಲು ಮುಂಡರಾದಲ್ಯಲ್ಲ
ವೈಕುಂಠವೆಲ್ಲ ಅಳಿದು ಹೋಯ್ತಲ್ಲ ಒಡತಿರ್‍ಯ
ನೋಡಿ ಬನ್ನವ್ವ ನಾರಾಯಣನ

ಹನುಮಂತ ಆಡಿದ ಮಾತ ಕೇಳಿದ ಇಬ್ರುವ
ಓಡಿ ಬಂದಾರು ಗುಂಗುರು ಮಾಳಕ
ಬಗ್ಗಿ ಜಗದೊಡಯುನ ನೋಡಿದರು

ಬಗ್ಗಿ ಜಗದೊಡಯುನ ನೋಡಿದ ತೊಳಸಮ್ಮ
ಕೆಟ್ಟೆ ಎಂದಳು

ಕಲ್ಲಿಗ ಸಾವದ್ರು ಹುಲ್ಲಿಗ ಸಾವದ್ರು
ಈ ಸಿರಹರಿ ಜಗದೊಡಯನಿಗ ಸಾವೆ ವೊದಲಿಲ್ಲ
ಇದೇನು ಮಾಯವು ತಿಳಿಯಾದು

ಹತ್ತು ಬೆರಳಲ್ಲಿ ಪುಟ್ಟು ಪಾದ ಹಿಡಕಂಡು
ಧರಣಿಗ ಸೋಕ ಪಡುತಾರ

ವೈಕುಂಠದಲ್ಲಿ ಸಿರಿಹರಿ ಸಂದುವ್ಹಾದ ಅಂದರ
ಏಳೇಳು ಹದಿನಾಲ್ಕು ಲೋಕ ನಗುತಾವ

ಎಚ್ಚಳದ ಮಡದಿರ ದಂಡಲಿ ಕುಂಡ್ರುಸ್ಕಂಡು
ಒಂದು ಎಚ್ಚಳದ ಮಾತ ಆಡನಿಲ್ಲ

ನೀವು ಯಾಗ ಬುಟ್ರಯ್ಯ ಪ್ರಾಣಗಳ । ಅನುತೇಳಿ
ಪಾದವ ಬೇಡಿ ಅಳುತಾಳ ತೊಳಸಮ್ಮ

ಗಿರಿಯ ಬುಟ್ಟುಬುಟ್ಟು ಮಡದಿರ ಬುಟ್ಟುಬುಟ್ಟು
ನೀ ಬುಡ ಬೋದ ನಿನ್ನ ಪ್ರಾಣಗಳ । ನಾರಾಯಣ

ನಿನ್ನ ವೈಕುಂಠಕ ಯಾರ ಒಡೆಯರು
ನಿನ್ನ ಕಮರಿ ಹಳ್ಳ ಇನ್ಯಾರಿಗ್ಯ ಕಲ್ಯಾಣಿಕೊಳ ಇನ್ಯಾರಿಗ್ಯ
ನಿನ್ನ ರುದ್ರಾಕ್ಷಿ ಮಂಟಪ ಇನ್ಯಾರಿಗಯ್ಯ

ಅವ್ರು ಪಾದವ ಹಿಡಕಂಡ ತೊಳಸಮ್ಮ
ಧರಣಿಗ ಶೋಕವ ಪಡುತಾಳ

ಹನ್ನೆಡು ದರುಶನದ ಆಯುಧ ಮುಸ್ತೀಪ
ಅವನ ಹತ್ತಿರಕ ಮಡುಗ್ಬುಟ್ಟು ಅಳುತಾರ

ಹುಲಿಯ ಚರ್ಮ ಇನ್ಯಾರಿಗ್ಯ
ನಿನ್ನ ಹುಲ್ಲ ಕಿಷ್ಣ ಇನ್ಯಾರಿಗ್ಯ । ಎನುತೇಳಿ
ಸೋಕಾವ ಮಾಡಿದಳಾಗ ತೊಳಸಮ್ಮ

ಸಂಕು ಜಾಗಟೆ ಯಾರಿಗ್ಯ ನಮ್ಮ ಸ್ವಾಮಿ
ನಿನ್ನ ಬಾಂಕಿ ಬಾಪುರಿಗಳು ಯಾರಿಗಯ್ಯ ಎನುತೇಳಿ
ಪಾದ ಮುಟ್ಟಿ ಸೋಕವ ಮಾಡುತಾಳ

ಗರುಡುಗಂಭ ಯಾರಿಗ್ಯ ನೈರುವುಡಿಯಾರಿಗ್ಯ
ಗುಂಭು ಗೊರಳು ಇನ್ಯಾರಿಗಯ್ಯ ನಮ್ಮ ಸ್ವಾಮಿ

ನವಿಲುದೊಂಡ ಯಾರಿಗ್ಯ ನನ್ನೊಡೆಯ
ನತ್ತಿಯ ದಂಡ ಇನ್ಯಾರಿಗ್ಯ

ಚೆಂಡಿನಕುಚ್ಚು ಅವ್ನ ಹಳದಿಯ ಪಾಗು ಹಿಡಿದು
ಸೋಕ ಮಾಡಿದಳು ತೊಳಸಮ್ಮ

ಹನ್ನೆಡು ದುರುಸನವ ಅವನ ದಂಡಲಿ ಮಡಿಕಂಡು
ಇಲ್ಲದ ಸೋಕ ಪಡುತಾಳ

ನಂದಗೋಕುಲದ ಚೆನ್ನಗೋಪಾಲನೆ
ನಿಮ್ಮ ಅಣ್ಣಯ್ಯನವ್ರು ಸಂದೋದ್ರು ಎಂದು
ಒಂದು ಕಾಗುದುವ ಬರದರು

ಮೊಡಲಗಿರಿಯಲ್ಲಿರುವ ಮುದ್ದುಮಾದಯ್ಯನವ್ರು
ನಿಮ್ಮ ಭಾಮೈದ ಸಂದೋಗರ ವೈಕುಂಠದಲ್ಲಿ
ಬ್ಯಾಗ ಬರಬೇಕು ಹೋಮಗೊಂಡಕ

ಮುಡುಕುದೊರಲಿರುವ ಮುಮ್ಮೇಳದ ಮಲ್ಲಣ್ಣ
ನಿಮ್ಮ ಭಾವ ನಾರಾಯಣ ಸಂದೋದ್ರು ವೈಕುಂಠದಲ್ಲಿ
ಅವ್ರ ಹೋಮಗೊಂಡಕ ಬರಬೇಕು

ದೇವಮಾನ್ಯರೆಲ್ಲ ಇಳಿದು ಬಂದಾರು ವೈಕುಂಠಕ
ನರ ಮುನಿ ನಾರಾಯಣನ ಕಂಡಾರು

ಏನು ಮಾಯವೊ ತಿಳಿಯದು ಎನುತೇಳಿ
ಚೋದಿಗ ಮಾಡಿದರು ಮುನಗಳು

ಕಲ್ಲಿಗ ಸಾವದ್ರು ಹುಲ್ಲಿಗ ಸಾವದ್ದು
ನಾರಾಯಣನಿಗ ಸಾವು ಮೊದಲಲ್ಲವಲ್ಲ ವೈಕುಂಠದಲ್ಲಿ

ಇದೇನು ಮಾಯವೋ ಇದೇನು ಕುಚೋದ್ಯವೊ
ಏನು ತಿಳಿಯದು ಎನುತೇಳಿ ಮುನಗಳು
ಏಳೀರಿ ನೀವು ಇನ್ನು ವೈಕುಂಠದಲ್ಲಿ

ಅಚ್ಚಡಿಯು ಕೆತ್ತಿರಿ ಕುಚ್ಚು ಹೂವಿನ ದಂಡೆಯು ತಿದ್ದಿರಿ
ಕುರುಜು ಕಟ್ಟಿರಯ್ಯ ನಾರಾಯಣನಿಗ

ಸುರುವುನ್ಮೂರುಕೋಟಿ ಶರಣರೆದ್ದು ವೈಕುಂಠದಲ್ಲಿ
ಕುರುಜು ಗೈಯಾಕ ಕುಂತರಲ್ಲ

ಕುರುಜನ್ನೆ ಗೇದಾರು ಹೂವನ್ನೆ ಬುಟ್ಟಾರು
ನಾಲ್ಕು ಮೂಲಿಗ ನಾಲ್ಕು ಕಬ್ಬಣ ಜಲ್ಲ
ನಾಲ್ಕು ಬಾಳಕಂದ ಕಟ್ಟಿದರಾಗ ಮುನಗಳು
ನಾಲ್ಕು ತೆಂಗಿನ ತಾರ ಕಟ್ಟಿದರು ಕುರುಜಿಗ
ಅಲಂಕರಿಸಿದರು ಕುರುಜನ್ನೆ

ಕುರುಜು ವೃಂದವಾನ ಗೇಯಾಗ ಮುನಗಳು
ನಮ್ಮ ನಾರಾಯಣನಿಗ ಸುಂಗಾರವ ಮಾಡಿದರು

ಆರು ತಪ್ಪಲ ನೀರು ಹೋರಾಡಿ ಕಾದಾದ
ಪಚ್ಚತೆನೆಯಲ್ಲಿ ಗಮಗರದವ
ಪಚ್ಚತೆನೆಯಲ್ಲಿ ಗಮಗರದು ಕಾದ ನೀರ
ಎರದರು ನಾರಾಯಣನ ಸಿರಮುಡಿಗ

ಗುಂಭದ ನೀರು ಗುಳುಗುಳುನ ಕಾದವ
ಮುಡುವಾಳ ಹಾಕಿ ಗಮಗರದವ
ಮುಡುವಾಳ ಹಾಕಿ ಗಮಗರದು ಕಾದ ನೀರ
ಎರದರು ನಾರಾಯಣನ ಸಿರಮುಡಿಗ

ಹತ್ತು ಕೊಂಬಿನ ಅರುಸಿಣವ ಎತ್ತಿ ಬಟ್ಟಲ್ಗ ತುಂಬಿ
ಮುತ್ತೈದೆರ ಕೈಲಿ ಅರುಸುಣವ ಹದಗೂಡಿದ
ಎರದರು ನಾರಾಯಣನ ಸಿರಮುಡಿಗ

ಅಷ್ಟದ ಅರುಸನೆ ದುಡ್ಡಿನ ಸೀಗಕಾಯಿ
ಅದು ಸಾಗರದಲ್ಲಿ ಬೆಳೆಯು ಹಣ್ಣು ಜನನ ಬಾಳೆಹಣ್ಣು
ಋಷಿಗಳು ತಂದು ಇರಸಿದರು

ಗಂಧದ ಕೊಳದಲ್ಲಿ ನಾಲ್ಕು ಚಿನ್ನದ ಕಂಭ
ರನ್ನದ ಚೆಂಬ ಬಲಗೈಲಿ ಹಿಡಕೊಂಡು
ನೊಗದು ಊದಾರೊ ಜಗದೊಡನಿಗ

ಕೋಟಿ ಶರಣರೆಲ್ಲ ರನ್ನದ ಮೊಗ ಬಲಗೈಲಿ ಹಿಡಿದು
ಎರದರು ನಾರಾಯಣನ ಸಿರಮುಡಿಗ

ನಾಮದ ಒಡೆಯ ಸಂದ್ಯೆ ವ್ಹಾದ್ಯ
ಕಾಲು ಚೋರಿ ಹನುಮಯ್ಯ
ನಡುವ ಲಕ್ಷ್ಮಿದೇವಿ
ತಲಚೋರಿ ಎಳೆಯ ತೊಳಸಮ್ಮ

ತಲಗ ಕೈ ಹಾಕಿ ಎತ್ತಿಕೊಂಡು ನಾರಾಯಣನ
ಕುರುಜಿನ ಮ್ಯಾಲ ಇರಿಸಿದರು
ಕುರುಜಿನ ಮ್ಯಾಲ ಇರಿಸಿಬುಟ್ಟು ನಾರಾಯಣನ
ಅವ್ನ ಅಂಬು ಬಾಣವ ಕಂಕಳಿಗೆ ಕೊಟ್ಬುಟ್ಟು
ಅವ್ನ ಪಾದಪೂಜವ ಮಾಡುತಾರ

ಇಂಬಿಯ ಹಣ್ಣಿನಾಗ ಅವ್ರ ಗುಂಭದಲ್ಲಿ ಪನ್ನೀರು
ಇಂದು ನಾರಾಯಣನ ಸಿರಿಪಾದಕ ಎರದ್ಬುಟ್ಟು

ಈಬೂತಿ ಭಸುಮಾಂಗವ ಪಾದದ ಮ್ಯಾಲ ಮಡುಗುಬುಟ್ಟು
ಗಟ್ಟಿ ಕರ್ಪೂರದ ಮಂಗಳಾರತಿ ಮಾಡ್ಬುಟ್ಟು

ಎತ್ತಿರಯ್ಯ ನಾಲ್ಕು ಜನರು
ನಾಲ್ವರು ಹೊತ್ತಿಕಂಡ ಚೆಂತ್ರಿ ನಾರಾಯಣನ
ಅವ್ರು ಬಂದಾರು ಕಲ್ಯಾಣದ ಕೊಳಕ
ಹೊತ್ತಿದ್ದ ನಾರಾಯಣನ ಇಳ್ಕಬುಟ್ಟು ಏರಿ ಮ್ಯಾಲ
ಎಳೆಯ ತೊಳಸಮ್ಮನ ಕರೆದಾರೊ

ವೈಕುಂಠದ ಒಡೆಯನಿಗ ನೀವು ಮಡದಿರು ಆದದ್ಕ
ಹಿಡಿಯಿರಮ್ಮ ನಿಮಗೆ ಇಳ್ಯಾವ
ನಾರಾಯಣನ ಇಳ್ಯಾವ ತೊಳಸಮ್ಮನಿಗ ಕೊಡಸ್ಬುಟ್ಟು
ತೊಳಸಮ್ಮನ ಇಳ್ಯಾವ ನಾರಾಯಣನಿಗ

ಅವ್ನಿಂದ ಇವರ್ಗ ಇವರಿಂದ ಅವನ್ಗ ಇಳ್ಯಾವಾಗಿ
ಚೆಂತ್ರಿ ನಾರಾಯಣನ ಮೊಕವನ್ನೆ ನೋಡಿದರು

ತಮ್ಮ ಬಾಗಲ ಹನುಮಯ್ಯನ ಕರೆದಾರು
ಹಿರಿಯ ಮಗನಾಗಿ ನೀ ಸಾಕಿಸಿಕೊಂಡದ್ಯ
ಮೀದು ಮಡಿಯ ಉಡುಹೋಗು

ಮೀದು ಮಡಿಯ ಉಟ್ಟು
ಹೊರ ಅರ್ಬ್ಬಿಗ ಮೂರು ಹೆಜ್ಜಾಯ ಕೊರದು
ಗುಂಭದ ಅಗ್ನೀಯ ಹೊತ್ತಿಕಂಡು
ತಲಬಳಸಿ ಮೂರು ಸುತ್ತ ಬಂದಾನು
ತಲ ಬಳಸಿ ಮೂರು ಸುತ್ತು ಬರುವಾಗ

ಇವ್ರು ಅಸುಳಾಯ ಮ್ಯಾಗ ಬಾಳ ಎಲೆಯ
ನೊಗ ಮುರಿದಂಥ ಬಾಳೆಎಲಯ ಹಾಸಿಬುಟ್ಟು
ಹಲವಾರು ಶರಣರು ಎತ್ತಿ ನಾರಾಯಣನ
ಅಸುಳಾಯ ಮ್ಯಾಗ ಮನಗಿಸಿ

ಸುರುಮುನ್ನೂರು ಕೋಟಿ ಶಿವಶರಣರೆಲ್ಲ
ಅವರೂ ತೀರ್ತ್ಥವ ಜಪಿಸೀರು
ಜಪವನ್ನೆ ಮಾಡಿರೊ ತ್ರಪ್ಸನ್ನೆ ಮಾಡಿರೊ

ಮಂತ್ರ ಉಪದೇಸಗಳ ಮಾಡಿ ನಾರಾಯಣನಿಗ
ಎದ್ದು ತೀರ್ತ್ಥವ ಎಸೆದಾರು

ಗುಂಭದ ಅಗ್ನಿಯ ಹೊತ್ತುಕೊಂಡು ಹನುಮಯ್ಯ
ಮೂರು ಸುತ್ತನ್ನೆ ತಿರುಗಿ ಬಂದು
ತಲಬಳಸಿ ಗುಂಭವ ಹೊಡದಾನು
ತಲಬಳಸಿ ಗುಂಭವ ಹೊಡದ್ಬುಟ್ಟ
ತಲಚೋರಿ ಬೆಂಕಿಯ ಮಡುಗಯ್ಯ

ಗೆಡ್ಡ ಕರ್ಪೂರವ ಎತ್ತಿಕೊಂಡು ಹನುಮಯ್ಯ
ತಲಚೋರಿ ಬೆಂಕಿಯ ಮಡುಗಿದರ
ಕಟ್ಟೆ ಎಂದಾನು ಜಗದೊಡೆಯ

ಕೀಳುಲೋಕಕ ಉಸಿಯಾದ್ರು ಮೇಲು ಲೋಕಕ ಉಸಿಯಾದ್ರು
ಈ ಅಗ್ಗಮ್ಮನಿಗ ನಾನು ಉಸಿಯಾಗಲಾರಿ
ಅಗ್ಗಮ್ಮನಿಗ ಉಸಿಯಾಗಲಾರಿ ಎಂದು ನಾರಾಯಣ
ಹಿಡಿದಿದ್ದ ಉಸುರ ಬುಟ್ಟಿಬುಟ್ಟ

ಎಡದಿಂದ ಬಲಕ ಉರುಳಿದರ ನಾರಾಯಣ
ಅತ್ತಿ ನೋಡಿದಳು ತೊಳಸವ್ಮ
ಸಂದುಹೋದ ಎಂದು ತಿಳ್ದಿದ್ವಲ್ಲ ನವ್ಮೊಡೆಯನ
ಈಗ ಹೋಗಿದ ಸೂಲು ಬಂದಿತು
ಇವ್ನ ವೇಲಿಂದ ಕೆಳಕ ಎತ್ತಿಕನ್ನಿ

ಶಿವಶರಣ ಜಂಗವುರು ಎತ್ತಿಕೊಂಡು ನಾರಾಯಣನ
ಬಣ್ಣವ ವುಂದಲ್ಗ ವ್ಯಾಲ ವುಲಗಿಸಿ
ಅವನ್ಗ ಎಳನೀರು ಇಂಬಿಹಣ್ಣಿನ ತನುವನ್ನೆ ಕೊಟ್ಟು
ಎತ್ತಿ ಕುಂಡುರುಸ್ದ್ರು ಜಗದೊಡೆಯನ

ಅವ್ನ ಆಳು ಫಲಕ್ಕಿ ಸೂಳರ ವ್ಯಾಳದ ಸಯುವಾಗಿ
ವೈಕುಂಠಕ ಸ್ವಾಮಿಯು ಕರಕಂಡು ಬಂದು
ಅವ ಇಕ್ಕಿದ ಮುಸ್ತೇಪ ಕಳೆದರು
ಇಕ್ಕಿದ ವುಸ್ತೇಪ ತಗದ್ಬುಟ್ಟು ತೊಳಸವ್ಮ
ಗುಂಭದ ಆಗ್ನೇಯ ಊದಾರು

ಗುಂಭದ ಆಗ್ನೇಯ ಊದ್ಬುಟ್ಟು ತೊಳಸವ್ಮ
ಅವನಿಗೆ ಮೀದು ಮಡಿಯ ಮಾಡಿಸಿದ್ರು
ಅವ್ನ ಗಂಧದ ಮಳುಗಲಿ ವುಲಗಿಸಿ
ಗಂಧದ ಮಳುಗಲಿ ವುಲಗಿಸ್ಬುಟ್ಟು ತೊಳಸವ್ಮ
ಒಂದು ಹಾಸುರಾಸ್ಯದ ಆಡಿದಾಳು

ಸಿದ್ಧರಿ ನಾರಾಯಣ ಸಂದ್ಹೋದ್ರುರಲ್ಲ ಎಂದು ತಿಳ್ದಿದ್ದುವು
ಈ ವೈಕುಂಠಕ ಒಡಯ ಯಾರು ಇಲ್ಲ ಎಂದು
ಜರಿದೆವು ಸ್ವಾಮಿ ನಾರಾಯಣನ

ಪೂರು ಫಲದ ಪುಣ್ಯದಿಂದ ತೊಳಸವ್ಮ
ನಿಮ್ಮ ಬಳಿಯ ತೋಳಿಗ ನಾ ಒಡೆಯನಾಗಿ
ಉಳಿದಿನಿ ತೊಳಸವ್ಮ ವೈಕುಂಠದಲ್ಲಿ

ಸಂದು ಹೋಗಿದ್ದ ಚಿಂತ್ರಿ ನಾರಾಯಣನಿಗ
ಉಪಚಾರ ಮಾಡಿರಿ ಮಡದಿರ‍್ಯ
ಅವ ಉಪಚಾರ ಮಾಡಿಸಿಕಂಡ

ಜೇನು ಸಕ್ಕರ ಹಾಲಲಿ ಹದಗೂಡಿ
ಎಳೆಯು ತೊಳಸಮ್ಮ ಕೊಡುತಾಳ

ಹೆಜ್ಜೇನು ತುಪ್ಪ ಇಸಿಯು ಮಾವಿನ ಹಣ್ಣ
ಹದಮಾಡಿ ಕೊಡುತಾಳ

ಸರದ ಕಜ್ಜೂರ ರಸದಾಳಿ ತುಂಡು
ಮೈಸೂರು ಪಾಕು ಮದರಂಗು ಬಾಳೆಹಣ್ಣು
ರಸದಾಳಿಂಬಿ ಕೊಡುತಾಳ

ರಸದಾಳಿಂಬಿಯು ತಕ್ಕಂಡು ನಾರಾಯಣ
ಎತ್ತಿ ಸಲ್ಲಿಸಿದರು ಹೃದಯಕ
ಕಲಸಿದ ಕಜ್ಜೂರ ಅತ್ರಸ್ವನ್ನ
ಅವ ಎತ್ತಿ ಸಲ್ಲಿಸಿದ ಹೃದಯಕ

ತಿಂಡಿಫಲಾರನ್ನೆಲ್ಲ ಸಲ್‌ಸ್ಕಂಡು ನಾರಾಯಣ
ಊಟಕೆ ಬರುತೀನಿ ಮಡದಿರ‍್ಯ
ನೀವು ಬ್ಯಾಗನ ಸಿಸ್ತ ಮಾಡಿರಿ

ಹಣ್ಣು ಸಕ್ಕರೆಯು ಸಲ್‌ಸ್ಕಂಡು ಊಟವಲ್ಲ
ನಾನು ಈಗ ಮೊಕ ಮಜ್ಜನವ ಮಾಡಿ ಬರ್ತೀನಿ

ಮೊಕಮಜ್ಜನವ ಮಾಡಿಕೊಂಡು ಸ್ವಾಮಿ ನಾರಾಯಣ
ಗಂಧದ ಮಳುಗಲ್ಲಿ ಕೂತುಕೊಂಡ । ನಾರಾಯಣನಿಗ
ಅವ್ರು ಬಾಳಾಯ ಎಲಿಯ ಮಡುಗೀರು

ಅಟ್ಟಂಥ ಅಡುಗ್ಯ ಸುಟ್ಟಂಥ ಕಜ್ಜಾಯವ
ಅವ್ರು ಬಟ್ಟಲಿಗ ತುಂಬಿ ಬಾಳ ಎಲಿಯ ಮುಸುಕಿಟ್ಟ್ರು
ಚಂತ್ರಿ ನಾರಾಯಣನಿಗ ಇರುಸೀರು

ರಾಮಗಣಜವ ದಂಡಲಿ ಮಡುಗಿ
ಪೂಜೆಗ ನಾರಾಯಣ ಕೂತುಕೊಂಡು
ಪೂಜಾಯ ಮಾಡುವಾಗ ಕೈ ಎತ್ತಿ ಮುಗಿದಾರೊ

ಭೋಜನಕ ಕೂತ್ಕಂಡು ನಾರಾಯಣ
ಊಟಮಾಡಿರೊ ಕೋಟೆಮನ್ನಯ್ಯನವ್ರು
ನೋಟದ ಶಾಲಿಗ ಬರುತಾರ

ನೋಟದ ಶಾಲಲಿ ಕೂತಿರು ನಾರಾಯಣನಿಗ
ಉಂಡಡಕ ಬೆಳಿಎಲ ಕೊಡುತಾರ
ಉಂಡಡಕ ಬೆಳಿಎಲ ಇಳ್ಯಾವ ಮಾಡಿಕಂಡು
ಅವ್ರು ಪಟ್ಟೆ ಮಂಚಕ ತೆರಳಿರೊ

ಪಟ್ಟೆಮಂಚದಲ್ಲಿ ಸುಖನಿದ್ದೆ ಮಾಡುವಾಗ
ಅವ್ರು ಜಾವದ ಹೊತ್ತಲಿ ಎದ್ದರಲ್ಲ
ಬೆಳ್ಳಿಮೂಡಿದೊ ಬೆಳಗಾಗಿ ಬಂದಿತೊ
ಅವ್ರು ಕಲ್ಯಾಣಿಗ್ಹೋಗಿ ಬರುತಾರ

ಕಲ್ಯಾಣಿಗೋಗಿ ಬಂದೇನೊ ತೊಳಸಮ್ಮ
ನನ್ಗ ಬ್ಯಾಗದಲಿ ಊಟವ ಹದಪಡಸು
ಬ್ಯಾಗದಲಿ ಊಟ ಮಾಡಿಕೊಂಡು ನಾರಾಯಣ
ಉಂಡಡಕ ಬೆಳಿಎಲಯ ಕೈಯೊಳಗ ಹಿಡಕಂಡು
ಮಡದಿರ ಕರೆದು ಏನಂದರಾಗ

ಹೆಣ್ಣ ಹೇಳಿದ ಮಾತಿಗ ಕೋಪ ಬ್ಯಾಡ ತೊಳಸಮ್ಮ
ನಾನೊಂದು ಮಾತ ಹೇಳುತೀನಿ

ಕೂತು ಉಣ್ಣ ಮನ್ಗ ಕುಡುಕ ಹೊನ್ನು ಎಟ್ಟಾದು
ಮೂರು ಮನ ಉಪದಾನಕ ಹೋಯ್ತನಿ
ನನ್ನ ಸಂಕು ಜಾಗಟೆಯು ಕೊಡುಹೆಣ್ಣೆ
ನನ್ನ ತಿರುನಾಡು ಬೊನಾಸಿಯು ಕೊಡುಹೆಣ್ಣೆ

ಹುಲಿಯು ಚರ್ಮ ಉಟ್ಟಾರ ಹುಲ್ಲ ಕಿಷ್ಣನ ಕಂಕುಳ್ಗ ಹಾಕರ
ನನ್ನ ರಾಮು ಗಣಜವ ಕೊಡು ಹೆಣ್ಣೆ
ಬಾಂಕಿಯು ಕೊಡ್ಹೆಣ್ಣೆ ನ್ಯೆರ್‍ಮುಡಿಯು ಕೊಡ್ಹೆಣ್ಣೆ
ಗರುಡುಗಂಭವ ಕೊಡುಹೆಣ್ಣೆ

ನವಿಲುಗರಿದೊಂದ ಕೊಡ್ಹೆಣ್ಣೆ ಹಳದಿಯು ಪಾಗ ಕೊಡ್ಹೆಣ್ಣೆ
ನನ್ನ ಬೆಂಡಿನ ಕುಚ್ಚ ಕೊಡು ಹೆಣ್ಣೆ

ಹನ್ನೇಡು ವರುಸನವ ಹರಸಿಕೊಡುವಾಗ
ಮತ್ತೇನು ರಾಣಿ ತೊಳಸಮ್ಮ ನುಡಿದಾಳೊ

ನೀವು ಆಯುಧವ ತಕ್ಕಂಡು ಎಲ್ಲಿಗ ವ್ಹಾದರಿ ಜಗದೊಡೆಯ
ಕಂಡ್ಹೆಣ್ಣ ಬಿಡೋರಲ್ಲ ಗಿರಿವಾಸಕ ಬರೋರಲ್ಲ
ಎಲ್ಲಿಗ ವ್ಹಾದರಿ ಜಗದೊಡೆಯ

ತೊಳಸಮ್ಮ ಆಡಿದ ಮಾತ ಕೇಳಿದರು ಜಗದೊಡೆಯ
ಹೆಣ್ಣಿನ ಸುದ್ದಿ ನಿನಗ್ಯಾಕೊ ತೊಳಸಮ್ಮ
ನಾನು ಮೂರು ಮನೆಯ ಉಪದಾನಕ ಹೋಯ್ತಿನಿ

ಅವ್ರು ದರುಶನುವ ತಕ್ಕಂಡು ಧರಿಸಿಕೊಂಡು
ವೈಕುಂಠ ಬುಟ್ಟು ಇಳಿಯಾಗ
ಬಾಗಲ ಹನುಮಂತನ ಕರೆದಾರೊ

ವೈಕುಂಠದೊಳಗ ಜಗದೊಡೆಯನಿಲ್ಲವೆಂದು
ಬಂದವರ ಜರಿಯಬೇಡ ಹನುಮಯ್ಯ
ವೈಕುಂಠದ ಕಾಲು ನಿನದಯ್ಯ ಎಂದು
ಆಶೀರ್ವಾದ ಕೊಟ್ಟು ಹನುಮಯ್ಯನಿಗ

ಅಡವಿಯ ಒಳಗ ಬರುವಾಗ ನಾರಾಯಣ
ಸ್ವಾಲಿಗರ ವ್ಹೋಡ ಕಂಡರಾಗ

ಪುರಾಣಿ ಬೊಮ್ಮಗೌಡನ ಹಟ್ಟಿಯ ಬಾಗಿಲಲ್ಲಿ ನಿಂದಾರು
ಹರನಿಗ ಬಿಕ್ಷೆಯೆಂದು ಗುರುವಿಗ ಬಿಕ್ಷೆಯೆಂದು
ಗುರುಧರ್ಮದ ಕ್ವಾರಣ್ಯವ ಕೇಳಿದರಾಗ

ಬೊಮ್ಮಗೌಡನ ಹೆಂಡತಿ ಓಡಿ ಬಂದು ಜಗದೊಡಯನ ನೋಡಿದಳು
ಬೆತ್ತದ ಮೊರವ ಎತ್ತಿಕಂಡು । ಮುಸುಕಿನ ಜ್ವಾಳವ ತುಂಬುತಾಳ
ಹತ್ತು ಎಲ ಹತ್ತು ಅಡಕ ಈಬೂತಿ ಗಟ್ಟಿಯ ತಕ್ಕಂಡು ಬಂದಾಳೊ

ಅವ್ರ ಮುತ್ತಿನ ಜೋಳಿಗ ನೀಡುತಾಳ
ಬಗ್ಗಿ ಜೋಳಿಗೆಯ ಒಡ್ಡಾಗ ನಾರಾಯಣ
ಬಗ್ಗಿ ಕಂಡರಾಗ ಕುಸುಮಾಲಯ

ಬಾಳಾಯ ಮನಗ ಭಾಗ್ಯದ ಒಂದು ಮೊರ ಹೊನ್ನು ಸಾಲದು
ನನಗ ಇನ್ನೊಂದು ಕೈಯ ಬಿಕ್ಷೆ ಕೊಡಮ್ಮ

ಇನ್ನೊಂದು ಕೈಯ ಬಿಕ್ಷಾವ ಕೇಳಿದ ಅವ ಓಡಿ ಹೋಯ್ತಾಳ

ಹಾಲು ಅನ್ನ ಉಂಡು ಸಾಲು ನಾಣ್ಯ ಹೊದ್ದು
ಸಾಲು ಮಂಚದ ಮ್ಯಾಲ ಒರಗಿರುವ ಕುಸುಮಾಲ್ಯ
ದಾಸಯ್ಯನಿಗ ಒಂದು ಕೈಯ ಬಿಕ್ಷ ನೀಡವ್ವ

ತಾಯಿ ಆಡಿದ ಮಾತ ಕೇಳಿದಳು ಕುಸುಮಾಲ
ಕ್ವಾಪ ಬಂದೀತು ಮನದಲ್ಲಿ

ದಾಸಯ್ಯನ ಯಾಸ ಕಾಸಿಗ ಬೇಡವಲ್ಲ
ನಾ ದಾಸಯ್ಯನಿಗ ಬಿಕ್ಷಾವ ನೀಡಬೋದ

ಉಬ್ಬು ನೋಡಿದರ ಗೊಬ್ಬಳಿಯ ಮರದಾಗ
ಕಣ್ಣು ನೋಡಿದರ ಗುಳ್ಳ ಕಣು ದಾಸಯ್ಯನಿಗ

ಮೂಗು ನೋಡವ್ವ ಮೂಲಂಗಿ ಗಡ್ಯಾಗ
ಬಾಯಿ ನೋಡಿದರ ಬಳ್ಳದಾಗ ದಾಸಯ್ಯನಿಗ

ನಾಲಿಗ ನೋಡವ್ವ ಕೊಂಗದಾಗ
ಹಲ್ಲು ನೋಡಿದರ ಹಲುಬ್ಯಾಗ ದಾಸಯ್ಯನಿಗ

ಕಾಲು ನೋಡವ್ವ ಕಮಕೋಲಾಗ
ಹೊಟ್ಟೆ ನೋಡಿದರ ಕೊಳ್ಗದಾಗ ದಾಸಯ್ಯನಿಗ

ನನ್ನಾಣು ಕೊಡುನಾರೆ ನಿನ್ನಾಣು ಕೊಡನಾರೆ
ನಮ್ಮ ಅಪ್ರಾಣು ಬಿಕ್ಷಾವ ಕೊಡನಾರೆ

ನನ್ನ ಯಾಸವ ನೀನು ಹರೆದದ್ಯ ಎಳಯವಳ
ನಿನ್ನ ಪಾಡ ನಾನು ಇನ್ನು ಪಡುಸುತೀನಿ
ಕಕ್ಕಸೊಪ್ಪು ಉಡಿಸಿ ಕಾವಲು ನಾವು ತಗದು
ನಿನ್ನ ತಕ್ಕತ್ತೈ ಎಂದು ಕುಣಿಸದ ಮ್ಯಾಲ
ನಾನು ಚಂತ್ರಿ ನಾರಾಯಣನಲ್ಲ ಎಳೆಯವಳ

ಅವಳ ಸೋಕಿನ ಮಾತ ಕೇಳಿಕೊಂಡು ವೈಕುಂಠಕ ಬಂದಾರೊ
ಮಿಂದು ಮಡಿಯ ಉಟ್ಟು ಊಟ ಭೋಜನಕ ತೆರಳೀರೊ

ಊಟ ಭೋಜನಕ ಕೂತಾಗ ನಾರಾಯಣ
ಮಡದಿ ತೊಳಸವ್ವ ಓಡಿ ಬಂದು

ಗ್ಯಾಸುಲಕ್ಕಿ ಅನ್ನ ಕೆಂದೆವ್ಮ ನೊರಹಾಲು
ರಾಜ ಈರುಳ್ಳಿಯ ಬಡಿಸೀಳು

ಊಟ ಮಾಡಿರೊ ಕೋಟಿ ಮನ್ಮಯ್ಯನವ್ರು
ನೋಟದ ಶಾಲಿಗ ಬಂದು ನಾರಾಯಣ
ಸುಖನಿದ್ರ ತೀರಿಸಿಕೊಂಡು ಜಾಮದ ಹೊತ್ತಲ್ಲಿ ಎದ್ದರಾಗೆ

ಮಂತ್ರಿನಾರಾಯಣ ಚಂತ್ರಿಯಾಸನ ತಾಳಿ
ಕಂಚಿನ ಬುಡಬುಡಕಿ ಕೈಯೊಳಗ ಹಿಡಕೆಂಡು
ಸರ್ರಾತ್ರ ಬಳಗ ಸ್ವಾಲಿಗರ ಪ್ರೋಡಿಗ ಬರುತಾರ

ಬೊಮ್ಮಗೌಡನ ತಿಪ್ಪಮ್ಯಾಲ ನಿಂತು । ಸಾರಿದರು ಸಣ್ಣಾ ದನಿಯಲ್ಲಿ
ಘಟ್ಟಕ ಮಳ ಊದ್ರೂ ಬೆಟ್ಟಕ ಮಳ ಊದ್ರೂ
ಸ್ವಾಲಿಗರ ಪ್ರೋಡಿಗ ಮಳ ಬೆಳ ಮೊದಲಿಲ್ಲ

ಜಾಮದ ಹೊತ್ತಲ್ಲಿ ಸಾರಿದ ಸದ್ದ ಕೇಳಿ
ಸ್ವಾಲಿಗರು ಆತುರ್ಸಿ ಓಡಿ ಬರುತಾರ

ಆತಭೂತ ಪ್ರೇತಗಳು ಇರುವಾದು ನನ್ನತ್ರದಲ್ಲಿ
ಜಾಮದ ಹೊತ್ತಲಿ ಬರಬ್ಯಾಡಿ ಸ್ವಾಲಿಗರ
ಜಾಮದ ಹೊತ್ತಲಿ ಬಂದರ ಸ್ವಾಲಿಗರ

ನಿಮ್ಗ ಭೂತಾದ ರಾವಳಿ ಬುಡದಲ್ಲ
ನೀವು ಹಿಂದಕ ತಿರುಗಿ ಹೋಗಿರಯ್ಯ
ಯಾವ ಕಷ್ಟವಿದ್ದರೂ ಬೆಳಗಲ್ಲಿ ಹೇಳುವೆ

ಸಿರಹರಿ ಆಡಿದ ಮಾತ ಕೇಳಿದರು ಸ್ವಾಲಿಗರು
ಅವ್ರು ಅಂಜಿಕೆಂಡು ಹಿಂದಕ ಓಡುತಾರ

ಸ್ವಾಮಿ ಮಾಯವಾಗಿ ಬಂದು ವೈಕುಂಠದಲ್ಲಿ
ಸುಖನಿದ್ರ ಮಾಡುತಾರ

ಬೆಳ್ಳಿಮೂಡಿತು ಬೆಳಗಾಗಿ ಬಂದಿತು
ನಾರಾಯಣನಿಗ ಎಚ್ಚರ ಮೊದಲಿಲ್ಲ

ಕಾಡುಕೋಳಿ ಕೂಗಿದೊ ಲೋಕವೆಲ್ಲ ಬೆಳಗಾದೊ
ಎದ್ರಿ ಸ್ವಾಮಿ ಮಂಚ್ದಬುಟ್ಟು ಅನ್ನಾಗ
ಮೈಮುರಿದು ಎದ್ದಾರೊ ಅಂಗೈಯ ತೀಡಿ ನೋಡಿರೊ

ಚಿನ್ನದ ಕಿಂಡಿಲಿ ಪನ್ನಿರ ತುಂಬಿ
ಮೊಕ ಮಜ್ಜನ ಮಾಡಿ ಊಟ ಭೋಜಕ ತೆರಳೀರೊ
ಸ್ವಾಮಿ ಊಟ ಭೋಜನ ಮಾಡಾಗ ವೈಕುಂಠದಲ್ಲಿ

ಅಲ್ಲಿ ಸ್ವಾಲಿಗರಿಗ ಅನುಮಾನ ಬತ್ತಾದ
ಎಲ್ಲಿಯವನ ಕಾಣಿ ಒಬ್ಬ ಎಡ್ಡ ಬುಡುಕಿಯುವ ಬಂದು
ಸ್ವಾಲಿಗರ ಪ್ರೋಡಿಗ ಶೂನ್ಯ ಕಟ್ಟನಲ್ಲ

ಬಿಟ್ಟಕ ಮಳ ಊದ್ರು ಘಟ್ಟಕ ಮಳ ಊದ್ರು
ನಮ್ಮ ಸ್ವಾಲಿಗರ ಪ್ರೋಡಿಗ ಮಳ ಬೆಳ ಮೊದಲಿಲ್ವಂತ

ನೀವು ಎದ್ರಯ್ಯ ಮೊದಲು ಕೊಂಗಗೌಡಗಳ್ಳ
ನೀವು ಸ್ವಾಮರಸನ ಕೆರಗ ಹೋಗಿ ತಾವರ ಗೆಣಸ ಕೀಳಬೇಕು
ತಾವರ ಗೆಣಸ ಕಿತ್ತು ತೊಂಬಿಗ ತುಂಬುಕೊಂಡರ
ಆರು ತಿಂಗಳ ಜೀವನ ಆಯ್ತಾದ

ದೊಡ್ಡ ಕೊಂಡ ನೀ ಬಾರೊ ಚಿಕ್ಕಕೊಂಡ ನೀ ಬಾರೊ
ಗುಜ್ಜುಮೊರದಕೊಂಡ ಬಲುಕೊಂಡ ನನ ಕಂದಯ್ಯ
ಹೋಗಿ ಬನ್ನಿರಯ್ಯ ಗೆಣಸೀಗ

ದೊಡ್ಡಕಾಡಿ ನೀ ಬಾರೆ ಚಿಕ್ಕ ಕಾಡಿ ನೀ ಬಾರೆ
ಗುಜ್ಜು ಮೊರದ ಕಾಡಿ ಬಲು ಕಾಡಿ ನನ ಕಂದಮ್ಮ
ಹೋಗಿ ಬನ್ನವ್ವ ಗೆಣಸೀಗ

ಅರ್ಕಾಹಿಟ್ಟು ಅಣ್ಣ ಸೊಪ್ಪಿನ ಗೊಜ್ಜು
ತರಗೆಲ ಗೋಟಡಕ ತಕ್ಕಂಡು ಬೊಮ್ಮಗೌಡನ ಹೆಂಡತಿ

ಏಳುಮಂದಿ ಗಂಡುಮಕ್ಕ ಆರುಮಂದಿ ಹೆಣ್ಣು ಮಕ್ಕಳಿಗ
ಬುತ್ತಿಯ ಕಟ್ಟೈತಾಳ

ಕಕ್ಕಣಿ ಕುಕ್ಕಣಿ ಕತ್ತುತುಂಬ ಕಾಡಿಕ್ಕ
ಚಿಣ್ಣಳ್ಳಿನ ಎಣ್ಣ ತಲತುಂಬ ಹಾಕಂಡು
ಹುಚ್ಚಳ್ಳುವ ಮುಂಡವ್ಯಾಲ ಮುಡಕಂಡು

ಬಂಡಿ ಎರೆಯು ಅಡ್ಡಗಪ್ಪ ಇಕ್ಕಂಡು
ನ್ಯಾಲಿಗ ಸ್ವಾಲ ಒಡೆದುಟ್ಟುಕಂಡು
ಕಾಡಿರು ಸಂಭ್ರಮದಿಂದ ಕಡೆದಾರೊ

ಉದುರು ಬಟ್ಟ ಉಟ್ಕಂಡು ಉಳುಗನ ಕಂಬಳಿ ಹಾಕಂಡು
ನಾಮದ ಬಟ್ಟ ಹಣಗಿ ಕಂಡು ಸ್ವಾಲಿಗರು
ಸಂಭ್ರಮದಿಂದ ಕಡೆದಾರೊ

ಸಂಭ್ರಮದಿಂದ ಕಡಿಯಾಗ ಸ್ವಾಲಿಗರು
ಪಟ್ಟ ಮಂಚದ ಮ್ಯಾಲ ಮಲಗಿರುವ ಕುಸುಮಾಲ
ತಟ್ಟಾನ ಎದ್ದು ಅಳುತಾಳ

ಅಕ್ಕಮ್ಮನವ್ರು ಗೆಣಸಿಗ ಹೋಯ್ತಾರ ನಾನು ಹೋಯ್ತಿನಿ ಎಂದು
ಮೊರದು ಎದ್ದಾಳೊ ಕುಸುಮಾಲ
ಬೊಮ್ಮಗೌಡನ ಹೆಂಡತಿ ಸಮ್ಮಿಸಿ ಕರದಾಳೊ

ಹಾಲು ಅನ್ನ ಉಣ್ಣಮ್ಮ ಸಾಲು ನಾಣ್ಯ ಹೊದಿಯಮ್ಮ
ಸಾಲು ಮಂಚದ ಮ್ಯಾಲ ಒರುಗಮ್ಮ ಕುಸುಮಾಲ
ಕಾಡು ಸ್ವಾಲಿಗರ ಸಿಂತ ನಿನಗ್ಯಾಕ

ತುಪ್ಪ ಅನ್ನ ಉಣ್ಣಮ್ಮ ಒಪ್ಪಿದ ಇಳ್ಯಾಸಲಿಸಮ್ಮ
ಪಟ್ಟ ಮಂಚದ ಮ್ಯಾಲ ಒರುಗಮ್ಮ
ಬೆಟ್ಟದ ಸ್ವಾಲಿಗರ ಸಿಂತ ನಿನಗ್ಯಾಕ

ತಾಯಮ್ಮ ಆಡಿದ ಮಾತ ಕೇಳಿದಳು ಕುಸುಮಾಲ
ಕಂದು ಹೋಗಿತು ನೆಗಮೊಕ

ಅಕ್ಕನಮ್ಮನವರೊಂದಿಗ ಕಳುಗಿದರ ಕಳುಗಮ್ಮ ಕಳುಗದಿದ್ದರ
ನನ್ನ ಹನ್ನೆರಡು ಮಾರು ಎಳಮಂಡ ನುಲಕೊಂಡು
ನಿನ ಮುಂದ ಪ್ರಾಣವ ಬಿಡುತೀನಿ

ಏಳುಮಂದಿ ಗಂಡುಮಕ್ಕಳಿಗೆ ಹೇಳಬೋದು ಬುದ್ಧಿಯು
ಆರು ಮಂದಿ ಹೆಣ್ಣು ಮಕ್ಕಳಿಗ ಹೇಳಬೋದು ಬುದ್ಧಿಯು
ಎಳೆಯವಳಿಗ ನಾನು ಹೇಳನಾರಿ ಶಿವನೆ

ಅಡವಿ ಅರಣ್ಯನೆಲ್ಲ ತಿರುಗುತಾರಲ್ಲ ಸ್ವಾಲಿಗರು
ನೀ ಯಾವ ಕಾಡನ್ನೆ ತಿರುಗಿಯೆ ನನ ಕಂದ
ಕಾಡಾನಿಗ ಸಿಕ್ಕಿಯೆ ಹುಲಿಯು ಬಾಯಿಗ ಸಿಕ್ಕಿಯೆ
ನೀ ಹೋಗಬ್ಯಾಡ ಕಾಣೊ ಕಂದಮ್ಮ

ಕಾಡಾನಿಗ ಸಿಕ್ಕಿ ಹುಲಿಯು ಸಿಕ್ಕಿ
ಅಡವೀಲಿ ಪ್ರಾಣ ಬುಟ್ಟಾರು ಸರಿಯೆ ತಾಯಮ್ಮ
ನಾ ಅಕ್ಕಂದಿರೊಂದಿಗ ಹೋಯತೀನಿ

ಎಳೆಯ ಕುಸುಮಾಲ ಹೇಳಿದರೂ ಕೇಳನಿಲ್ಲ ಎಂದು
ಅವ ಮಿಾದು ಮಡಿಯ ಉಟ್ಟು
ಹಾಲಲ್ಲಿ ಅಕ್ಕಿಯು ಬೇಯಿಸುತಾಳ
ಹಾಲು ಕೆನೆಯ ಹಾಸಿದ ಮೊಸರು ಕೆನೆಯ ಹೊದಿಸೀದ

ಸಲಸುಂಡಹಣ್ಣು ಅಮಟಕಾಯಿನ ಗೊಜ್ಜು
ಅದುವ ಮಾಡಿ ಮಗಳಿಗ ಬುತ್ತಿಯು ಕಟ್ಟುತಾಳ

ಮಲ್ಲೀಗ ಎಣ್ಣ ಮೈತುಂಬ ಹರಡಿ
ಗಂಧದ ಎಣ್ಣ ತಲತುಂಬ ಅಚ್ಚಿ
ಅವಳ ಮಂಡಾಯ ಬಾಚಿ ಮೈಸವರಿ

ಬಾಚಿ ಬೈತಲ ತಗದು ಕೀಚಿ ಎಣಗಂಟೂಡಿ
ಮೊಗ್ಗ ಮಂಡೀಗ ಮುಡಿಸಿ
ಚೆಂಡಕ ನೀಲಿಯ ನಾಮವ ಬರದಾಳೊ

ನೀಲ ನಾಮದ ಮುಂದ ನಿಚ್ಚಳದ ಬಟ್ಟನಿಕ್ಕಿ
ಮಡಿಯ ಸೀರಯ ಉಡುಸೀದ

ನೀಲಿ ಹರಳಿನ ಸರವ ಕತ್ತಿಗ ಹಾಕಿ
ಮಗಳ ಕೈಯಲ್ಲಿ ಹಿಡಕೊಂಡು ಬರುತಾಳ

ದೊಡ್ಡಕೊಂಡ ನೀವು ನಿಲ್ಲಿರಯ್ಯ
ದೊಡ್ಡ ಕೊಂಡ ಚಿಕ್ಕಕೊಂಡ ಮರುಕೊಂಡ
ಗುಜ್ಜು ಮೊರದ ಕೊಂಡ ಬಲುಕೊಂಡ ನನಕಂದ
ನನ್ನ ಭಾಗ್ಯದ ಸ್ಯಾಲ ಜೋಕ
ದೊಡ್ಡ ಕಾಡಿ ಚಿಕ್ಕಕಾಡಿ ಮರುಕಾಡಿ
ಗುಜ್ಜುಮೊರದ ಕಾಡಿ ಬಲುಕಾಡಿ ನನ್ನ ಕಂದ
ನನ್ನ ಭಾಗ್ಯದ ಸ್ಯಾಲ ಜೋಕ

ಹಿಂದಿಂದ ಆರುಮಂದಿ ಮುಂದ್ಮುಂದ ಏಳುಮಂದಿ
ಮಧ್ಯ ನಿಲುಸುತಾಳ ಕುಸುಮವಾಲ್ಯ
ಸ್ವಾಲಿಗರಿಗ ಬುದ್ಧಿಯ ಹೇಳುತಾಳ
ಕಂಡೀಗ ಸ್ವಾಕ ಪಡುತಾಳ

ಕಾಡಡವಿಗೆ ಕಳುಗಿಸಿ ಕಿರಿಯವಳ
ಬಂದಾಳೊ ಕಾಣಿ ಬರೋದಿಲ್ಲವೋ ಕಾಣಿ ಅನುತೇಳಿ
ಸಟ್ಟ ಮಂಚದ ಮ್ಯಾಲ ಒರುಗವಳ
ಸಡುದಾರಿ ಒಳಗ ಬೇಲಿಯ ಮರೆಯಲ್ಲಿ
ಕಾದು ಕೂತಿರುವ ನಾರಾಯಣ
ಸಂಭ್ರಮದಿಂದ ಬರುವ ಕಾಡಿರ ಕಂಡು

ನನ್ನ ಗುರುತನ್ನೆ ಕಂಡು ಹಿಡಕಂಡ್ರ
ಇವ್ರು ಹಿಂದಕ ಬೆದರಿ ಹೋಯ್ತಾರಲ್ಲ ಎಂದು
ಒಂದು ಹಳ್ಳದ ಕೆರೆವಳಗ ಅಂಗಮಂಗನಾಗ ಮಲಗವನ
ನ್ಯೆಮ್ಯಾಲ ಆಲದ ತರಗ ತಳ್ಳಿಕೊಂಡು
ಬೊಳ್ಳಬೊಳ್ಳಗ ಕಣ್ಣ ಬಡುತಾನ
ಹೆಣ್ಣುಗಳ ಸಲುವಾಗಿ ಅವತಾರ ತಾಳಿಕೊಂಡು ಮಲಗನಲ್ಲ ಎಂದು
ವಾಸುದೇವ ಸುಂಟಗಾಳಿಯಾಗಿ ಓಡಿಬಂದು
ಆಲದ ತರಗನ್ನೆಲ್ಲ ಗೋರ್‍ಕಂಡ

ಬರ್ಬರ್‍ದೆ ಮಲಗಿರುವ ಜಗದೊಡೆಯ
ಕಾಡಿರುಗೂ ಮುಂದಾಗಿ ಓಡುಹೋಗಿ

ತಾರಮರದ ಮ್ಯಾಲ ಕೂತುಕಂಡು
ಬರುವ ಹೆಣ್ಣಾಗೋಳ ಲೆಕ್ಕ ಮಾಡುತಾರ

ಹಿಂದಿನಿಂದ ಆರುಮಂದಿ ಮುಂದ್ಮುಂದ ಏಳುಮಂದಿ
ಮಧ್ಯ ಬರುವ ಇವಳ್ಯಾರು ಕಾಣ್ಯಾಲ್ಲ
ಸಿಕ್ಕಿದರ ಶಿವನ ದಯದಿಂದ ಈ ಹೆಣ್ಣ ಸಿಪ್ಪಾಯ ಕಿಳುವೇನು

ಮೂಡಲಲ್ಲಿರುವ ಮುದ್ದುಮಾದಯ್ಯ
ಆ ಹೆಣ್ಣಾ ನನ್ನ ಕೈವಾಸವಾದರ
ನಿನಗ ದಂಡುಳ್ಳ ಸ್ಯಾವ ಮಾಡುತೀನಿ
ಹರಕಾಯ ಮಾಡಿರೊ ಕೈಯೆತ್ತಿ ಮುಗಿದಾರೊ

ನಂಜಲಗೂಡಲಿರುವ ನಂಜುಂಡು
ಮಧ್ಯದಲ್ಲಿ ಹೋಗ ಹೆಣ್ಣಾ ನನ್ನ ಕೈವಾಸ ಆದರ
ನಿನಗ ಮಗ್ಗುಲ ಸ್ಯಾವ ಮಾಡುತೀನಿ
ಹರಕಾಯ ಮಾಡಿರೊ ಕೈಯೆತ್ತಿ ಮುಗಿದಾರೊ

ಎರಡು ಹರಕಾಯ ಮಾಡಬುಟ್ಟು ನಾರಾಯಣ
ಕಾಡಿರ್ಗೂ ಮುಂದಾಗಿ ಓಡಿ ಹೋಗಿ
ಸ್ವಾಮರಸನ ಕೆರೆಯ ದೊಡ್ಡ ಸಂಪಿಗ ಮರವನ್ನೇರಿ
ಬಗ್ಗಿ ಬಗ್ಗಿ ನೋಡುತಾರ

ಕಾಡಿರು ಸಂಭ್ರಮದಿಂದ ಬರುತ್ತಾ
ಸ್ವಾಮರಸನ ಕೆರೆಯ ಕಂಡರಾಗ
ಸ್ವಾಮರಸನ ಕೆರೆಯ ಕಂಡು ಸ್ವಾಲಿಗರೆಲ್ಲ
ಕಟ್ಟಿದ್ದ ಬುತ್ತಿಯ ಮಡುಗವರ ಕೆರಮ್ಯಾಲ

ಕತ್ತುದ್ದ ಕಾಚುರಕ ಉತ್ರಾಣಿ ಒಡಲುದ್ದ
ಉಟ್ಟಿರುವ ಸೀರ ಎದುದ್ದ ಎತ್ತಿಕಂಡು
ಕಾಡಿರು ಗೆಣಸಕೀಳುತಾರ

ಉಟ್ಟಿಡಿದು ಗೆಣಸನ ಕಿತ್ತುಕೊಂಡು ಕಾಡಿರು
ಒಂದು ಬಳ್ಳಾಯ ಅಂಬ ಎಳಕಂಡು
ಏಳು ಕಟ್ಟಿನ ಹೊರೆಯ ಕಟ್ಟುತಾರ

ಪಟ್ಟೆ ಪಾಡ ಕಟ್ಟುಕೊಂಡು ಕಂಕಳದೊಣ್ಣೆ ಕೈಯಲ್ಲಿಡಿದು
ಉಟ್ಟಿಡಿದು ಗೆಣಸ ಕಿತ್ಕಂಡು ಸ್ವಾಲಿಗರು
ಬಳ್ಳಾಯು ಅಂಬ ಎಳಕಂಡು
ಎಳುಕಟ್ಟಿನ ಹೊರೆಯು ಕಟ್ಟುತಾರ

ಮೊಕಮಜ್ಜನ ಮಾಡಿಕಂಡು ಸ್ವಾಲಿಗರು
ಏರಿಯು ವ್ಯಾಕ ಬಂದಾರು
ಕಟ್ಟಿದ್ದ ಬುತ್ತಿಯು ಬಿಚ್ಚಾಗ ಸ್ವಾಲಿಗರು
ಸ್ವಾಮಿ ಬಗ್ಗಿ ಬಗ್ಗಿ ನೋಡುತಾರ

ಇವರ್ಗ ಅಡಕಯಿಂದ ಜಗಳ ಬರಲಿ
ಎಲಯಿಂದ ಜಗಳ ಬರಲಿ
ಉಣ್ಣುವ ಅನ್ನದಿಂದ ಜಗಳ ಬರಲೆಂದು
ದೂಳುತುವ ಎಸೆದಾರು

ಎಳೆಯುವ ಕಡೆಯಲ್ಲಿ ಬುತ್ತಿಬಿಚ್ಚಾಗ
ಸ್ವಾಲಿಗರೆಲ್ಲ ಬಗ್ಗಿ ನೋಡುತಾರ

ಹಾಲು ಅನ್ನದ ಬುತ್ತಿ ಯೋಜನಕ ಗಮನ ಎಸೆದಾವು
ಮೊಸರು ಅನ್ನದ ಬುತ್ತಿ ಗಾವುದಕ ಗಮನ ಎಸೆದಾವು

ಅರ್ಕಾದಹಿಟ್ಟು ಅಣ್ಣುಸೊಪ್ಪಿನ ಗೊಜ್ಜು
ಗೋಟಡಕ ತರಗೆಲ ಉಡುಸುಣ್ಣ ಮಗ್ಗ
ಇದೇನು ಮಾಯ ನಿನಗ ತಂಗಮ್ಮ

ಮೊಸರು ಅನ್ನದ ಬುತ್ತಿಯು ಕಣ್ಣಾರ ಕಂಡರ
ದೂರಕ ಗಮನ ಎಸೆದಾವು
ಯಾರಮ್ಮ ನಿನಗ ಕಟ್ಟಿದವರು

ಅಕ್ರಿಉಳ್ಳಮಗ ಎಂದು ಅತುರಸವ ಅದುಮಾಡಳ ಅಮ್ಮಯ್ಯ
ನಾನು ತಂದ ಪುಣ್ಯ ನನಗೆಂದು
ನೀವು ತಂದ ಪುಣ್ಯ ನಿಮಗೆಂದಾಗ
ದೊಡ್ಡಕಾಡಿಗ ಅತಿತ್ತು ಕ್ವಾಪ ಮುಗುಲುದ್ದ

ಕಾಡಿರೆಲ್ಲ ಹಿಡಿಯುವ್ಮ್ರ ಇವಳ ಮುಂದಲಯ
ಮುಂದಲಗ ಕೈಯೆನ್ನ ನೀಡಾಗ
ಕೆಂದೂಳು ಕವಿದು ಮುಗಲೇರಿ
ಕುಟುಕು ಮಳೆಯು ಸದ್ದಲ್ಲಿ ಮಾಯುವಾದಳು ಕುಸುಮಾಲ

ಗೆಣಸಿನ ಹೊರೆಯು ಎತ್ತಿಕಂಡು ಸ್ವಾಲಿಗರು
ಪ್ರೋಡಿಗ ಆಗ ಬರುತಾರ

ಬರುವ ಸ್ವಾಲಿಗರ ನೋಡಿತ ಬೊಮ್ಮಗೌಡನ ಹೆಂಡತಿ
ಕಾದು ಕೂತಾಳ ದಾರೀಲಿ

ಏಳೀಳು ಹದಿನಾಲ್ಕು ಮಂದಿ ನೀವ್ಹೋಗಿ ಮಕ್ಕಳ್ರೀ
ಎಲ್ಲಿ ಮರತಿರಿ ನನ್ನ ಭಾಗ್ಯದ ಸ್ವಾಲ್ಯ

ಹದಿನಾಲ್ಕು ಮಂದಿಯು ಲೆಕ್ಕ ಮಾಡಿದರ
ಎಳೆಯುವಳ ಸಬ್ದ ಮೊದಲಿಲ್ಲ

ಕಕ್ಕಾಯು ಬಳ್ಳಿಯು ಹಿಡಕಂದು
ಒಬ್ಬೊಬ್ಬರಾಗ ಒದುಗುತಾಳ

ನನ್ನ ಭಾಗ್ಯದ ಸ್ವಾಲ್ಯ ಮರತು ಬಂದ್ರ್ಯಲ್ಲ
ನನ್ನ ಮನಗ ಕೇಡು ಬಂದಿತಲ್ಲ
ನನ್ನ ಕುಸುಮಾಲ ಹುಟ್ಟಿದ ಗಳಗಲಿ
ನನ್ನ ಮನಗ ಭಾಗ್ಯ ಬೊಗಬೊಗನ ಬಂತಲ್ಲ

ಮರತು ಬಂದಿರುವ ಮಗಳ ಕರತಂದ್ರ ಸರಿಯಾಯ್ತು
ನಿಮ್ಗ ಕಕ್ಕಬಳ್ಳಿಲಿ ಏಟ ಹೊಡಿತೀನೆಂದು

ಒಬ್ಬೊಬ್ಬರಾಗ ಒದುಗುತಾಳ
ಒಬ್ಬೊಬ್ಬರಾಗ ಒದುಗುವ್ರ ಸ್ವಾಲಿಗರು
ಆ ಕೋಟೆಗೊಬ್ಬರ ಈ ಕೋಟೆಗೊಬ್ಬರು ಅವ್ತೀಕಂಡ್ರು

ಬೊಮ್ಮಗೌಡನ ಹೆಂಡತಿ ಸ್ವಾಕವ ಮಾಡುತ
ಮಂಚದ ಮ್ಯಾಲ ಒರುಗವಳ

ಏರಿಯ ಮ್ಯಾಲ ಕುಸುಮಾಲ ಒಬ್ಬಾಳೆ ನಿಂತುಕೊಂಡು
ಸೂರ್ಯನಿಗ ಕರವ ನಮಿಸೀಳೊ

ಹೆಣ್ಣೇಳು ಮಂದಿ ಗಂಡೇಳು ಮಂದಿ
ಹದಿನಾಲ್ಕು ಮಂದಿ ಬಂದೆವಲ್ಲ ಈ ಸ್ವಾರಸನ ಕೆರೆಗ

ಅಕ್ಕಯ್ಯನವರ ಸಬುತ ಇಲ್ಲವಲ್ಲ
ನಮ್ಮ ಅಣ್ಣಯ್ಯನವರು ಯಾವ ದಿಕ್ಕ ಹತ್ತಿದರೊ ಎಂದು
ಅವರ ಹಜ್ಜಾಯ ನೋಡಿ ಅಳುತಾಳ

ಬಂದ ಮಾರ್ಗವು ಸಿಕ್ಕದು ಹೋಗ ಮಾರ್ಗವು ಸಿಕ್ಕದು
ಇವ್ರು ಯಾವ ಬೆಟ್ಟವ ಹತ್ತಿ ಹೋದರಲ್ಲ
ಏನು ಮಾಡಲಿ ಜಗದೊಡೆಯ

ನಮ್ಮ ತಾಯಮ್ಮನೊಂದಿಗ ಗೆಣಸ ತರುತ್ತೀನೆಂದು ಹೇಳಿ ಬಂದೆನಲ್ಲ
ನಾ ಗೆಣಸ ಕಿತ್ತುಕೊಂಡು ವ್ಹಾದರ ಸರಿಯಾಯ್ತು
ವ್ಹಾಗದಿದ್ದರ ನಮ್ಮ ತಾಯಮ್ಮ ಘುರಾಣೆಗ ಸೇರ್ಸದಿಲ್ಲ ಎಂದು
ಸ್ವಾಕ ಮಾಡಿದಳೊ ಧರೆಯಲ್ಲಿ

ಕೈ ಎತ್ತಿ ನಮಿಸುತ್ತ ನಿಂದಾಳು ಧರಮ್ಯಾಲ
ಎಡ ಬಲಕ ನೋಡಿದರ ನರಮಾನರ ಸದ್ದುವೊದಲಿಲ್ಲ ಎಂದು
ಕೈಯೆತ್ತಿ ಬೆಟ್ಟಕ ಮುಗಿದಾಳೊ

ಕತ್ತಿದ್ದ ಕಾಚುರುಕ ಉತ್ರಾಣಿ ಒಡುದ್ದ
ಉಟ್ಟಿರುವ ಸೀರ ಎದುದ್ದ ಎತ್ತಿಕಂಡು
ಉಟ್ಟಿಡಿದು ಗೆಣಸ ಕಿತ್ತಲಾಗ
ಉಟ್ಟಿಡಿದು ಗೆಣಸ ಕಿತ್ಕಂಡು
ಬಳ್ಳಾಯ ಅಂಬು ಎಳಕಂಡು
ಏಳು ಕಟ್ಟಿದ ಹೊರೆಯ ಕಟ್ಕ್ಯತಾಳ

ಕಟ್ಟಿದ ಬುತ್ತಿಯ ಮರದಡಿಲಿ ಮರತೀನಿ
ನಾ ಊಟ ಭೋಜುನವ ಮಾಡಬೇಕು ಅನುತ್ಲೀಳಿ
ಅವ ಬುತ್ತಿಯ ದಂಡಕ ಬರುತಾಳ

ಅಲ್ಲಿ ಕಟ್ಟೆ ಮಡುಗಿತ್ತು ಬುತ್ತಿ
ಕಟ್ಟೆ ಮಡಗಿರುವ ಬುತ್ತಿಯ ಕೈಯೊಳಗ ಹಿಡಕಂಡು
ಕೈಯನ್ನು ತೊಳದು ಬಂದು ಕುಂತಾಳೊ ಕುಸುಮಾಲ

ಅದ ಬಿಚ್ಚಿ ನೋಡಿದರ
ದೂರಕ ಗವುನ ಎಸದಾವು
ದೂರಕ ಗವುನ ಎಸೆದ ಬುತ್ತಿಯು ನೋಡಿ
ಎತ್ತಿ ಸಲ್ಲಿಸಿದಳು ಹೃದಯಕ್ಕ ಕುಸುಮಾಲ

ಕೈಯನ್ನೆ ತೊಳೆದಳು ನೀರನ್ನೆ ಕುಡಿದಳು
ಹೊರೆಯು ದಂಡಕ ಬಂದಳು ಕುಸುಮಾಲ
ಅವ ಅತ್ತಿಂದ ಇತ್ತಾಗ ಉಳ್ಳುಸುತಾಳೆ
ಪರ್ವತದಾಗ ಬೆಳದದಲ್ಲ ಈ ಹೊರ
ನನ್ನ ನತ್ತಿಗ ಎದ್ರುದಲ್ಲ

ನತ್ತಿಯು ನ್ಯಾಲಕ ಇದು ಬರುವದು ಯಾಗೆಂದು
ಯೋಚನ ಮಾಡಿದಳು ಕುಸುಮಾಲ

ಹೊರೆಯು ಮುಂದ ಕೂತುಕೊಂಡು ಕುಸುಮಾಲ
ನಾಲ್ಕು ದಿಕ್ಕ ನೋಡುತಾಳ
ನಾಲ್ಕು ದಿಕ್ಕನ್ನೆ ದಿಟ್ಟಿಸಿ ನೋಡಿದರ
ನರಮಾನರ ಸಬುತ ನೊದಲಿಲ್ಲ । ಅನುಶೀಲಿ
ಅವ ಯೋಜನಕ ದುಷ್ಟಿಯು ಮಡಗಿದ

ಯೋಜನಕ ದೃಷ್ಟಿಯು ಮಡುಗಿದರ ಕುಸುಮಾಲ
ಅಲ್ಲಿ ಕಾದು ಮನಗವನ ಜಗದೊಡೆಯು

ಎಪ್ಪತ್ತು ವರುಷದ ಮುಪ್ಪಿನ ಮುದುಕನಾಗ
ಬಿಂಕಿಯು ಮುಕುಟಾಯು ಹಾಕೊಂಡು ನಾರಾಯಣ
ಬಿಂಕಿಯು ಕಾದು ಬಿಂಕಿಯು ಬೆಳಕಲಿ ಮಲಗವನ

ಕುದ್ರು ಕಣ್ಣಿನ ಗಾತ್ರ ಬಿದುರು ಮೊಳೆಯು ಗಾತ್ರ
ಬಿಂಕಿಯು ಬೆಳಕ ಕಂಡು ಕುಸುಮಾಲ
ಬೊಳ್ಳಿಗ ಒಂದು ಹಜ್ಜಲಿ ಹೋಗಿ
ಬಗ್ಗಿ ನೋಡಿದಳು ಮುದುಕಯ್ಯನ

ಅವನ ಮೊಕದ ಅಂಗಾವೇ ಸಿಕ್ಕದು
ಇವ ಎಲ್ಲಿಯುವನ ಕಾಣೆ ತಿಳಿಯಾದು

ಸಾರಿ ಕೂಗಿದರು ಕುಸುಮಾಲ
ಈ ಮುದುಕಯ್ಯನಿಗ ಮಾಯಾದ ನಿದ್ದ ಕವಿದದ

ಅಡವಿ ಅರಣ್ಯದಲ್ಲಿ ಮಲಗಿರುವ ನೀವ್ಯಾರ ಸ್ವಾಮಿ
ಹೆಸರೇಳಿ ಅಂದರ
ಮಾತಾಡದೆ ಸ್ವಾಮಿ ಮಲಗವರ
ಮಾತಾಡದೆ ಸ್ವಾಮಿ ಮಲಗಿರವ ನಾರಾಯಣನ

ಬಗ್ಗಿ ಕುಸುಮಾಲ ನೋಡುತಾಳ
ಬಗ್ಗಿ ಕುಸುಮಾಲ ನೋಡಿದ್ರು ದಾಸಯ್ಯನ
ಅವ ಎಡದಿಂದ ಬಲಕ ಉರುಳಿದ

ಎಡದಿಂದ ಬಲಕ ಉರುಳುದ್ರು ದಾಸಯ್ಯ
ಅವನ ಹಣೆಯಲ್ಲಿ ಕಂಡಳು ಏರನಾಮುವ
ಕೂಗಿದಳು ದಾಸಯ್ಯ ಎಂದು ಕುಸುಮಾಲ

ದಾಸಯ್ಯನವರ್ಯ ಎದ್ರ್ಯಪ್ಪ ಎಂದೇಳಿ ಎಂದು ಸಾರಿ ಕೂಗಾಳ
ಸಾರಿ ಕೂಗಿದ ಸದ್ದ ಕೇಳಕಂಡು ನಾರಾಯಣ
ಬೊಳ್ಳೀಗ ಕಣ್ಣ ಬಿಡುತಾನ

ನನ್ನ ಕರೆಯು ನೀನ್ಯಾರ ಹೆಣ್ಣ
ಕಣ್ಣು ಕಾಣದು ಕಿವಿ ಎರಡು ಕೇಳದು
ನೀನ್ಯಾರ ಹೆಸರೇಳು ಅಂದರ
ಏನಂದಳಾಗ ಕುಸುಮಾಲ

ನಾ ಪುರಾಣಿ ಬೊಮ್ಮಗೌಡನ ಮಗ
ನೀ ಪುರಾಣಿ ಬೊಮ್ಮಗೌಡನ ಮಗಳಾದರ
ನೀ ಇಲ್ಲಿಗ ಬಂದ ಕಿರಯಾಗ್ಯ

ಸ್ವಾಮಿ ನನ್ನೊಂದಿಗ ಹುಟ್ಟಿದವರು
ಗಂಡ್ಳೀಳು ಮಂದಿ ಹೆಣ್ಣೀಳು ಮಂದಿ
ದೊಡ್ಡಕೊಂಡ, ಚಿಕ್ಕೊಂಡು, ಗುಜ್ಜಮೊರದಕೊಂಡ, ಬಲುಕೊಂಡ

ಎಂಬವರು ನನ್ನೊಂದಿಗ ಹುಟ್ಟಿದ ಅಣ್ಣಯ್ಯನವ್ರು
ದೊಡ್ಡಕಾಡಿ, ಚಿಕ್ಕಾಡಿ, ಗುಜ್ಜುಮೊರದ ಕಾಡಿ, ಬಲುಕಾಡಿ
ಎಂಬೋರು ನನ್ನೊಂದಿಗ ಹುಟ್ಟಿದ ಅಕ್ಕಯ್ಯನವ್ರು ದಾಸಯ್ಯ

ನಾವು ಏಳೇಳು ಹದಿನಾಲ್ಕು ಮಂದಿ
ತಾವರಗೆಣಸಿಗ ಬಂದೆವು ದಾಸಯ್ಯ
ತಾವರಗೆಣಸ ಕಿತ್ಕಂಡು ನನ್ನ ಬಿಟ್ಹೋಗರ ದಾಸಯ್ಯ

ತಾವರ ಗೆಣಸಿನ ಸುದ್ದಿಯ ಕೇಳಿ ದಾಸಯ್ಯ
ಯಾವ ಕೆರೆಯಲ್ಲಿ ಕಿತ್ತರ್ಹೆಣ್ಣೆ
ನಾವು ಯಾವ ಕೆರೆಯಲ್ಲಿ ಕಿತ್ತೇವೆಂದರೆ
ನಾವು ಸ್ವಾಮರಸನ ಕೆರೆಯಲಿ ಕಿತ್ತೇವು

ಸ್ವಾಮರಸನ ಕೆರೆಯಲ್ಲಿ ಕಿತ್ತಿದ ಕಂಡ್ರು
ಸುಂಕದವರು ಬುಡನಿಲ್ಲ
ಸುಂಕದವರ ಕಾವಲು ಬಲು ಕಾವಲಲ್ಲ ಹೆಣ್ಣೆ
ನೀವು ಯಾಗ ಕಿತ್ತರಿ ಹೆಣ್ಣೊ
ಸುಂಕದವರ ಕಾವಲ ನೀವು ತಪ್ಪಿಸಿಬುಟ್ಟು ಕಿಳಬೋದ

ಆಗಂದ ಮಾತ ಕೇಳಿದ ಕುಸುಮಾಲ
ಕಾವಲಿನವರು ನಮುಗ ಸಿಕ್ಕನಿಲ್ಲ
ಅವ್ರು ಕಿತ್ಕಂಡು ಗೆಣಸ
ನನ್ನ ತಪ್ಪಿಸೆ ಬುಟ್ಟು ಕಡದೋದ್ರು

ನಮ್ಮ ತಾಯಿ ನನ್ನ ಹೊಡೆದಾಳು ಅನುತ್ಲೇಳಿ
ಗೆಣಸನ್ನೇ ಕಿತ್ತು ಹೊರೆಯನ್ನೆ ಕಟ್ಟೆ ಮಡಗೀನಿ
ನಿಮ್ಮ ದಮ್ಮಯ್ಯ ಸ್ವಾಮಿ ದಯಮಾಡಿ
ನನಗ ಗೆಣಸಿನ ಹೊರೆಯ ಎತ್ತಿರಯ್ಯ

ಕುಸುಮಾಲ ಆಡಿದ ಮಾತ ಹೇಳಿದ್ರು ನಾರಾಯಣ
ನೀನು ನೋಡಿದ್ರ ಹರೆಯದ ಹೆಣ್ಣಲ್ಲ
ನಾನು ನೋಡಿದ್ರ ಮುಪ್ಪಿನ ಮುದುಕಯ್ಯನಲ್ಲ

ಎದ್ದರ ಏಳನಾರಿ ಕೂತರ ಕೂರನಾರಿ
ನಾನು ಎದ್ದು ಬಂದು ಹೊರೆಯ ಎತ್ತಾದು ನಿಜವ
ನನ್ನಿಂದ ಅದು ಆಗದಲ್ಲ ಹೆಣ್ಣೆ
ನಾ ಒರನಾರಿ ಹೆಣ್ಣೆ

ನಾ ಬರನಾರಿ ಎಂದ್ರ ಏನಂದ ಕುಸುಮಾಲ
ಅವ ಕಾಲಿಗ ಬಿದ್ದು ಅಳುತಾಳ
ಕಾಲಿಗ ಬಿದ್ದು ಅತ್ತಾರ ಕುಸುಮಾಲ
ನನ್ನ ಬಲಗಯ್ಯ ನೀನು ಹಿಡಿ ಹೆಣ್ಣಾ
ಮೇಲಕ ನನ್ನ ಎತ್ತು ಹೆಣ್ಣಾ

ಬಲಗೈಯ ಹಿಡಿದು ನ್ಯಾಲಕ ಎತ್ತಿದ್ರ
ಜಡಿದು ಅವಳ ಕೀಳಾಕ ಕೆಡಿಯ ಬುಟ್ಟ
ಜಡಿದು ಅವಳ ಕೀಳಾಕ ಕೆಡಿಯ ಬುಟ್ಟ ಕುಸುಮಾಲ
ಅಮ್ಮ ನೋಡ್ಡ್ಯಮ್ಮ ಇವ್ನ ಸಾಸಗಳ
ಇವ್ನ ಮುದುಕಯ್ಯ ಎನುತೇಳಿ ಜರಿದೆನು ನಾನು

ಹೆಣ್ಣಾ ಅನ್ನಹಾರವಿಲ್ಲದೆ ಇಂದಿಗ ಏಳು ಜಿನ
ನೀರು ನಿದ್ರಾಯ ಮೊದಲಿಲ್ಲ ಹೆಣ್ಣಾ
ನಾನು ಕುಂಡ್ರುನಾರಿ ಹೆಣ್ಣಾ ಧರಯೊಳಗ

ಮೂರು ಮನಗ ಹ್ವಾದರ ಮೂರು ಮುದ್ದ ಸಿಕ್ಕ್ಯತಾದ
ನಿನಗೇನ ದಾಸಯ್ಯ ಗುದುಗ್ಯಾಗ
ಮೂರು ಮನ ಊಟ ಮುಂಬಾಗಿಲಿಗ ಸರಿಯಲ್ಲ
ನನಗ್ಯಂತ ಸತುವ ಕುಸುಮಾಲ

ನಾಲ್ಕು ಮನ್ಗ ಹ್ವಾದರ ನಾಲ್ಕು ಮುದ್ದ ಸಿಕ್ಕ್ಯತಾದ
ನಿನಗೇನು ದಾಸಯ್ಯ ಗುದುಗ್ಯಾಗ
ನನಗ ನಾಲ್ಕು ಮನ ಊಟ ನಡುದಾರಿಗ ಸರಿಯಲ್ಲ
ನನಗ್ಯಂತ ಸತುವ ಕುಸುಮಾಲ

ಅವ ಆಗಂದ ಮಾತ ಕೇಳಿಕೊಂಡು ಕುಸುಮಾಲ
ಅವ್ನ ಕೈಹಿಡಿದು ಮೇಲಕ ಎದ್ರಿಸಿಕೊಂಡ
ಅವ್ರು ಒಂದೊಂದು ಹಜ್ಜಲಿ ಗೆಣಸಿನ ಹೊರೆಯ
ದಂಡಕ ಬರುತಾರ

ಹಾಳು ಪಾಪಿ ನೀನು ಗೆಣಸ ಕೀಳಬೋದ
ಹೊರ ಪರ್ವತದಾಗ ಬೆಳದದಲ್ಲ

ನೀನು ಯಾಗ ಕಿತ್ತಿಣ್ಣಾ ಕೆರೆಯಲ್ಲಿ
ಕಾವಲುಗಾರ್ರು ಕಂಡಿದ್ರು ನಿನ್ನ ಕಾಡನ ಬಾಯಿಗ ಕೊಡುತ್ತಿದ್ರು
ಕಾವಲಿನವ್ರು ಕಂಡಾರು ದಾಸಯ್ಯ
ಬ್ಯಾಗಾನ ಎತ್ತು ನನ್ನ ಗೆಣಸಿನ ಹೊರೆಯ

ಎತ್ತು ಎಂದರ ಇದು ಎದ್ದಾದ ಹೆಣ್ಣು ಅನುತ್ತೀಳಿ
ಬಗ್ಗ್ಯಣ್ಣೆ ಗೆಣಸಿನ ಹೊರ್ಗ ಎನುತ್ತೀಳಿ
ಗೆಣಸಿನ ಹೊರೆಯ ಎತ್ತಿ ಹೆಗಲಮ್ಯಾಲಿಟ್ಟುಕೊಂಡು
ಅವಳ್ನ ಎಡದ ಕಂಕಳಲ್ಲಿ ತಬ್ಬಿಕಂಡ

ಎಡದ ಕಂಕಳಲ್ಲಿ ತಬ್ಬಿಕಂಡು
ಬಲದ ಮಗ್ಗಲಾಗ ಉಳ್ಳಿಸೀದ
ಅಯ್ಯ ಯಾಕ ದಾಸಯ್ಯ ಬಲದ ಮಗ್ಗುಲಾಗ ಉಳ್ಳಿಸೀಯೆ
ಅಯ್ಯೊ ತಾಡ್ಡಿಣ್ಣೆ ನನದೊಂದು ಹರುಕ

ನೀ ಮೂಡಲ ಗಿರಿಯಲ್ಲಿರುವ ಮುದ್ದುಮಾದಯ್ಯ
ನಿನ್ನ ಹರುಕ ನಿನಗ ತೀರಿ ಹೋಯಿತು ಎನುತ್ತೀಳಿ
ಏಳುಮಲಯ್ಯನ್ಗ ಕೈಯ ಮುಗಿದ್ಬುಟ್ಟು
ಕೀಳಾಕ ಹೊರೆಯ ಇಟ್ಟಬುಟ್ಟ

ಅಯ್ಯ ನಿನ್ನ ದಮ್ಮಯ್ಯ ದಾಸಯ್ಯ ಎದ್ದ್ರು ಎಂದರ
ಗಕ್ಕನ ಎದ್ದರಲ್ಲ ಜಗದೊಡೆಯ
ಅವ್ರು ಹೊರೆಯ ಎತ್ತಿ ಹೆಗಲ್ಗ ಇಟ್ಟಿಕಂಡು
ಕುಂದರಗಾಲ ಹಾಕಂಡು ಅವಳ ಮ್ಯಾಳ ಕಚಿಕೊಂಡು

ಅವಳ ಕೀಳಾಕ ಕೆಡೆಬುಟ್ಟು
ದಂಡುಳ್ಳ ನ್ಯಾವ ಮಾಡ್ತಾನ

ಆವ ಎಲ್ಲ್ಯವ ಕಾಣಿ ಎದ್ದ ದಾಸಯ್ಯ
ಕುದುರು ಗಾಲ ಹಾಕಂಡು ಮ್ಯಾಳ್ಳ ಕಚ್ಚಿಕೊಂಡ

ನಂಜಲಗೂಡಿನಲ್ಲಿರುವ ನಂಜುಂಡಯ್ಯ
ನಿನ್ನರಕ ನಿನಗ ತೀರಿಹೋಯ್ತು ಅನುತೇಳಿ
ನಂಜಲಗೂಡಿಗ ಕೈಯ ಮುಗಿದ್ಬುಟ್ಟು

ಕೀಳಾಕ ಹೊರೆಯ ಇಟ್ಟುಬುಟ್ಟು ನಮ್ಮ ಸ್ವಾಮಿ
ಅಂಗಮಂಗನಾಗಿ ಮನುಗಾನ

ಅಂಗಮಂಗನಾಗಿ ಮಲಗಿರುವ ದಾಸಯ್ಯನ
ಪಾದವ ಹಿಡಿದು ಅಳುತಾಳ
ಮುದುಕಯ್ಯ ಎಂದು ಜರಿದು ಬಂದಿ
ಮುದುಕು ದಾಸಯ್ಯ ಇವನಲ್ಲ ಕಾಣಮ್ಮ

ನಿಮ್ಮ ದಮ್ಮಯ್ಯ ಸ್ವಾಮಿ ದಯಮಾಡಿ
ನನಗ ಗೆಣಸಿನ ಹೊರೆಯ ಎತ್ತಬೇಕು ದಾಸಯ್ಯ
ನಿಮ್ಮ ಕಾಲಿಗ ಬಿದ್ದು ಅಳುತೀನಿ

ಕುಸುಮಾಲ ಆಡಿದ ಮಾತ ಕೇಳಿರು ದಾಸಯ್ಯ
ನಿನ್ನ ಗೆಣಸಿನ ಹೊರೆಯಿಂದ ನನ್ನ ಪ್ರಾಣ ಹೊಯ್ತಾದ
ನನ್ನಿಂದ ಆಗದಿಲ್ಲ ಹೆಣ್ಣು
ಸ್ವಾಮಿ ಆಗದು ಎಂದು ಹೇಳಬೇಡಿ
ಸ್ವಾಮಿ ಪಾದಕ ಬಿದ್ದು ಅಳುತೀನಿ

ಬಂದ ದೋಷವೆಲ್ಲ ನಿನ್ನದೆ ಎನುತ್ಲೀಳಿ
ಗಕ್ಕನ ಎದ್ದು ಹೊರಿಗ ಬಗ್ಗತಾರ
ಗೆಣಸಿನ ಹೊರೆಯ ಎತ್ತಿ ಎದಮ್ಯಾಲ ಇಟ್ಕೆಕಂಡು
ಪ್ರಾಣ ಹೋದವರ್ಹಾಗ ಮನುಗಾನ ದಾಸಯ್ಯ
ಬುಟ್ಟಕಣ್ಣು ಬುಟ್ಹಾಗ ನೀಟಿದ ಕಾಲು ನೀಟಿದಾಗ
ಪ್ರಾಣ ಪ್ಹಾದವರ್ಹಾಗ ಮನುಗಾನ

ಅಪ್ಪ ಹಾಳುಪಾಪಿ ದಾಸಯ್ಯನ ನಾನು ಕರತರಬೋದ
ನನ್ನ ಕೈಯಾರ ಪ್ರಾಣ ಹೋಯ್ತಲ್ಲ ಎಂದು
ತಾವರ ಕೆರ್ಗ ಹೊಯ್ತಾಳ ಕುಸುಮಾಲ
ತನ್ನ ಪಟ್ಟ್ಯಾಯ ಸೆರಗ ಅಜ್ಜುಕೊಂಡು
ಓಡಿ ಬರುತಾಳ

ಓಡಿ ಬರುವ ಹೆಣ್ಣು ಕಂಡಾರು ನಾರಾಯಣ
ಕೀಳುಗುಲದ ಸ್ವಾಲಿಗನ ಮಗಳ ಕೈಲಿ
ನೀರ ಯಾಗ ಕುಡಿಯಲಿ ಎಂದು ಜಗದೊಡೆಯ
ತಾಳ್ಹೆಣ್ಣು ನನಗ ನೀರು ಬುಡಬ್ಯಾಡ

ನನ್ನ ಎತ್ತಿ ಎದ್ಗ ಒರಗಿಸ್ಕ ಹೆಣ್ಣ
ನಾನು ಸುದಾರ್ಸ್ಕತ್ತಿನಿ

ಆವ ಹಾಗಂದ ಮಾತ ಕೇಳಿ ಕುಸುಮಾಲ
ಅವನ ತಬ್ಬಿ ಎತ್ತಿ ಎದಮ್ಯಾಲ ಒರಗಿಸಿಕೊಂಡು
ನಿಮಗ ಏನು ಬೇಕು ಎಂದು ಕೇಳಿದಳಾಗ

ಏನು ಬ್ಯಾಡ ಎಂದಾಗ ನಮ್ಮ ಸ್ವಾಮಿ
ಪಟ್ಟಾಯು ಸೆರಗ ಎತ್ತುಕೊಂಡು
ಅವ್ವ ಅಂಗಾಪ ಜಳವ ಹೊಡೆದಾಳು
ಜಳವ ಹೊಡದ್ಬುಟ್ಟು ಎದ್ದಿ ಕೂರಿಸಿದಳು

ನಮ್ಮ ಪೋಡಿಗ ಹೋಗಾಕ ಹೊತ್ತಾಯ್ತು
ನನ್ನ ತಾಯಿ ಎಲ್ಲೆಲ್ಲಿ ತಡಕೀಳೊ
ತಾಯಿ ತಂದ ಗೋಳು ನನಗಾಗತು
ದಮ್ಮಯ್ಯ ಸ್ವಾಮಿ ದಯಮಾಡಿ
ನನ್ಗ ಗೆಣಸಿನ ಹೊರೆಯು ಎತ್ತಬೇಕು

ಗೆಣಸಿನ ಹೊರೆಯು ಎತ್ತದು ಸರಿಕಾನ
ನನಗೇನ ಕೊಟ್ಟಾಯಿ ಕುಸುಮಾಲ
ನಿಮಗ ಹೆಜ್ಜೇನು ತುಪ್ಪ ಕೊಡುವೇನು
ಬಿದರಕ್ಕಿ ಕೊಡುವೆನು ಮುದ್ದಿಲ್ಲಯ ಕೊಡುವೆನು

ಹೆಜ್ಜೇನು ತುಪ್ಪ ನಮ್ಮ ಕಮ್ರಿಯಲ್ಲಿ ಅದ
ನಮಗ್ಯಾತಕ್ಕ ಹೆಣ್ಣ ಕುಸುಮಾಲ
ಬಿದಿರಕ್ಕಿ ಅನ್ನೋದು ನಮ್ಮ ಬೆಟ್ಟದಲ್ಲಿ ಬೆಳದಾದ
ನಮಗ್ಯಾತಕ ಹೆಣ್ಣ ಬಿದಿರಕ್ಕಿ

ನಮ್ಮ ಪೋಡಿಗ ಬಂದರ ದಾಸಯ್ಯ
ತಾವರ ಗೆಣಸ ಕೊಡುವೇನು
ನಿನ್ನ ತಾವರ ಗೆಣಸು ಸ್ವಾಮರಸನ ಕೆರೆಲೆಲ್ಲ ಬೆಳದಾದ
ನಮಗ್ಯಾಕ ಹೆಣ್ಣು ತಾವರ ಗೆಣಸು

ನಮ್ಮ ಪ್ರೋಡಿಗ ಬಂದರ ದಾಸಯ್ಯ
ನಿಮ್ಗ ಚಪ್ಪರ್ದ ಅವರಕಾಯಿ ಕೊಡುತೀನಿ
ಬೂದು ಕುಂಬಳದ ಕಾಯಿ ಕೊಡುತೀನಿ

ನಿನ್ನ ಚಪ್ಪರ್ದ ಅವರಕಾಯಿ ನಮ್ಮ ಕಾಡೆಲ್ಲ ಬೆಳದಾದ
ಹೆಣ್ಣ ನಮಗ್ಯಾಕ ಚಪ್ಪರ್ದ ಅವರ ಕಾಯಿ
ನಿನ್ನ ಬೂದುಗುಂಬಳದ ಕಾಯಿ ನಮ್ಮ ಬೆಟ್ಟೆಲ್ಲ ಬೆಳದಾದ
ನಮಗ್ಯಾಕ ಹೆಣ್ಣ ಬೂದುಗುಂಬಳಕಾಯಿ

ನಮ್ಮ ಪ್ರೋಡಿಗ ಬಂದರ ದಾಸಯ್ಯ
ನಿನ್ಗ ಬೂದು ಬಾಳಹಣ್ಣ ಕೊಡುತೀನಿ
ನಿನ್ನ ಬೂದು ಬಾಳಹಣ್ಣು ಕಾಡೆಲ್ಲ ಬೆಳೆದಾದ
ನಮಗ್ಯಾಕ ಕುಸುಮಾಲ ಬೂದು ಬಾಳಹಣ್ಣು

ನಮ್ಮ ಪ್ರೋಡಿಗ ಬಂದರ ದಾಸಯ್ಯ
ಮುಳ್ಳು ಗೆಣಸ ಕೊಡುತೀನಿ
ಮುಳ್ಳು ಗೆಣಸು ನಮ್ಮ ಕಾಡೆಲ್ಲ ಬೆಳದಾದ
ನಮಗ್ಯಾಕ ಹೆಣ್ಣ ಮುಳ್ಳು ಗೆಣಸು

ಕಾಡು ಸ್ವಾಲ್ಗರ್ಗ ಕಾಸೆಲ್ಲಿ ಬಂದಾದು
ನಮ್ಮ ಪ್ರೋಡಿಗ ಬಂದರ ನಮ್ಮ ತಾಯಿತಂದಗೋಳು
ನೀವು ಕೇಳಿದ ವರವ ಕೊಡುತಾರ
ನಿಮ್ಮ ದಮ್ಮಯ್ಯ ಸ್ವಾಮಿ ದಯಮಾಡಿ

ನಿಮ್ಮ ಪ್ರೋಡಿಗ ಬಂದರ ಎಳೆಯುವಳ
ಸ್ವಾಮುರಸನ ಕೆರೆಯ ಕಾವಲು ನನ್ನದು
ಕಾವಲು ಕಾಯುದಿದ್ದರ ನನಗ ಸಂಬಾಳ ಕೊಟ್ಟರ
ನನ್ನ ಅನ್ನದ ಬಾಯಿಗೆ ಮಣ್ಣು ಕಾಣೆ
ನಾನು ಬರನಾರಿ ಹೆಣ್ಣ ನಿಮ್ಮ ಪ್ರೋಡಿಗ

ನಮ್ಮ ಪ್ರೋಡಿಗ ಬರದಿದ್ರ ದಾಸಯ್ಯ
ನಾವು ಕಟ್ಟು ಮಡುಗುತೀವಿ ಕಾಣುಕಾಯ

ನನ್ಗ ಗೆಣಸಿನ ಹೊರೆಯು ಎತ್ತು ನೀನು
ಗೆಣಸಿನ ಹೊರೆಯು ಎತ್ತುತೀತಿ ಕುಸುಮಾಲ
ನನ್ಗ ಮಡದಿ ಆದರ ಎತ್ತುತೀನಿ

ಸ್ವಾಮಿ ಆಡಿದ ಮಾತ ಕೇಳಿ ಕಂದು ಹೋಗಿತು ನೆಗನೊಕ
ತಾಯಿ ತಂದೆ ಮಾತ ಕೇಳ್ದಿ ಬಂದದಕ
ನಾ ಆದ್ರು ಆಯ್ತಿನಿ ದಾಸಯ್ಯನೋರ್ಯ

ಅಣ್ಣ ತಮ್ಮಂದಿರ ಮಾತ ಅಕ್ಕತಂಗರ ಮಾತ
ನಾ ಕೇಳ್ದಿ ಬಂದಿದ್ದಿ ದಾಸಯ್ಯ
ನಾ ಹಿರಿಯವರ ಮಾತ ಕೇಳ್ದಿ ಬಂದದ್ಕ
ನಾ ಆದ್ರು ಆಯ್ತಿನಿ ದಾಸಯ್ಯನೋರ್ಯ
ಎತ್ತಿ ಸ್ವಾಮಿ ಗೆಣಸಿನ ಹೊರೆಯ

ಬಾಯೊಳಗ ಮಡದಿ ಆಯ್ತಿನಿ ಅಂದ್ರು
ನಾ ಗೆಣಸಿನ ಹೊರೆಯು ಎತ್ತದಿಲ್ಲ
ನನ್ನ ದರುಶನವ ಮುಟ್ಟ ಸತ್ಯಗಳ ಮಾಡುದ್ರ
ಒಪ್ಪುತೀನಿ ಕಾಣೆ ಕುಸುಮಾಲ

ಹುಲಿಯ ಚರ್ಮ ಸಾಕ್ಷಿಯಾಗು
ನಾನು ದಾಸಯ್ಯನ ಮಡದಿ ಎಂದಳಾಗ
ನಿನ್ನ ಹುಲ್ಲು ಕಿಷ್ಣ ಸಾಕ್ಷಿಯಾಗು
ದಾಸಯ್ಯನ ಮಡದಿ ಎಂದಳಾಗ
ಸಂಕು ಸಾಕ್ಷಿಯಾಗು ನಿನ್ನ ಹೆಂಡ್ತಿ
ಜಾಗಟೆ ಸಾಕ್ಷಿಯಾಗು ನಿನ್ನ ಹೆಂಡ್ತಿ ಎಂದು
ಸಂಕು ಜಾಗಟೆ ಮುಟ್ಟ ಸಾಕ್ಷಿ ಮಾಡಿದಳು

ನಿನ್ನ ತಿರುನಾಡಿ ಬೊಗನಾಸಿಯ ಸಾಕ್ಷಿಯಾಗು
ನಾನು ನಿನ್ನ ಮಡದಿ ಆಯ್ತೀನಿ
ಗರುಡೆ ಗಂಭ ಸಾಕ್ಷಿಯಾಗು, ವೈರುಮುಡಿ ಸಾಕ್ಷಿಯಾಗು
ನಿನ್ನ ಮಡದಿ ಆಗುತೀನಿ

ಚೆಂಡಿನ ಕುಚ್ಚು, ನವಿಲುಗರಿದೊಂದ ಸಾಕ್ಷಿಯಾಗು
ನಿನ್ಗ ಮಡದಿ ಆಯ್ತಿನಿ ದಾಸಯ್ಯ

ಅಯ್ಯ ಗುಂಭು ಗೋರಳ್ಳು, ನತ್ತಿಯಡಂಡ ಸಾಕ್ಷಿಯಾಗು
ನಾನು ಇಂದೇ ನಿನ್ಗೆ ಮಡದಿ ಆಯತೀನಿ

ಹನ್ನೆರಡು ದರುಶುನವ ಮುಟ್ಟಿ ಸತ್ಯ ಮಾಡಿದ್ರು
ನಾ ಯ್ಯಾಗ ಒಪ್ಪಲಿ ನಿನ್ನ ಹೆಣ್ಣು

ಆಳುದ್ದ ನೀರಲ್ಲಿ ಆಳಾವ ನೋಡಬೋದು
ನೀರೊಳಗಿರುವ ಮೀನಿನ ಹೆಜ್ಜಾಯ ನೋಡಬೋದು
ಹೆಣ್ಣಿನ ಮಾಯವ ನಾ ತಿಳಿಯನಾರಿ ಕುಸುಮಾಲ
ನೀ ಸುಂಕದ ಹಣವ ಕೊಡಬೇಕು.

ಸ್ವಾಮಿ ಕಾಡು ಸ್ವಾಲಿಗರಿಗ ಕಾಸು ಎಲ್ಲಿ ಬಂದದು
ನಮ್ಮ ಪೋಡಿಗ ನೀವು ದಯಮಾಡಿ
ನಿಮ್ಮ ಪೋಡಿಗೆ ಬರುವವರು ನಾವಲ್ಲ
ನಿನ್ನ ಹೊರೆಯ ಸುಂಕವ ಕೊಟ್ಟೋಗ್ಗೆಣ್ಣೆ ಅಂದರ
ಅವ ಗಕ್ಕಾನ ಎದ್ದು ಅಳುತಾಳ

ನೀ ಸುಂಕದ ಹಣವ ಕೊಡದಿದ್ರ
ನಿನ್ನ ಕಾಡಾನ ಬಾಯಿಗ ಕೊಡುತೀನಿ
ಆಗೆಂದ ಮಾತ ಕೇಳಿ ಧರಣಿಗ ಸ್ವಾಕ ಪಡುತಾಳ

ಐವತ್ತುವರದ ಹರಳ್ವಾಲ ಕಳದು
ಸ್ವಾಮಿಯ ಕೈಗ ಕೊಡುತಾಳ

ಐವತ್ತುವರದ ಹರಳ್ವಾಲ ಈಸಿಕಂಡು
ಕಂಕಳ ಚೀಲಕ ಇರಿಸಿಕೊಂಡ ಜಗದೊಡೆಯ
ಗೆಣಸಿನ ಹೊರೆಯ ಎತ್ತಿ ಅವಳ ನೆತ್ತಿಮ್ಯಾಲ ಮಡಿಗೀರೊ

ಗೆಣಸಿನ ಹೊರಯ ಎತ್ತಿದ್ರಲ್ಲ ದಾಸಯ್ಯ
ನಮ್ಮ ಪೋಡಿಗ ದಾರಿಯ ತೋರಿಸಯ್ಯ

ಆ ಬೆಟ್ಟ ಅತ್ತೆಣ್ಣೆ ಈ ಬೆಟ್ಟ ಇಳಿಹೆಣ್ಣೆ
ಅಲ್ಲೆ ನಿಮ್ಮ ಪೋಡಿಗ ದಾರಿಕಾಣ್ತೆಣ್ಣೆ
ಬೆಟ್ಟ ಹತ್ತಿ ಬೆಟ್ಟ ಇಳ್ದು ಬಳಸಿಕೊಂಡು
ಸ್ವಾಮಿ ಅವಳ ಮುಂದಕ ಬರುತಾರ

ಅತ್ತಿರಿ ಬಿತ್ತಿರಿ ದುತ್ತಿರಿ ವಾಕಿ ಜೋತು
ಇವಳ್ಯಾರ ಇಲ್ಲಿ ಹೋಗವ
ನನ್ನ ಪ್ರೋಡಿನ ಸುಂಕವ ಕೊಟ್ಟೋಹೋಗ್ಗೆಣ್ಣೆ
ನನ್ನ ಪ್ರೋಡಿನ ಸುಂಕವ ಕೊಟ್ಟರ ಸರಿಹೋಯ್ತು
ನಿನ್ನ ಕಾಡನ ಬಾಯಿಗ ಕೊಡುತೀನಿ ಅನುತ್ತೇಳಿ
ಕೇಳಾಕ ಅವಳ ಹೊರೆಯು ಬೀಳ್ಸಿಬುಟ್ಟು
ಸ್ವಾಮಿ ಅಡ್ಡಲಾಗಿ ನಿಂದರಲ್ಲ

ಸ್ವಾಮಿ ಕಾಡು ಸ್ವಾಲಿಗರಿಗ ಕಾಸೆಲ್ಲಿ ಬಂದದು
ನಮ್ಮ ಪ್ರೋಡಿಗ ದಯಮಾಡಿ ಬಂದರ ದಾಸಯ್ಯ
ನಮ್ಮ ತಾಯಿತಂದಗೋಳು ಕೇಳಿದ ವರವ ಕೊಡುತಾರ ಎಂದು
ಅವರ ಪಾದವ ಹಿಡಿದು ಅಳುತಾಳ

ನಾ ಬೆಟ್ಟದ ಕಾವಲ ಬುಟ್ಟುಬುಟ್ಟು
ನಿನ್ನೊಂದಿಗೆ ಬರಬೋದ
ಸುಂಕದ ಹಣವ ಕೊಟ್ಹೋಗ್ಹೆಣ್ಣೆ
ಸುಂಕದ ಹಣವ ಕೊಡದಿದ್ರ
ನಿನ್ನ ಹೆಬ್ಬುಲಿ ಬಾಯಿಗ ಕೊಡುತೀನಿ

ಹೆಬ್ಬುಲಿಯ ಸುದ್ದಿ ಕೇಳಿ ಕುಸುಮಾಲ
ಅವ ಮೂವತ್ತು ವರದ ಮೂಗುತಿಯ ಕಳಕೊಂಡು
ಸ್ವಾಮಿಯ ಕೈಗ ಕೊಳುತಾಳ

ಮೂವತ್ತುವರದ ಮೂಗುತಿ ಈಸಿಕೊಂಡು
ಕಂಕುಳ ಚೀಲಕ ಇರಿಸಿಕೊಂಡು
ಅವಳಿಗ ಗೆಣಸಿನ ಹೊರೆಯ ಎತ್ತುತ್ತಾರ

ಅಯ್ಯ ನಮ್ಮ ಪ್ರೋಡಿಗ ದಾರಿಯ ತೋರಿಸಯ್ಯ
ಈ ಬೆಟ್ಟ ಹತ್ತಿ ಆ ಬೆಟ್ಟ ಇಳಿಹೆಣ್ಣೆ
ಅದೇ ನಿಮ್ಮ ಪ್ರೋಡಿಗ ದಾರಿ ಹೆಣ್ಣೆ

ಈ ಬೆಟ್ಟ ಹತ್ತಿ ಆ ಬೆಟ್ಟ ಇಳಿಯಾಗ
ಅವ ಅಲ್ಲಾಣ ಬಳಸಿಕೊಂಡು ಬಂದೆಬುಟ್ಟೆ
ಇವಳ್ಯಾರ ಇಲ್ಲಿ ಹೋಗವ

ನನ್ನ ಪ್ರೋಡಿನ ಸುಂಕವ ಕೊಟ್ಟೋಗು
ನನ್ನ ಪ್ರೋಡಿನ ಸುಂಕವ ಕೊಟ್ಟೋದ್ರು ಸರಿಯಾಯ್ತು
ನಿನ್ನ ಕಾಡಾನ ಬಾಯಿಗ ಕೊಡುತೀನಿ ಎಂದಾಗ
ಕೆಟ್ಟೆ ಎಂದು ಸ್ವಾಕವ ಮಾಡಿದಳು

ಅಯ್ಯ ಅಲ್ಲೊಬ್ಬ ದಾಸಯ್ಯನಿಗ ಹರಳ್ಪಾಲ ಕಳಕೊಟ್ಟೆ
ಇಲ್ಲೊಬ್ಬ ದಾಸಯ್ಯನಿಗ ಮೂಗುತಿ ಕಳಕೊಟ್ಟೆ
ಇಲ್ಲೇನು ಕೊಡಲಿ ದಾಸಯ್ಯ
ನೀನು ಸುಂಕದ ಹಣವ ಕೊಡನಾರ್ದೆ ಹೋದ್ರು
ನಾನು ಹೇಳಿದಾಗ ಕೇಳುತಿಯು ಹೆಣ್ಣಾ ?
ಅಣ್ಣ ತಮ್ಮನೋರ ಮಾತ, ಅಕ್ಕ ತಂಗೋರ ಮಾತ
ನಾ ಕೇಳಿದೆ ಬಂದವ್ಕ ದಾಸಯ್ಯ
ನೀವು ಹೇಳಿದಾಗ ಕೇಳುತೀನಿ

ನೀ ಸುಂಕವ ಕೊಡಕ ಗತಿ ಇಲ್ದಿದ್ರ
ನಿನ್ನ ಉಟ್ಟಿರುವ ಸೀರೆಯ ಅಳಿದ್ಬುಟ್ಟು
ನೀ ಕಕ್ಕ ಸೊಪ್ಪಿನ ಉಡುಗೆಯ ಉಡುಹೆಣ್ಣ
ಚಾರಿಚಾರಿಗೂ ನಾಮವ ಬಳಕೊಂಡು
ಕಾವಲು ದೊಣ್ಣೆ ಹಿಡಕಂಡು
ಜಗದೊಡೆಯನ ಮುಂದಕ ಬಂದು
ಅವನ ಹೆಜ್ಜಾಯ ಸದ್ದಿಗ ಹಜ್ಜ ಮಡುಗಿ
ಅವ ತಕ್ಕ ತೈ ಎಂದು ಕುಣಿದಾಳು

ಅವಳು ತಕ್ಕತೈ ಎಂದು ಕುಣಿದಾರ
ಸ್ವಾಮಿ ಬಗ್ಗಿ ಆಳುತಾರ
ಹೆಣ್ಣು ಜನುಮ ಭೂಲೋಕದೊಳಗ ಇರಬಾರದು ಎಂದು
ಸ್ವಾಕವ ಮಾಡುತ

ಒಂದು ಸಂಜೀವಿನಿ ಕಡ್ಡಿಯ ತಕ್ಕಂಡು ನಾರಾಯಣ
ಅವಳ ಮಂತ್ರಿಸಿ ಕೂಸ ಮಾಡೆಬುಟ್ಟು
ಅವಳ ಕಂಕಳ ಚೀಲಕ ಇರ್ಸೆ ಕಂಡು
ಹಾರಿ ಬಂದರು ವೈಕುಂಠಕ

ಬಂದ ಜಗದೊಡನ ಕಂಡಾಳು ತೊಳಸಮ್ಮ
ಅವ ಚಿನ್ನದ ಕಿಂಡಿಲಿ ಪನ್ನೀರ ಅಗ್ನಿ ತುಂಬಿ
ಅವರ ಪಾದ ಪದುಮಾಂಗವ ತೊಳೆದ್ಬುಟ್ಟು
ಮಂಗಳಾರತಿಯ ಮಾಡುತಾಳೆ

ಸ್ವಾಮಿ ಗಂಧದ ಮಳುಗ ದಯ ಮಾಡುತಾರ
ಗಂಧದ ಮಳುಗಲಿ ಕುಂತಿರುವ ಸ್ವಾಮಿಯು
ನೀವು ಊಟಕ ದಯಮಾಡಿ ಎಂದಳು ತೊಳಸಮ್ಮ

ಊಟ ಉಪಚಾರವೆಲ್ಲ ಜಗದ ಕೈಲಾಸದಲ್ಲಾಯ್ತಲ್ಲ
ಶಿವಪೂಜೆಗೆ ಮೂನ್ನೂರು ಕೋಟಿ ಜಂಗಮರು ಬಂದಿದ್ರು
ಕೋಟಿ ಜಂಗಮರು ಶಿವ ಪೂಜ ತೀರಿಸಿಕೊಂಡು ಹೋಗಾಗ
ಇಂದೊಂದು ಮಾಯಾದ ಮಗುವ ಮರತಾರು

ನಾ ಎತ್ತಿ ನನ್ನ ತಿರುನಾಡಿ ಬೊಗನಾಸಿಗ ಇರಿಸಿಕೊಂಡು ಬಂದೀನಿ
ನೀವು ಮಕ್ಕಳಿಲ್ಲದ ಮಡದೀರು
ಈ ಮಗುವ ಸಾದಕಿರ ನಿಮಗ ತೌರಾಯ್ತದ

ಜಗದೊಡೆಯ ಆಡಿದ ಮಾತ ಕೇಳಿದ ತೊಳಸಮ್ಮ
ಪಟ್ಟಾಯ ಸೆರಗ ಒಡ್ಡಿ ಕೂಸ ಈಸಿಕೊಂಡು
ತಣ್ಣೀರ ಆಗ್ನೀಲಿ ಮೊಖವನ್ನೆ ತೊಳೆದು

ಬಿಸಿನೀರ ಆಗ್ನೀಲಿ ಮೈಯ ತೊಳದು
ಕೂಸ ಸುದ್ದ ಮಾಡಿಕೊಂಡು
ಜಗದೊಡೆಯನ ದಂಡಕ ಹೊಯ್ತಾಳ

ಹೊಸ ಮಗುವ ತಂದಿನಿ ಒಡಯ
ನೀವು ಮುಟ್ಟಿ ತೊಳಚಿಯ ಎರೆಯಿರಿ
ತೊಳಸಿ ಎರದು ಒಡೆಯ ಶಾಪವ ಕೊಡುತಾರ

ಯಾವ ಲೋಕ ತಿರುಗಿ ಬಂದ್ರು
ಈ ಮೊಗ ವೈಕುಂಠಕ ತಿರಂಜಾಯಸ
ಎಂದು ಶಾಪವ ಕೊಡತಾರ

ಗುರುಗಳು ಕೊಟ್ಟ ಮಗುವ ಈಸಿಕೊಂಡು ತೊಳಸಮ್ಮ
ವೈಕುಂಠಕ ಬಿಂದು ಲಕ್ಷ್ಮಿದೇವಿಯು ಕಿರೆದಾಳೊ

ಚಿನ್ನದ ತೊಟ್ಟಿಲಿಗ ರನ್ನದ ಹಗ್ಗ ಹೂಡಿ
ಮಾಗಾಯಿ ಮೊಗುವ ಮಲಗಿಸಿ
ಜೋಗುಳ ಜೋಂಪ್ಯಾ ಸಾರಿದಾಳು

ನೀ ಅಳಬ್ಯಾಡ ಮುದ್ದು ಬಳೆ ನಿನ್ನ ಕೈಗಾದೊ
ಪರ್ವತಕ್ಹೋಗ ಹಿರಿಯವರ ಕೈಲಿ
ನಾ ಕಿರುಗಿಜ್ಜಿಗ ಹಣವ ಕೊಡುವೇನು

ಅಜ್ಜ ಮುಜ್ಜಂಗಿ ವಜ್ರಾದ ಕೀಲಂಗಿ
ನಮ್ಮ ಕಂದಮ್ಮನ ಮೈಯಂಗಿಯು
ಮಾರಿರು ಮದ್ದೂರು ಸಂತ ಮಾಳಗಲಿ

ಮಾಗಾಯಿ ಮಗು ಮಲಗಿದಾಗ ನಾರಾಯಣ
ನನ್ನ ಪಾದಪದುಮಕ ನೀರ ತತ್ತ್ರ್ಹೆಣ್ಣಾ ಅಂದ್ರು
ಪಾದಪದುಮವ ತೊಳಕೊಂಡು ಸಿರರಿ

ಊಟ ಶಿವ ಪೂಜೆಯ ತೀರಿಸಿಕೊಂಡು
ಜಗದೊಡೆಯ ಪಟ್ಟೆ ಮಂಚದ ಮ್ಯಾಲ ಒರುಗವರ

ಸರ್ರಾತ್ರಿ ಸಬ್ದ ಕೇಳಿ ಕಂಡು
ಸರ್ರಾತ್ರಿ ಒಳವ ಜಾವುವ ಹೊತ್ತ ನೋಡಿಕೊಂಡು
ನಂತ್ರಿ ನಾರಾಯಣ ಚಂತ್ರಿ ಯಾಸ ತಾಳಿ
ಕೈಯೊಳಗ ಕಂಚಿನ ಬುಡ ಬುಡಕೆ ಹಿಡಕೊಂಡು
ಜಾವುದ ಹೊತ್ತ್ನಲ್ಲಿ ಹೊರಟಾರು

ಅಲಕ್ಕಿ ಸಕುನುವ ಕೇಳಿಕೊಂಡು ನಾರಾಯಣ
ಸ್ವಾಲಿಗರ ಪ್ವೋಡಿಗ ಹೋಯ್ತಾರ
ಬೊಮ್ಮಗೌಡನ ತಿಪ್ಪಮ್ಯಾಲ ನಿಂತುಕೊಂಡು
ಅವ್ರು ಸಣ್ಣ ದನಿಯೆತ್ತಿ ಸಾರಿದರು

ಈ ಪ್ವೋಡಿನಲ್ಲೊಂದು ಹೆಣ್ಣು ಪಲಾನಿಯಾಗದ
ತುಂಬುದ ಶುಕ್ರವಾರ ಒಪ್ಪೊತ್ತಿನ ಗಳುಗಲಿ
ಎಲ್ಲಕ್ಕಿಂತ ಕಿರಿಯುವ ಕುಸುಮಾಲ ಧರಗಿಳಿದ ಗಳುಗಲಿ
ಬೊಗ ಬೊಗನ ಬಾಗ್ಯ ಬಂದಿತಲ್ಲ

ಕುಸುಮಾಲ ಪಲಾನಿಯಾದ ಮ್ಯಾಲ
ಸ್ವಾಲಿಗರ ಪ್ಪೋಡಿಗ ಒಡತನ ಬಂದು ದೊರಕಿತು ಎಂದು
ಚಂತ್ರಿ ನಾರಾಯಣ ಸಾರಿದರು

ತಿಪ್ಪಾಯ ಮ್ಯಾಲ ಸಾರಿದ ಸದ್ದ ಕೇಳಿ
ಗಕ್ಕಾನ ಎದ್ದ ಬೊಮ್ಮಗೌಡನ ಹೆಂಡ್ತಿ

ದೊಡ್ಡ ಕೊಂಡ ಬಾರಯ್ಯ, ಚಿಕ್ಕಕೊಂಡ ಬಾರಯ್ಯ
ಗುಜ್ಜ ಮೊರದ ಕೊಂಡ, ಬಲುಕೊಂಡ ಬನ್ನಿರಯ್ಯ

ಅದ್ಯಾವನೊ ಕಾಣ್ಯಲ್ಲಿ ಸಾಧು ಜಂಗುಮರು
ನಮ್ಮ ಕಂದಮ್ಮ ವ್ಹಾದ ಸುದ್ಧಿಯ ಹೇಳುತಾರ
ಅವನ ಹಿಡಿದ ಪಾದವ ಬಿಡ ಬ್ಯಾಡಿ
ತಾಯಿ ಆಡಿದ ಮಾತ ಕೇಳಿ ಕೊಂಡು
ಅವ್ರು ತಿಪ್ಪಾಯ ಕಡಿಗ ಓಡಿ ಬರುತಾರ

ಅಯ್ಯ ಯಾರು ದೂರ ಹೋಗಿರಯ್ಯ
ಹತ್ರಾಕ ಬಂದರ ಆತಭೂತ ಪ್ರೇತಗಳು ಇರುವಾದು
ಜಾಮದ ಹೊತ್ತಲ್ಲಿ ಬಂದರ ಸ್ವಾಲಿಗರ್ಯ
ನಿಮ್ಗ ಭೂತಾದ ರಾವಳಿ ಬಿಡುದಲ್ಲ
ನೀವು ಹಿಂದಕ ತಿರುಗಿ ಹೋಗಿರಯ್ಯ
ಯಾವ ಕಷ್ಟವಿದ್ದರೂ ಬೆಳಗಲ್ಲಿ ಹೇಳುವೆ
ಸ್ವಾಲಿಗರಿಗ ಶೂನ್ಯ ಕಟ್ಟಿಬುಟ್ಟು
ಸ್ವಾಮಿ ವೈಕುಂಠಕ ಬಂದು ಮಲುಗವರ
ಗಂಧದ ಮಳುಗಲಿ ಮಲಗಿರುವ ಜಗದೊಡೆಯನ
ಬೆಳಗಾಗಿ ಬೆಳ್ಳಿ ಮೂಡಾದ ಎದ್ರಿ ಸ್ವಾಮಿ ಅನ್ನಾಗ
ಗಕ್ಕಾನ ಜಗದೊಡೆಯ ಎದ್ದು ಎಲ್ಲಿಗ ವ್ಹಾದರು

ಕಲ್ಯಾಣಿ ಕೊಳಕ ವ್ಹಾಗಿ ಜಗದೊಡೆಯ
ಮಿಾದು ಮಡಿಯ ಉಟ್ಟುಕೊಂಡು
ಕೈಲಾಸಕ ಬರುತಾರ
ಅವ್ರು ನಾಮದ ಪೆಟ್ಟಿಯ ಎತ್ತಿಕೊಂಡು
ಚಾರ ಚಾರಿಗೂ ನಾಮವ ಬರಕಂಡು
ಚಿಕ್ಕ ಚಿಲ ನಾಮ ಚಿನ್ನದ ನಾಮ

ಬೇಕಾದ ನಾವು ಬೆಳಿಯ ನಾವು ಹಾಕಂಡು
ಕಳ್ಳನ ಗುಳಿಗೊಂಡು ಕಳ್ಳ ನಾವು ಇಕ್ಕೆಂಡು

ಹೆಣ್ಣ ಕೂತು ಉಣ್ಣಾವುನಗ ಕುಡುಕ ಹೊನ್ನು ಎಟ್ಟದು
ಹೆಣ್ಣ ನಾನು ಉಪದಾನಕ ಹೊಯತೀನಿ

ಕರಣದಲ್ಲಿ ಕಾವಾಕ್ಷಿ ಕೊರಳಲ್ಲಿ ಭದ್ರಾಕ್ಷಿ
ಕಾಲಲ್ಲಿ ಧರಿಸವರ ಕಿರುಗೆಜ್ಜ
ಗರುಡುಗಂಭ, ವೈರುಮುಡಿ, ಬೆಂಡಿನ ಕುಚ್ಚ
ಧರಿಸವರ ಎದೆಯೊಳಗ

ಗುಂಭುಗೊರಳ ಕೈಯೊಳಗ ಹಿಡಕೊಂಡು
ನವಿಲುಗರಿದೊಂದ ಬೆನ್ನಿಂದ ಮಡುಗಿಕೊಂಡು
ಚಿಕ್ಕಿಯ ಬಟ್ಟ ಹಣೆಗ ಇಕ್ಕಿಕೊಂಡು
ಹಕ್ಕಿಯ ಗೂಡ ಕೈಯೊಳ ಹಿಡಕೊಂಡು
ನತ್ತಿಯ ದಂಡ ಹತ್ತಿಸಿಕೊಂಡು
ಸ್ವಾಲಿಗರ ಪೋಡಿಗ ವ್ಹಾಯ್ತಾರ

ದುರುದುರನ ಸ್ವಾಲಿಗರು ಸ್ವಾಮಿಯ ನೋಡಿದರ
ಜಗ್ಗಿ ಜಗ್ಗಿ ನಲಿದಾರು ಸ್ವಾಲಿಗರ ಪೋಡಲ್ಲಿ
ಸ್ವಾಲಿಗರು ಬೆದರಿ ದೂರಾಕ ಹೊಯ್ತಾರ
ಕೈ ಎತ್ತಿ ಸ್ವಾಲಿಗರು ಸ್ವಾಮಿಗೆ ಮುಗಿದು
ಸ್ವಾಮಿ ನಮ್ಮ ತಿಪ್ಪಾಯ ಮ್ಯಾಲ ಸಾರಿದ್ರಲ್ಲ
ನೀವು ಯಾವ ಮನಿಗ ಶೂನ್ಯವಾ ಕಟ್ಟಿದ್ರಿ
ನೀವು ಕೈ ತೋರಿ ಸ್ವಾಮಿ ಜಗದೊಡೆಯ
ಯಾವ ಮನಿಗ ಎಂದು ಕೇಳಿರ್ಯ ಬೊಮ್ಮಗೌಡನ ಹೆಂಡತಿ
ಸುತ್ತ ಪ್ವೋಳಿಗೋಡ ಜಂಬುನೇರಳ ಮರ
ನಾ ಅರುಮನಗ ಶೂನ್ಯ ಕಟ್ಟಿನಮ್ಮ

ಸುತ್ತ ಪ್ವೋಳಿಗೋಡ ಜಂಬು ನೇರಳಮರ
ಅರುವಾನ ಅನ್ನಾದು ನಮ್ಮ ಮನೆ ಸ್ವಾಮಿ
ಸ್ವಾಮಿ ನಮ್ಮ ಮನೆಗೆ ನೀವು ದಯಮಾಡಿ ಅನುತ್ಹೇಳಿ

ಅವ್ರ ಒಂದೊಂದು ಹೆಜ್ಜಲಿ ಕರಕೊಂಡು
ಅವ್ರ ಹಟ್ಟಿಯ ಮುಂದ ನಿಲ್ಲಿಸಿಕೊಂಡು
ಕಲ್ಲು ಕಟ್ಟಿ ಬೆಲ್ಲೇವಿನಮರ ಗಾರ ಪಡಸಾಲ

ಗಾಜಿನಿಂಬ ಮಠದಂಡಲಿ
ಒಂದು ಬಣ್ಣದ ಮಂಡಲಿಗೆಯ ಹರಡವರ

ಬಣ್ಣದ ಮಂಡಲಿಗೆಯ ಮ್ಯಾಲ ಕೂತುಕಂಡು ನಾರಾಯಣ
ತಮ್ಮ ದರುಶನ ಮುಸ್ತೇಪ ಇಳುಕಿದರು
ಸ್ವಾಲಿಗರನ್ನೆಲ್ಲ ಬಳಸ ಕುಂಡ್ರುಸ್ಕಂಡು
ಅವ್ರು ಎತ್ತಿದರು ತಮ್ಮ ಜೋತಿಸವ

ಹಸೆಯ ತಾರಿಸಮ್ಮ ಗೊಂಬ ದೇವರ ಮಡುಗಮ್ಮ
ಹತ್ತು ಎಲೆ ಹತ್ತು ಅಡಕೆಯ ಇರಿಸಮ್ಮ
ನೀ ಹಿರಿಯರ ಹೆಸರ್ಧೇಳಿ ಕಾಣ್ಕಾಯ ಮಡುಗಮ್ಮ

ಕಟ್ಟಿದ ಕಾಣಿಕೆ ಬುಟ್ಟಂಥ ಜಂಗು ಎಲ್ಲ
ನಿಮ್ಮದೆ ಕಾಣೋ ದಾಸಯ್ಯನೋರ್‍ಯ
ಹುಟ್ಟಿದ ಮಕ್ಕ ಬಿತ್ತಿದ ಬೆಳೆ
ನಿಮ್ಮದು ಕಾಣೋ ದಾಸಯ್ಯನವರ್‍ಯ

ಸ್ವಾಲುಗರ ಮುಂದ ಜೋತಿಸವ ಎತ್ತಿಕೊಂಡು
ಬಿಚ್ಚಿ ಹೇಳಿದರು ಜಗದೊಡೆಯ
ಏಳು ಮಂದಿಗ ಕಿರಿಯವ ಆರುಮಂದಿಗ ಕಿರಿಯವ
ಅವ ಎಲ್ರಿಗೂ ಕಿರಿಯವ ಎಳೆ ಹುಡುಗಿ
ನಿನ್ನ ಹೊಟ್ಟಾಯ ಒಳಗ ಹುಟ್ಟಬೋದಮ್ಮ
ಅದು ಯಾವ ಮೂಲಕವಾಗಿ ಹುಟ್ಟದಳೊ

ಯಾವ ವರುವ ಅಂದರ ದಾಸಯ್ಯ
ನಮ್ಮ ಮನದೇವರು ಯಾವ ಕಡೆಗಿರದು ಹೇಳು ದಾಸಯ್ಯ
ಯಾವ ದಿಕ್ಕಲಿ ಇರದು ಅಂದ್ರ
ಅವ ಪುರಾಣಿಗ ತೆಕ್ಕಲಾಗಿ ತೋರಿಸ್ತಾನ

ಬೆಳ್ಳಿ ಬೆಟ್ಟದಲ್ಲಿರುವ ಬೆಳ್ಳಿ ದೇವ್ರು ನಿಮ್ಮ ಮನ ದೇವ್ರು
ಅಯ್ಯ ಅದು ತಾನೆ ನಿಜ ಎಂದಳಾಗ

ಬೆಳ್ಳಿ ಬೆಟ್ಟದಲ್ಲಿರುವ ಬಿಳಿಗಿರಿ ರಂಗಯ್ಯ
ನಮ್ಮ ಮನ ದೇವ್ರು ಅನ್ನ ನಾವು ಮರೆತಾವಯ್ಯ

ನಮಗೆ ಇಂಥ ಇದಿಗೋಳು ದೊರಕಾದ
ನೀ ಹೊಡದು ಹೇಳಯ್ಯ ನಿಜವ
ನನಗ ಮಕ್ಕಳು ಎಷ್ಟಯ್ಯ

ಹೆಣ್ಣೇಳು ಮಂದಿ ಗಂಡೇಳು ಮಂದಿ
ಎಲ್ಲಕ್ಕಿಂತ ಕಿರಿಯವ ಈ ಭಾಗ್ಯಸಾಲಿ ಹುಟ್ಟಿದ ಮ್ಯಾಲ
ನಿನ್ನ ಮನಗ ಬೊಗ ಬೊಗನ ಭಾಗ್ಯ ಬಂದಿತು
ಅವ ಹುಟ್ಟಿದ ಗಳಿಗ ಒಳ್ಳೇದಮ್ಮ

ಅವ ಯಾವ ದಿಕ್ಕಿನಲ್ಲಿ ಇದ್ದಾಳೊ ಹೇಳಿರಯ್ಯ
ನಿನ್ನ ಬಲದ ಭಾಗದಲ್ಲಿ ಇರುವಾಳೊ
ಬಲದ ಭಾಗ ಅಂದರ ಯಾವ ಭಾಗದಲ್ಲಿ ಸ್ವಾಮಿ
ಸ್ವಾಮಿ ಕೈ ನೀಟ ತೋರಿಸುತಾರ

ನನ್ನ ಮಗಳ ಸುದ್ದಿ ಹೇಳಿದ ಮ್ಯಾಲ
ಅವ ಇದ್ದಾಳೊ ಇಲ್ಲವೊ ಹೇಳಿರಯ್ಯ
ಬೆಳ್ಳಿಯ ಬೆಟ್ಟಕ ಕೈಯನ್ನ ತೋರಿದರ
ಅವ ಉಸು ನೆಗ ನಗುತಾಳ

ನಿಮ್ಮ ಮಗಳ ನಿಮಗ ತೋರಿಸಬೇಕಾದರ
ಹನುಮಂತ ರಂಗವ ಬುಡಬೇಕು
ಅದ ಮಾಡಿರಯ್ಯ ಸ್ವಾಲಿಂಗರ್ಯ
ಹನುಮಂತ ರಂಗವ ಬುಟ್ಟು ನಿಮಗ
ಜಾಟ ಮಾಟವ ಕಳಿಯಬೇಕು
ಅಲ್ಲಿಗೊಂದು ದೋಸ ಕಳಿದೋಯ್ತಾದ

ಹನುಮಂತು ರಂಗವ ಬುಡಬೇಕಂದ್ರ್ಯಲ್ಲಿ
ಅವೇನೇನು ಆಗಬೇಕು ದಾಸಯ್ಯನೋರ್ಯ

ಮಸಿಪುಡಿ ಇಟ್ಕಪುಡಿ ಆಗಬೇಕು
ರಂಗೋಲ ಪುಡಿ, ತಕ್ಕ ಹೂವು ತರಬೇಕು
ಮುತ್ತುಗದ ಹೂವ ಮೂಗುಳುವ ತಂದು
ರಂಗಕ್ಕ ನೀವು ಸುರಿಯಬೇಕು

ನಾಲ್ಕು ಮೂಲಿಗ ನಾಲ್ಕು ಬಾಳಕಂದು
ನಾಲ್ಕು ಮೂಲಿಗ ನಾಲ್ಕು ಕಬ್ಬಿನ ಜಲ್ಲ
ನಾಲ್ಕು ಮೂಲಿಗ ನಾಲ್ಕು ಕೊಂಬಿನ ತಗರು

ನಾಲ್ಕು ಮೂಲಿಗ ನಾಲ್ಕು ಕೋಳಿ ಹುಂಜ
ನಾಲ್ಕು ಮೂಲಿಗ ನಾಲ್ಕು ನಿಂಬಿಯಹಣ್ಣು
ನಾಲ್ಕು ಮೂಲಿಗ ನಾಲ್ಕು ಮೊಗಗಳ ತರಬೇಕು

ಈಭೂತಿ ಉಂಡ, ಸೂತ್ರದ ದಾರ ತರಬೇಕು
ಬೆಳಿ ಅನ್ನ, ಅರಿಸಿಣದ ಅನ್ನ, ಮಸಿಯನ್ನ ಆಗಬೇಕು

ಅಸ್ಗ ಅವ್ರು ಹೇಳಿದ ಮಾತ ಕೇಳಿ
ಮಕ್ಕಳ ಒಬ್ಬೊಬ್ಬರಾಗ ಕಳುಗುತಾಳ

ದೊಡ್ಡ ಕೊಂಡ ನೀನು ಕೊಂಬಿನ ತಗರ ತತ್ತ್ರಯ್ಯ
ಚಿಕ್ಕೊಂಡ ನೀನು ಕೋಳಿಹುಂಜಕ ಹೋಗಯ್ಯ
ಗುಂಜ ನೊರದ ಕೊಂಡು ನೀನು ಬಾಳಯ ಕಂದ ತತ್ತ್ರಯ್ಯ
ಬಲುಕೊಂಡ ನೀನು ಕಬ್ಬಿನಜಲ್ಲ ತತ್ತ್ರಹೋಗಯ್ಯ

ದೊಡ್ಡ ಕಾಡಿ ಬಾರಮ್ಮ ಇಲ್ಲಿ
ಒಲಯ ಅಸ್ಸಿ ಅಕ್ಕಿ ಹಾಕು ಹೋಗು
ಒಲೆಯನ್ನೆ ಅಸ್ಸಿಳೊ ಹೆಸರನ್ನೆ ಎತ್ತಿಳೊ
ಬಿದುರು ಅಕ್ಕಿಯ ಮುಗುಳುವ ಸುರಿದು
ಜಲಜಲನ ಬಸಿದಾಳೊ

ಚಿಕ್ಕಾಡಿ ನೀನು ಆರಿಸಿಣವ ಹರಿಯಮ್ಮ
ಗುಂಜು ನೊರದ ಕಾಡಿ ನೀನು ಮಸಿಯ ಕುಟ್ಟಮ್ಮ

ಗಾಜಿನ ಇಂಬಿಯು ಮನದ ಕೆಳಗ
ತಾರಿಸಿ ಗೂಡಿಸಿದರು ಕಾಳಿರೆಲ್ಲ
ತಾರಿಸಿ ಗೂಡಿಸಿ ಚಾಣ ಸುದ್ಧವ ಮಾಡಿದಾಗ

ಅಲ್ಲಿಗ ಇಳಿದಾರೊ ಜಗದೊಡೆಯ
ನಾಲ್ಕು ಮೂಲಿಗ ನಾಲ್ಕು ಕಬ್ಬಿನ ಜಲ್ಲ ನಿಲ್ಲಿರು ಸ್ವಾಲಿಗರು

ನಾಲ್ಕು ಮೂಲಿಗ ನಾಲ್ಕು ಬಾಳೆಯ ಕಂದ ನೆಟ್ಟುಬುಟ್ಟು
ನಾಲ್ಕು ಪಂಜನ್ನೆ ಹತ್ತಿಸುತ್ತಾರ
ನಾಲ್ಕು ಪಂಜಿನ ಬೆಳಕಲ್ಲಿ ಸಿರಿಹರಿ
ಚಿತ್ರದ ರಂಗೋಲ ಬುಡುತಾರ
ಚಿತ್ರದ ರೊಂಗೋಲಿ ಮುಂದ
ಸಿಂಹ ಭೂತವ ಬರೆದರು

ಬಾಳೆಯ ಎಲೆಯ ಹಾಸುಬುಟ್ಟು ಕಾಡಿರು
ನಾಲ್ಕು ಬಗ ಅನ್ನವ ಮಡುಗುತಾರ
ನಾಲ್ಕು ಗಜ ಬಟ್ಟೆ, ನಾಲ್ಕು ಭಾಗ ಮಾಡಿ
ಅಲ್ಲಿಗ ರಸಮುದ್ರ ಅನ್ನ ಕಟ್ಟುತಾರ

ಜಾಟಮಾಟ, ಶೂನ್ಯದ ಜಪವ ಮಡುತ
ರಸ ಮುದ್ದ ಅನ್ನ ನಾಲ್ಕು ದಿಕ್ಕಲಿ ಕಟ್ಟುತಾರ
ಸಂಬ್ರಾಣಿ ಹಾಕಿ ಹಣ್ಣು ತೆಂಗಿನಕಾಯಿ ಹೊಡದು
ಮರಿಗ ತೀರ್ಥ ಹಾಕಿ ಮರಿಯನ್ನ ಕಡಿದರು
ಕುಂಜವ ತಂದು ಇಟ್ಟುಬುಟ್ಟು
ಒಂದು ಆಲ ಆಲಿ ತುತ್ತೂರಿ ಸದ್ದು ಮಾಡಿದರ
ಸ್ವಾಲಿಗರು ಬೆದರಿ ಓಡುತಾರ

ಸ್ವಾಲಿಗರು ಬೆದರಿ ಓಡುವ ಗಳಿಗಲಿ
ಸ್ವಾಲಿಗರಿಗ ತೀರ್ಥ ಹಿಡುತಾರ
ಜಾಟಮಾಟವ ಕಳಿದಿನಿ ಸ್ವಾಲಿಗರ್‍ಯ
ಅಂಜಬೇಡಿರಯ್ಯ ಎಂದು ಬುದ್ಧಿ ಹೇಳುತಾರ

ಸ್ವಾಮಿ ಗಂಟು ಮೂಟಾಯ ಕಟ್ಟಾಗ
ಸ್ವಾಲಿಗರೆಲ್ಲ ಬಂದು ಅಡ್ಡ ಬಿದ್ದು

ಜಾಟಮಾಟವ ಕಳಿದ್ರಲ್ಲಿ ಜಗದೊಡೆಯ
ತೋರಿಸಿ ನಮ್ಮ ರಂಗಮ್ಮನ

ನಿಮ್ಮ ತಂಗಿಯ ಕಾಣಬೇಕಾದರ
ನಿಮ್ಮ ಬದುಕ ಬಾಳನ್ನೆಲ್ಲ ಬರೆಯಬೇಕು
ಬದುಕು ಬಾಳನ್ನೆಲ್ಲ ಏನೆಂದು ಬರೆಯದು ಅಂದರ
ಬಿಳಿಗಿರಿ ರಂಗಯ್ಯನಿಗ ಎಂದು ಬರೆಯಿರಿ

ನಮ್ಮ ಆಸ್ತಿ ಹಣವೆಲ್ಲ ಅವನಿಗೆ
ನಮ್ಮ ಮಕ್ಕಳ ಹೆಸರೆಲ್ಲ ಅವನಿಗೆ ಎಂದು
ತಾಮ್ರದ ಚಪ್ಪೋಡಲ್ಲಿ ಬರೆದುಬುಟ್ಟು ಸ್ವಾಲಿಗರು
ತೋರಿಸಿ ಸ್ವಾಮಿ ನಮ್ಮ ತಂಗ್ಯ

ನಿಮ್ಮ ತಂಗ್ಯ ನೀವು ಕಾಣಬೇಕಾದರ
ಬೆನ್ನಿಗ ಬುತ್ತಿಯ ಕಟ್ಟಕೊಂಡು ನನ್ನೊಂದಿಗ ಬನ್ನಿ

ಅಪ್ಪ ! ಸ್ವಾಮಿ ಹಾಗಂದ ಮಾತ ಕೇಳಿ
ಅವ್ರು ಬೆನ್ನಿಗ ಬುತ್ತಿಯು ಕಟ್ಟಕೊಂಡು
ಸ್ವಾಮಿ ಮಂದಿಗ ಹೊರಟಾರು

ಸ್ವಾಲಿಗರ ಕರಕೊಂಡು ಬರುವಾಗ ಸ್ವಾಮಿ
ಒಂದು ಗಂಧದ ವನಕ್ಕೆ ನುಕ್ಕೊಂಡು
ಒಬ್ಬ ದೊಡ್ಡ ದೊರೆ ಯಾಸವ ತಾಳಿ
ತಲಮ್ಯಾಲ ಟೋಪಾನು ಹಾಕೊಂಡು

ಹೆಗಲ ಮ್ಯಾಲ ಕೋಬಿಯು ಮಡಿಕೊಂಡು
ಸ್ವಾಲಿಗರನ್ನ ಒಬ್ಬೊಬ್ಬರಾಗ ಒದುಗಾಡಿಥರ
ಅವ್ರು ಬಾಯಿ ಬಾಯಿ ಬಡಿತಾರ

ಎಲ್ಲಿಯುವನ ಕಾಣಿ ಒಬ್ಬ ಎಡ್ಡದಾಸಯ್ಯ
ನಮ್ಮ ಪ್ರೋಡಿಗ ಬಂದು
ನಿಮ್ಮ ತಂಗಮ್ಮನ ತೋರ್ತ್ತಿನಿ ಅಂತ

ಹನುಮಂತು ರಂಗವ ಬುಟ್ಟು ಬುಟ್ಟು
ನಿಮ್ಗ ಜಾಟ ಮಾಟವ ಕಳಿದಿನಿ ಅನುತ್ತೇಳಿ
ನಮ್ಮ ಒದುಕು ಬಾಳನ್ನೆಲ್ಲ
ತಾಮ್ರದ ಚಪ್ಪೋಡಲ್ಲಿ ಬರೆಸಿಕೊಂಡು
ನಮ್ಮ ತಂಗಿಯ ನಮಗ ತೋರಿಸ್ತಿನಿ ಅಂತ
ಈ ದೊಡ್ಡ ದೊರ ಕೈಗ ಸಿಕ್ಕಿಸಿ
ನಮ್ಮ ಪ್ರಾಣ ಕಳಿತನಲ್ಲ ಎಂದು

ಅವರೊಂದೊಂದು ಕೋಬಿಗ ನುಗ್ಗ್ತಾರ
ಆ ಕೋಬ ನುಗ್ಗಿದವರಿಗ ಅಲ್ಲಿ ಮನ
ಈ ಕೋಬ ನುಗ್ಗಿದವರಿಗ ಇಲ್ಲಿ ಮನ

ಸ್ವಾಲಿಗರನ್ನೆಲ್ಲ ಒದಗಾಡು ಬುಟ್ಟು
ಬೇಗ ಬಂದಾರು ವೈಕುಂಠಕೆ ಜಗದೊಡೆಯು

ಬಂದ ಜಗದೊಡೆಯುನ ಕಂಡಳು ತೊಳಸಮ್ಮ
ಅವರ ಪಾದಪದು ಮಾಂಗವ ತೊಳದಳು

ಊಟ ಶಿವ ಪೂಜಾಯ ತೀರಿಸಿಕೊಂಡು ನಾರಾಯಣ
ಉಂಡಡಕ ಬೆಳಿಯುಲ ಕೈಯೊಳ ಹಿಡಕ್ಕಂಡು
ಮಡದಿರ ಕರೆದು ದಂಡಲಿ ಕುಂಡ್ರುಸ್ಕಂಡು
ಕೇಳ್ತೀನ್ನಿ ನೀನು ತೊಳಸಮ್ಮ

ಅಕ್ಕಿ ಉಳ್ಳ ಕುಸುಮಾಲ್ಯ ನನ್ಗ ಲಗ್ನ ಮಾಡಬೇಕು
ಲಗ್ನವ ಮಾಡಿದರ ಸರಿಹೋಯ್ತು
ನಾ ಅವಳ ಮುಟ್ಟಿ ಮುಟ್ಟಿ, ಜಕ್ಕೆಡಿಸ್ತಿನಿ ವೈಕುಂಠವ
ನೀವು ಲಗ್ನವ ಮಾಡಿರ್‍ಯೊ ಇಲ್ಲವೋ

ಜಗದೊಡೆಯ ಆಡಿದ ಮಾತ ಕೇಳಿದಳು ತೊಳಸಮ್ಮ
ಕುಟ್ಟಿಕೊಂಡಳು ಪ್ರಣಗೋಳ
ಮುಕ್ಕಳಿಲ್ಲವರು ಈ ಮಗುವ ಸಾಕಿದರ
ನಾಳ ತೌರು ಆಯ್ತಾದ ಅನುತ್ತೇಳಿ
ಈಮಾಯದ ಮಗುವ ತಂದು ಕೊಟ್ರಲ್ಲ

ಈ ಮಾಯ ನಮಗ ತಿಳಿಯನಿಲ್ಲ
ಸ್ವಾಮಿ ನೀವು ಕುಲವ ಅಳಿಯಬೇಡಿ
ನಿಮಗ ಲಗ್ನವ ಮಾಡುತಿನಿ ಎಂದು
ಅವಳು ಮೇಗದ ಗರುಡನ ಕರೆದಳು

ಸಾಲಿ ಬಣ್ಣದವನ ಸಕಲಾತಿ ಮೈಯವನ
ಈರೇಳು ಲೋಕವ ಹುಡುಕ ಗರುಡಾಳ
ನೀ ಬಾರಯ್ಯ ಇಲ್ಲಿ ಎಂದರ್ನಾಗ

ಕಾಗದ ತಕ್ಕಂಡು ಗರಗರನ ಬರದು
ಗರುಡಾಳ್ನ ಕತ್ತಿಗ ಓಲಾಯ ಕಟ್ಟಬುಟ್ಟ
ಕೈಲಾಸಕ ನೀನು ಕೊಟ್ಟು ಬಾರಯ್ಯ ಎಂದರಾಗ

ಗರುಡನ ಕತ್ತಿನ ಓಲ್ಯ ಬಿಚ್ಚಿ ಓದುತ ಈ
ಮುಕ್ಕಣ್ಣ ಜೋಜುಗವ ಮಾಡುತಾರ
ಐವರು ಮಡದಿರ ಕರೆದರು
ಗಂಗಮ್ಮ, ಗೌರಮ್ಮ, ಗಿರಿಜಮ್ಮ, ಜೋರಮ್ಮ
ಪಟ್ಟದರಸ್ತಿ ಪಾರ್ವತಿ ನೀ ಬಾರೆ

ಪಟ್ಟದರಸ್ತಿ ಪಾರ್ವತಿಯ ಕುಂದ್ರುಸ್ಕಂಡು
ಅವ್ರು ಬರದಿರುವ ಓಲಾಯ ಓದುತಾರ
ಸ್ವಾಲಿಗರ ಮಗ ಎಳಯ ಕುಸುಮಾಲ್ಯ
ನಿಮ್ಮ ಅಣ್ಣಯ್ಯ ಸಿದ್ಧರಿ ವೈಕುಂಠಕ ತಂದಿದ್ದರಂತೆ
ಅವಳ ಲಗ್ನವಾಗಬೇಕಂತ ವೈಕುಂಠದಲ್ಲಿ

ಇಲ್ನೋಡು ಹೆಣ್ಣ ಬರದಿರುವ ಕಾಗುಜುವ
ಎಲ್ಲ ಕೈಲಾಸದಿಂದ ಬರಬೇಕಂತ
ಸಣ್ಣಕ್ಕಿ ಸಾದರ ಎಣ್ಣ ಮೂಗಂಡುಗ
ಹೆಣ್ಣಿನ ಎಡಗ ಐದಿನ್ನೈದು
ಐರ್ಗಡ್ಗ, ಐರ್ ಮಿಂಚು, ಐರ್ತಾಲಿ ಸಯುುವಾಗಿ
ನಾವು ಅವ್ರ ವೈಕುಂಠಕ ಕೊಂಡ್ಹೋಗ ಬೇಕಂತ

ಬಾಳಾಯ ಕಂದು ಸೂಳರ ಮ್ಯಾಳ
ನಮ್ಮ ಸಿರಿಗಿರಿಯಿಂದ ವ್ಹಾಗಬೇಕು
ಮುಡಿಯ ಸಯುುವಾಗಿ ಮುದ್ರುಸಯುುವಾಗಿ
ಈರ್‌ಗಾಸ ಸಯುುವಾಗಿ ಹಿಮ್ಮೇಳ ತಕ್ಕಂಡು
ವೈಕುಂಠಕ ವ್ಹಾಗಬೇಕು

ಗುಂಭ ಗುಂಭಾವೆಂದು ಗುಂಭಾವೇ ಮೇಲಾಯ್ತು
ಗುಂಭದಾಗ್ನ ಕರಗ ಸಯುುವಾಗಿ
ಅವ್ರು ವೈಕುಂಠಕ ವ್ಹಾಗಬೇಕು

ಆರುವಹಾನ ಅಚ್ಚೆಳ್ಳು ಮೂರು ಬೆಟ್ಟ ಬೆಲ್ಲ
ಎಳನೀರು ಹೊಡೆದ ಹೊಂಬಾಳೆ ಸಯುವಾಗಿ
ವೈಕುಂಠಕ ವ್ಹಾಗಬೇಕು

ಉರುದ ಹೂವಿನ್ಹಾಗ ದಾರದ ಹಕ್ಕಡ್ಕ ಇಕ್ಕಂಡು
ದಾರಿಲಿ ಮಣ್ಣು ಕುಳಿಯುವನ ಗುಂಡಯ್ಯ
ಹೆಯ್ದಲ್ಲಿ ಕೊಡು ಐರುಣುವ

ಮುಕ್ಕಣ್ಣಯ್ಯ ಇಂದ್ರ ದೇವನ್ಗ ಓಲೈ ಬರೆದರು
ಗರುಡ, ಗಂಧರ್ವ, ಕಿನ್ನರ, ಕಿಂಪುರುಷ
ರಂಭ, ಊರೇಶಿರು (ಊರ್ವಶಿ) ಸಯುವಾಗಿ ಬರಬೇಕು
ನೀ ಬೆಳಿಯು ಮದ್ದಾನ ನಡಕಂಡು
ನಮ್ಮ ಜಗದ ಕೈಲಾಸಕೆ ಬರಬೇಕು

ಇನ್ನೊಂದು ಕಾಗುದುವ ನಂಜಲಗೂಡಿನ
ನಂಜುಂಡಲಿಂಗನಿಗ ಬರೆದರು

ಸ್ವಾಮೂಯಿ ಕರಕೊಂಡು, ದೇವಿರಿ ಕರಕೊಂಡು
ಆಳು ಫಲ್ಲಕ್ಕಿಯು ಮುಂದ ಸೂಳರ ಮೇಳ ತಕ್ಕಂಡು
ವೈಕುಂಠಕ ನೀನು ಬಂದೇ ಬರಬೇಕು

ಇನ್ನೊಂದು ಕಾಗುದುವ ಏಳು ಮಲಗೆ ಬರೆದರು
ಎಲ್ಲಕ್ಕೂ ದೊಡ್ಡವರು ಹೆಬ್ಬಿನವರು ನಮ್ಮ ಅಣ್ಣಯ್ಯ
ವೈಕುಂಠದೊಳಗ ವರಮುನಿ ನಾರಾಯಣ
ಸ್ವಾಲಿಗರ ಮಗಳ ಮದುವ ಅಯ್ತನ
ಸಾಲೂರು ಮಠದ ಸ್ವಾಮಿಗಳ ಕರಕೊಂಡು
ನಮ್ಮ ಬ್ಯಾಡರ ಕಣ್ಣಯ್ಯನ ಕರಕೊಂಡು
ಕುಂಠನಪುರದ ಎಂಟ್ಟಜ್ಜಿಯು ಬರಗನ ತಕ್ಕೊಂಡು
ಅಣ್ಣಯ್ಯ ಬ್ಯಾಗನ ಬರಬೇಕು

ಇನ್ನೊಂದು ಓಲಾಯು ಕಲ್ಯಾಣಕ ಬರೆದರು
ಬಸವಯ್ಯ ಕಲ್ಯಾಣದೊಳಗಿನ ಲಿಂಗ ಜಂಗಮರ ಕರ್ಕೊಂಡು
ನೀಲಮ್ಮ ತಾಯಿ ಸಯುವಾಗಿ
ವೈಕುಂಠಕ ಬರಬೇಕು

ಮತ್ತೊಂದು ಓಲ್ಯ ಯಾರಿಗೆ ಬರದರು
ಅವ್ರು ಧರಗೆ ದೊಡ್ಡವರಿಗ ಬರದರು
ಧರಗ ದೊಡ್ಡವರು, ಈರೇಳು ಲೋಕಕ ದೊಡ್ಡವರ್ಯ
ಸಿದ್ದಪ್ಪಾಜಿ ನೀವು ಮಡದಿ ಮಲ್ಲಾಜಮ್ಮನ ಸಯುವಾಗಿ
ನಮ್ಮ ರಾಚುರಾಯ್ರು, ಅವರ ಮಡದಿ ದೊಡ್ಡಮ್ಮ ತಾಯಿ ಸಯುವಾಗಿ
ನೀವು ವೈಕುಂಠಕ ಬರಬೇಕು

ದ್ವಾರಕಿಯ ಕಿಷ್ಣದೇವನಿಗೊಂದು ಓಲ್ಯ ಬರೆದರು
ದೇವಮಾನ್ಯರೆಲ್ಲ ಬರೆದ ಓಲಯ ನೋಡಿಕೊಂಡು
ಅವ್ರೆಲ್ಲ ಜಗದ ಕೈಲಾಸಕ ಬರುತಾರ

ಹಳ್ಳಿ ಹಳ್ಳಿಲಿ ಇರುವ ವಾಜರ ಕರೆಸಿ
ಕಡ ಬಾಗಲಲ್ಲಿ ಇರಿಸಿದರು
ಅವರ್ಗ ತೂಕದ ಚಿನ್ನ ಕೊಟ್ಟರು ಜಗದೀಸ್ಪರ
ಅವ್ರು ವಾಲ ಮಾಡಿಸಿದರು ಬೆಳಕಲಿ

ಮೂಗೂರು ಅಕ್ಕಸಾಲ ಮೂಗಿನೊಳಗ ಮೊಕ್ಷಾಲ
ಅವ್ರು ಮೂಗುತಿ ಮಾಡಿದರು ಬೆಳಕಲಿ

ಅಕ್ಕೂರ ಅಕ್ಕಸಾಲ ಒಕ್ಕಿನೊಳಗ ಮೊಕ್ಷಾಸು
ವಾಲೆ ಮಾಡಿದರು ಬೆಳಕಲ್ಲಿ

ತಾಯೂರ ಅಕ್ಕಸಾಲ ದಯದೊಳಗ ಇಕ್ಷಾಲ
ತಾಲಿ ಮಾಡಿದರು ಬೆಳಕಲ್ಲಿ

ಒಡವ ಬಂಗಾರವ ಮಾಡಾಗ ಕೈಲಾಸದಲ್ಲಿ
ಎಳುದೂರಿಂದ ಬಂದೊ ಬಾಳಕಂದು
ಬೆಂಗಳೂರ ಬೆಳಿಯಲ, ಮೈಸೂರ ಕಳಿ ಅಡಕೆ
ಹೊತ್ತಿ ಬಂದಾರು ಕೈಲಾಸಕೆ

ಕೈಲಾಸದಲ್ಲಿ ಎಲ್ಲರೂ ಸೇರಿರು
ಸುರುಮೂನ್ನೂರು ಕೋಟಿ ಶಿವಶರಣರು ಸಯುವಾಗಿ
ಮೊದು ಮಡಿಯ ಉಟ್ಕೊಂಡು ಮುನುಗಳು
ವೈಕುಂಠಕೆ ಸ್ವಾಮಿ ಸಿದ್ಧವಾದ್ರು

ಮಲ್ಲಯ್ಯನ ಶಿವದಂಡು ವೈಕುಂಠಕೆ ಹೋಗಾಗ
ಕೆಂದೂಳು ಕವಿದು ಮುಗಿಲೇರಿ
ಅವ್ರು ವೈಕುಂಠದಲ್ಲಿ ನಿಂದರಲ್ಲ

ವೈಕುಂಠದೊಳಗ ನಿತ್ಕಂಡು ಜಗದೊಡೆಯ
ಅವ್ರು ಕಮರಿಯ ಮ್ಯಾಲ ನಿಂದರಾಗ
ಕಮರಿಯಹಿಂದ ದೊಡ್ಡ ಸಂಪಿಗ ಮರದಲ್ಲಿ ಕೂತ್ಕಂಡು
ಅವ ಕೈಲಾಸದಿಂದ ಬರುವವರ ನೋಡುತ್ತಾನ

ಸಂಪಿಗ ಮರವ ಬುಟ್ಬು ಗುಡುಗುಡನ ಓಡಿಬಂದು
ಎಳೆಯ ತೊಳಸಮ್ಮನ ಕರದು ನಾರಾಯಣ
ಅಲ್ನೋಡು ಹೆಣ್ಣು ಕೈಲಾಸದಲ್ಲಿ ಬರುವ ವಿಸ್ತಾರವ

ಬಂದ ಮುನುಗಳ ಕಂಡಾಳು ಲಕ್ಷ್ಮಿದೇವಿ
ಕೈಯೆತ್ತಿ ಮುಗಿದಾಳು

ತುಂಬಿದ ಬಿಂದುಗಲಿ ಪನ್ನೀರ ಆಗ್ನಿತುಂಬಿ
ಸುರಮುನ್ನೂರು ಕೋಟಿ ಶಿವಶರಣರ
ಪಾದಕ ಎರೆದುಬುಟ್ಟು
ವೈಕುಂಠಕ ನೀವು ದಯಾಮಾಡಿ

ಬಂದ ಮುನುಗಳ ಕಂಡು ತೊಳಸಮ್ಮ
ಒಂದು ಬಣ್ಣದ ಮಂದಲಿಗ ಹರಡಿದಳು
ಬಣ್ಣದ ಮಂದಲಿಗ ಕೂತುಕೊಂಡು ಮುನಿಗಳು
ನಾರದ ಮುನಿಯ ಕರೆಸಿ
ಭೂಸುರೋತ್ಮರು, ಅಖಂಡ ಮಾ ಋಷಿಗಳು ಸಯಮವಾಗಿ
ಮಾಲ ಮಂಟಪಕ ತೆರಳೀರೊ
ಅಲ್ಲಿ ನಾರಾಯಣಸ್ವಾಮಿಗ ಲಗ್ನ ಕಟ್ಟಿಸಿದರು

ನಮ್ಮ ಸ್ವಾಮಿ ಮದುವೀಗ
ಭೂಮಿ ಚಪ್ಪರವಾದ್ದೊ, ಗಾಳಿಯಲ್ಲಿ ಅಂಜರದಗಳು ಬೀಸಿ
ಸ್ವಾಮಿಗ ಮದುವ ಸನುವಾರ ಅಂದರು

ಸ್ವಾಲಿಗರಿಗೆ ಓಲ್ಯ ಬರೆದರು
ತಪ್ಪಿದ ಮಗ ಸಿಕ್ಯಾಳೆ ವೈಕುಂಠಕದಲ್ಲಿ
ನಾಳೆ ಮದುವಿಗೆ ಬರಬೇಕು

ವೈಕುಂಠದ ಓಲ್ಯ ಬೊಮ್ಮಗೌಡನ ಹೆಂಡತಿ
ಕೈಯೊಳಗೆ ಹಿಡಕೊಂಡು
ದೊಡ್ಡಕೊಂಡ ನೀ ಬಾರೊ, ಚಿಕ್ಕೊಂಡ ನೀ ಬಾರೊ
ಗುಂಜವೊರದಕೊಂಡ, ಬಲುಕೊಂಡ ನೀ ಬಾರೊ
ನನ್ನ ಭಾಗ್ಯದ ಸಾಲ ವೈಕುಂಠದಲ್ಲಿ ಸಿಕ್ಯಾಳಂತ
ನಾಳೆ ಲಗ್ನಾವು ಕಾಣಿರಯ್ಯ

ಅಮ್ಮ ದೊಡ್ಡಕಾಡಿ ಚಿಕ್ಕಾಡಿ ನೀವೆಲ್ಲ ಸಿಂಗಾರವಾಗಿ
ಹಳದಿಯ ಸೀರ್ಯ ಅವ್ರು ಯಾಗ್ಯಾಗ ಉಟ್ಯಾರು
ಹಿಂದು ಮುಂದನಾಗ ಉಡುತಾರ

ಕಕ್ಕಮಣಿ ಕುಕ್ಕಮಣಿ ಕತ್ತುತುಂಬ ಹಾಕ್ಕೊಂಡು
ಬಿಟ್ಟಳ್ಳ ಎಣ್ಣಿ ತಲತುಂಬ ಹಾಕ್ಕೊಂಡು
ಬಾಚಿ ಬೈತಲ ತಗದು ಕೀಚಿ ಎಣಗಂಟೊಡಿ
ಎಡದಲ್ಲಿ ಹುಚ್ಚೆಳ್ಳು ಹೂವ, ಬಲದಲ್ಲಿ ಗಣಗಲ ಹೂವು
ನೆತ್ತಿ ಮ್ಯಾಲ ಮಡಿದವರೆ ಎಕ್ಕದ ಹೂವ
ಬಂಡಿಯರೆಯ ಅಡ್ಡಪ್ಪ ಇಕ್ಕಂಡು ಕಾಡಿರು
ಬಂಡಿಗೂ ಮುಂದ ಮುಂದಾಗಿ ಬರುತಾರ

ಬೂದು ಬಾಳ, ಏಲಕ್ಕಿ ಬಾಳ ಸಾವ್ರರ ಕಿತ್ತು
ಬಂಡಿಯ ಮ್ಯಾಲ ಏರುತಾರ
ತಲಗೊಂದು ಗೂಡ ಮೆಕ್ಕಹಣ್ಣ ಹೊತ್ಕೊಂಡು
ಸ್ವಾಲಿಗರು ವೈಕುಂಠಕ ಒಡನೆ ಬರುತಾರ

ಇಂದು ನಾರಾಯಣನಿಗ ಮೊದಲ ನೀರು ಅಂತ್ಹೇಳಿ
ಸಂಜೆಗೆ ನೀರು ಹಾಕುತಾರ

ಹತ್ತು ತೆಪ್ಪಲ ನೀರು ಉಕ್ಕುರಿಸಿ ಕಾದವೆ
ಪಚ್ಚ ತೆನೆಯಲ್ಲಿ ಗಮಗರದು ಕಾದ ನೀರ
ಎರದರು ನಾರಾಯಣ ಸಿರ ಮುಡಿಗ

ಆರು ತಪ್ಪಲ ನೀರು ಅವಗ್ಗ ಹೋರಾಡಿ ಕಾದದವ
ಗಂಧಬುಟ್ಟು ಗಮಗರದು ಕಾದ ನೀರ
ಎರೆದರು ಸ್ವಾಲಿಗರ ಮಗಳಿಗ

ಹತ್ತು ಕೊಂಬಿನ ಅರಿಸಿನವ ಎತ್ತಿ ಬಟ್ಟಲಿಗ ತುಂಬಿ
ನಮ್ಮ ಗೋಪಸಿಯರ ಕೈಲಿ ಅದಗೂಡಿದ ಅರಿಸಿನವ
ಎರೆದರು ನಾರಾಯಣನ ಸಿರಿ ಮುಡಿಗ

ಆರು ಕೊಂಬಿನ ಆರಿಸಿಣನವ ಎತ್ತಿ ಬಟ್ಟಲಿಗ ತುಂಬಿ
ಸಿಸ್ರರ ಕೈಲಿ ಅದಗೂಡಿದ ಅರಿಸಿಣವ
ಎರೆದರು ಸ್ವಾಲಿಗರ ಮಗಳಿಗ

ಆರೆಣ್ಣ ತೂಕಿಣ್ಣ ಆರುಮಾನ ಒಳ್ಳೆಣ್ಣ
ನಮ್ಮ ನಾರಿರ ಕೈಯು ಉಗುರೆಣ್ಣ ತಕ್ಕಂಡು
ಎರೆದರು ನಾರಾಯಣನ ಸಿರಮುಡಿಗ

ಆರುಮಾನ ಅಚ್ಚೆಳ್ಳೆಣ್ಣ ಮೂರುಮಾನ ಒಳ್ಳೆಣ್ಣ
ಮುತ್ತೈದರ ಕೈಯಿನ ಉಗುರೆಣ್ಣ ತಕ್ಕಂಡು
ಎರೆದರು ಸ್ವಾಲಿಗರ ಮಗಳಿಗ

ಎಣ್ಣ ಒತ್ತವರು ಚೆನ್ನಾಗಿ ಒತ್ತಿರಮ್ಮ
ಪುಣ್ಯವಂತರು ಪಡೆದ ಮಗನಿಗ
ಚೆನ್ನಾಗಿ ಬರಲಿ ಉಗುರೆಣ್ಣ

ಅರಸಿಣ ಒತ್ತವರು ಚೆನ್ನಾಗಿ ಒತ್ತಿರಮ್ಮ
ನಮ್ಮ ದ್ಯಸವಂತರು ಪಡೆದ ಸ್ವಾಲಿಗರ ಮಗಳಿಗ
ಅಸನಾಗಿ ಬರಲಿ ಉಗುರೆಣ್ಣ

ಆರು ತಪ್ಪಲ ನೀರು ಹೋರಾಡಿ ಕಾದದ
ಗಂಧ ಬುಟ್ಟು ಗಮಗರದು ಕಾದನೀರ
ಎರೆದರು ನಾರಾಯಣನ ಸಿರಮುಡಿಗ

ಗುಂಭಾದ ನೀರು ಗುಳುಗುಳನ ಕಾದದ
ಮುಡುವಾಳ ಹಾಕಿ ಗಮಗರದು ಕಾದ ನೀರ
ಎರೆದರು ಸ್ವಾಲಿಗರ ಮಗಳಿಗ

ಇಂದು ನಮ್ಮ ಚಂತ್ರಿದಾರಿ ವಿೂದ ನೀರು
ಅಂದುಲುವ ದಾಟೆ, ಹೊಳದಾಟೆ
ಸಮುದ್ರದಾಟೆ, ಇಂಬಿ ಓಲಾಡಿ ಬೆಳೆದಾವೊ

ಇಂದು ಕುಸುಮಾಲ ವೈಕುಂಠದಲ್ಲಿ ವಿೂದ ನೀರು
ಬಾಗಲದಾಟೆ, ಹೊಳದಾಟೆ, ಸಮುದ್ರದಾಟೆ
ಬಾಳ ಓಲಾಡಿ ಬೆಳೆದಾವೊ

ಎಪ್ಪತ್ತು ವರದ ಹಳದಿಯ ಪಾಗ
ವರಮುನಿ ನಾರಾಯಣನಿಗ ಉಡುಸೀರು
ನಿಟ್ಟೆಯ ಕಪ್ಪು ಸೀಲಿಯ ನಾಮ
ಜಗದೊಡೆಯನಿಗ ಧರಿಸಿ
ಅವ್ರು ತರಬರನ ಕ್ವಾರ ಕಿರಿದಾರು

ನಮ್ಮ ದಾಸಯ್ಯ ನೇದ ದಸಣಿಯ ಪಟ್ಟಾಯವ
ನಮ್ಮ ಸ್ವಾಲಿಗರ ಮಗಳಿಗ ಉಡುಸೀರು
ಹವಳ ಹವಳದ ರೇಖ

ಹವಳದಲಿ ಕುಚುರೇಖ
ಹಣೆಗ ಬುಟ್ವಾರು ಅಪರಂಜಿ ಕುಚುರೇಖ
ಚಂತ್ರಿ ನಾರಾಯಣನ ಮಡದಿಗ

ಮುತ್ತು ಮುತ್ತಿನ ರೇಖ ಮುತ್ತಿನಲ್ಲಿ ಕುಚುರೇಖ
ನೆತ್ತಿಗ ಬುಟ್ವಾರು ಅಪರಂಜಿ ಕುಂದುದುವ
ಚಂತ್ರಿ ನಾರಾಯಣನ ಮಡದೀಗ

ಚಿನ್ನ ಚಿನ್ನದ ರೇಖ ಚಿನ್ನದಲ್ಲಿ ಕುಚುರೇಖ
ಕೆನ್ನಿಗ ಬುಟ್ವಾರು ಅಪರಂಜಿ ಕುಂದುನುವ
ಸಿದ್ಧರಿ ನಾರಾಯಣನ ಮಡದೀಗ

ಇಬ್ಬರ ಸುಂಗಾರ ಆಗಿತು ವೈಕುಂಠದಲ್ಲಿ
ಅವ್ರ ಮಣೆಯ ಮ್ಯಾಲ ನಿಲ್ಲಿಸಿಬುಟ್ಟು
ಅಕ್ಕಿ ಸಾಸ್ತ್ರುವ ಮಾಡುತಾರ

ಹತ್ತು ಎಲೆ, ಹತ್ತು ಅಡಕ ಹತ್ತು ಬೆರಳಲ್ಲಿ ಕೊಟ್ಟು
ನಾರಾಯಣ ಹೆತ್ತೈದು ಬಳಸ ತಿರುಗಾಗ
ಅವ್ರು ಚಿನ್ನಾದ ವಂಕಿ ಜಲಿರೆಂದೊ

ಹವಳದ ಬಟ್ಟಲಿಗ ಹರದಿರು ಅಕ್ಕಿ ತುಂಬಿ
ಆದಿನಾರಾಯಣನಿಗ ಕೈಸೆರೆಯ ಹಿಡಿಯುತ
ಸಾಸಾ ಸುರಿದರು ಜಗದೊಡೆಯನಿಗ

ಚಿನ್ನದ ಬಟ್ಟಲಿಗ ನಮ್ಮ ಚೆನ್ನಿಯ ಅಕ್ಕಿ ತುಂಬಿ
ಚೆಂದಿ ಸ್ವಾಲಿಗನ ಮಗಳು ಕುಸುಮಾಲಿಗ
ಸಾಸಾ ಸುರಿದಾರು ಜಗದಲ್ಲಿ

ಸಾಸಾ ಸುರಿದು ಮಂಗಳಾರತಿ ಮಾಡಿಬುಟ್ಟು
ಗಂಧದ ಮಳಿಗ ಬರುತಾರ

ಗಂಧದ ಮಳುಗಲ್ಲಿ ನಡುಮನ ಸಾಲಲ್ಲಿ
ನಂದ ದೀವಿಗ ಬೆಳಕಲ್ಲಿ

ಮೂಡಲ ನಾಡಿನಿಂದ ಮುತ್ತಿನ ಮೂ ಬಂದೊ
ಮುಂಗೈ ಸೋಕಿದರ ಗುಲುರಂದ । ಹಸಮಣೆಯ
ಮುತ್ತೈದರು ತಂದು ಇರುಸ್ಯಾರು

ಕಂಚು ಕಲಕಿವು ಬೆರಳಲ್ಲಿ ರಂಜಿಸಿ
ಪಂಚೈದು ಮೊಕದ ಚಿನ್ನಾದ ಕಳಸವ
ಮುತ್ತೈದರು ತಂದು ಇರಿಸ್ಯವಮ್ಮ

ಹಾಲು ಹಳ್ಳದ ನೀರು ಹರಿದು ಬರುವದು ಪನ್ನೀರು
ನಮ್ಮ ಜಗದೊಡೆಯ ನಾರಾಯಣನ ಕಳಸಕ
ಮುತ್ತೈದರು ತಂದು ಎರದಾರು

ಹಿತ್ತಲಲ್ಲಿ ಬೆಳೆಯದು ಹತ್ತಳ್ಳು
ಹೊಲದಲ್ಲಿ ಬೆಳೆಯದು ರಾಗಿ
ಬಯಲಲ್ಲಿ ಬೆಳೆಯದು ನವಧಾನ್ಯವ ಬೆರಸಿ
ತಂದರು ಜಗದೊಡೆಯನ ಕಳಸಕ

ಭೂಮಿಲಿ ಹುಟ್ಟದು ಮೇಗದಲ್ಲಿ ಬೆಳೆಯದು
ಈಶಾನ್ಯಕ ಇಳೀಯು ಇಳ್ಯಾದ ಎಲಯು
ತಂದ್ರು ಜಗದೊಡೆಯನ ಕಳಸಕ

ಸಣ್ಣಾಗಿಡುವಿಗ ಗಿಣ್ಣೈದು ಎಸಳೈದು
ಬಿಣ್ಣಸಿ ನೆಗೆಯು ದುಂಡು ಮಲ್ಲೀಗ ಹೂವು
ತಂದರು ಜಗದೊಡೆಯನ ಕಳಸಕ

ಮಣೆಯು ಪೂಜೆಗ ಮನ್ನರಾಯ್ರು ಬಂದ್ರು
ಅವ್ರು ಮಾರುದ್ದ ರುದ್ರಾಕ್ಷಿಯು ಜಪಿಸೀರು ಗುರುಸ್ವಾಮಿ
ಅವ್ರು ಮಣೆಯು ಪೂಜೆಗ ಇಳಿದರು

ಹಸೆಯು ಪೂಜೆಗ ದಸರಥರಾಯ್ರು ಬಂದ್ರು
ಜಗದುದ್ದ ರುದ್ರಾಕ್ಷಿಯು ಜಪಿಸೀರು
ಹಸೆಯು ಪೂಜೆಗ ಇಳುದ್ರು ಗುರುಸ್ವಾಮಿ

ಎರಡು ತಟ್ಟೆ ತಂದು ಈಸ್ವರ
ಎಡಕ್ಕೊಂದು ಬಲಕ್ಕೊಂದು ಮಡಗಿದ
ಹಣ್ಣು ತೆಂಗಿನ ಕಾಯಿ ಚಿಪ್ಪಿನ ಬಾಳಹಣ್ಣು
ಅಚ್ಚಿನ ಬೆಲ್ಲ ಮಡುಗೀರು

ಹಸೆಯು ಮುಂದ ಕೂತಾರಲ್ಲ ಜಗದೊಡೆಯ
ಅವ್ರ ಕೈಯನ್ನೆ ಹಿಡಿದರು ಗುರುಸ್ವಾಮಿ
ಹಣ್ಣನ್ನೇ ಇಡುಸೀರೊ ಕಾಯನ್ನೇ ಕೊಟ್ಟಾರು
ಅಚ್ಚಿನ ಬೆಲ್ಲ ಮಡಗೀರೊ

ಅಚ್ಚಿನ ಬೆಲ್ಲ ಮಡುಗುಬುಟ್ಟು
ನಾರಾಯಣನ ಕೈಗ ಇಂಬಿಯು ಹಣ್ಣ ಮಡುಗುತಾರ
ಇಂಬಿಯು ಹಣ್ಣ ಇಡಿಸಿ ಗುರುಸ್ವಾಮಿ
ಅವ್ರು ಸೂತುರ್‌ದ ಎಳೆಯು ಕಟ್ಟುತಾರ

ಸೂತ್ರುದ ಎಳೆಯು ಕಟ್ಟುಬುಟ್ಟು
ಅವನ್ಗ ಸಾಸ್ತ್ರಾವ ಆಗ ಮಾಡುತಾರ
ಸಾಸ್ತ್ರಾವ ಮಾಡುವಾಗ ನಾರಾಯಣನಿಗ
ಸೂತ್ರದಲ್ಲಿ ಎಳಗಲಿರಿಂದೊ ಗುರುಸ್ವಾಮಿ

ಅವ್ರು ಕೈಯು ಇಳುಕಿ ಮಡುಗ್ಬುಟ್ಟಿ
ಅವನ ಕೈಯನ್ನೆ ಗುರುಸ್ವಾಮಿ ಹಿಡಿದಾರು
ಅಂಗೈಯ ಸ್ವಾಮಿ ಹಿಡಕೊಂಡು
ಅಲ್ಲಿಗ ಅಕ್ಷತ ಗಂಧ ಬರಿದಾರು
ಅಲ್ಲಿಗ ಅಕ್ಷತ ಗಂಧ ಬರಿದು ಗುರುಸ್ವಾಮಿ
ಗಂಧದ ಕಡ್ಡಿಯು ಹಸ್ಸಿ ಇಡಿದಾರು

ಚಿನ್ನದ ಉಂಗುರುವ ಕೈಯೊಳಗ ಹಿಡಕೊಂಡು
ಅವ್ರು ಒಂದೆಲ್ಲಿಯು ಕೈಯೊಳಗ ಹಿಡಕೊಂಡು
ಹರಸಿ ಮಂತ್ರುವ ಹೇಳಿತ ಗುರುಸ್ವಾಮಿ
ಆ ಇಳ್ಯಾದ ಎಲಿಗ ಕಪ್ಪು ಈಭೂತಿ ಬಟ್ಟು
ಅವ್ರು ಅರಿಸಿಣದ ಬಟ್ಟು ತರುತಾರ

ಅರಿಸಿಣನ ಬಟ್ಟ ಹಿಡಕಂಡು ಏನಂದ್ರು
ಕಂಕಣದಾರಿಗ ಕಾವಿಯು ಬಟ್ಟೆಯು ಕೇಳಿದರು
ಕಾವಿಯುಬಟ್ಟೆ ಇದಲ್ಲ ಕಾಗಿರಯ್ಯ
ಕಂಕಣಕ ಅರಿಸಿಣದ ಬಟ್ಟಬೇಕು

ಕುರಿಯು ನೂಲಲ್ಲಿ ನರವುದ್ರು ಕಂಕಣವ
ಜಗದ ಒಡೆಯನು ಗತಿಯೆಂದು
ಜಗದ ಒಡೆಯ ನಾರಾಯಣನು ಗತಿಯೆಂದು
ಹರಸಿ ಕಟ್ಟುದ್ರು ಕಂಕಣಾವ

ಪಟ್ಟನೂಲಲ್ಲಿ ಮುಟ್ಟಿದರಲ್ಲ ಕಂಕಣವ
ವೈಕುಂಠಸ್ವಾಮಿ ಗತಿಯೆಂದು ಗುರುಸ್ವಾಮಿ
ಅವ್ರು ಹರಸಿ ಕಟ್ಟಿದರು ಕಂಕಣವ

ಚಿನ್ನದ ಉಂಗುರುಕೆ ಜಪಿಸಿದ್ರಲ್ಲ ಮಂತುರುವ
ಶಿವನು ನಾರಾಯಣ ಗತಿಯೆಂದು ಗುರುಸ್ವಾಮಿ
ಮುಟ್ಟಿಕಟ್ಟಿದರು ನಾರಾಯಣನಿಗೆ

ಅಯ್ಯ ಕಂಕಣದ ಕಟ್ಟದ ಇಲ್ಲಿ ಹಾಲು ಎರಿಬುಕ್ನಿರಯ್ಯ
ನೂರು ಮುನ್ನೂರು ಕೋಟಿ ಶರಣರೆಲ್ಲಬಂದು
ಮೂರು ಕಣ್ಣಯ್ಯ ಪಟ್ಟದ ಪಾರುವತಿ ಸಯುವಾಗಿ ಎರದರು
ಹಾಲುತುಪ್ಪದ ಅವ್ರು ಐವರು ಮಡದಿರ ಸಯುವಾಗಿ ಎರದರು

ವಿಕ್ಕನಾದವರ ಕರೆಯಿಸಿ ಅಂದರ
ಸ್ವಾಲಿಗರು ಓಡಿಬರುತಾರ
ಬರುವ ಸ್ವಾಲಿಗರ ಕಂಡಾರು ಜಗದೊಡೆಯ
ಹಿಂದಾಕ ತಿರುಗಿ ಹೋಗಿ ಎಂದಾರು
ಹಿಂದಕ ಎಲ್ಲಿಗ ಪ್ಹಾದರಿ ಅಂದರ
ತೇರಿನ ಬೀದಿಲಿ ಕೂತಿರಿ

ಕಂಕಣದಾರಣ ವೈಕುಂಠದಲ್ಲಿ ಆಯಿತಲ್ಲ
ತತ್ತರಿ ಇನ್ನು ಚೆಲುಚಪ್ಪರವ
ಚೆಲುಚಪ್ಪರದ ಮುಂದ ದಾಳದಾಬಾಣ ನಡಿಪಾವು

ದೇವರ ಗಡಿಗೆಯು ಚಂತ್ರಿಯ ಕೈಯಲ್ಲಿ ಕೊಟ್ಟು
ಅವನ ಅದ್ದಾಯದಲ್ಲಿ ಸಿಂತರ ಹತ್ತುಮಂದಿ ಜುಷುಗಳು
ಅನ್ನ ನಂದಿಗ ಕರಕಂಡು ಬರಬೇಕು

ಮಡುವಾಳ ಮಾಚಯ್ಯನ ಏಳುಮಂದಿ ಗಂಡುಮಕ್ಕ
ನಡಮುಡಿಯ ಬುಟ್ಟಿಕಂಡು ಬರುತಾರ
ಮಡುವಾಳ ಮಾಚಯ್ಯಗ ಏಳುಮಂದಿ ಸೊಸರು
ಪಂಜು ದೀವಟಿಗೆಯ ಹಿಡಕಂಡು ಬರುತಾರ

ಆನಮ್ಯಾಲ ಅಂಬಾರಿ ಒಂಟಮ್ಯಾಲ ಡೆಮ್ಮಾಯ
ಕುದುರಯಾ ಮ್ಯಾಲ ಕೊಂಬಿನ ತಾಳ
ಎಡಚೋರಿಯವರಿಗೆ ನಂದಿದಾಳ

ಎಡಚೋರಿ ನಂದಿದಾಳ ಬಲಚೋರಿ
ಸೂಳರ ಮ್ಯಾಳ ತಕ್ಕಂಡು
ಅವರ್ಗ ನವಿಪತ್ತು ನಗಾರಿ ಕನ್ನಗಾಣ ಮನ್ನಗಾಣ
ಅವರ್ಗ ಹಗಲು ಬತ್ತಿ ಬಾಣುಗಾರಿಕ
ಜಗಂಜ್ಯೋತಿ ಮಕಾವು ಊಬತ್ತಿ ಬಾಣ
ಉದುರುಬಾಣ ಉರಿಯಾಗ
ಅದು ನೋಡುವವರಿಗ ಅಳುವಲ್ಲ

ಸುರು ಮುನ್ನೂರಿ ಕೋಟಿ ಸಯುವಾಗಿ
ನನ್ನ ಜಗದ ಕೈಲಾಸದಲ್ಲಿರುವವರು
ಗಂಗಮ್ಮ, ಗೌರಮ್ಮ, ಗಿರಿಜಮ್ಮ, ಚೋರಾಮ್ಮ

ಪಟ್ಟದ ಅರಸಿ ಪಾರ್ವತಿ ತಾಯಿ
ದೇವುರು ಗಡಿಗೆಯು ಹೊತ್ತಳಲ್ಲ

ಅಲಂಕಾರದಲ್ಲಿ ಐಸ್ವರ್ರ್ಯದಲ್ಲಿ
ಇಳಿದಾರು ಅವ್ರು ಕಲ್ಯಾಣಿ ಕೊಳಾಕೆ
ಕಲ್ಯಾಣಿ ಕೊಳದಲ್ಲಿ ಇಳಿದಾರು ಮುನುಗಳು

ಧಾನ್ಯವ ಕಟ್ಕತಾರ
ಧಾನ್ಯವ ಕಟ್ಕಬುಟ್ಕ
ಸಾಸ್ತ್ರ ಮಾಡಿರು ಗುಂಭಕ್ಕೆನ್ನು
ಸಾಸ್ತ್ರವ ಮಾಡಗ ತಿರುಗಿ ನೋಡಿದ್ರ

ಹಂತಕೆ ನೀರ ಎರಚುಬುಟ್ಕು
ದೇವರು ಗಡುಗ ಮಡಗೀರೊ

ದ್ಯಾವರ ಗುಂಭಕ ಅಗ್ನಿಯು ತುಂಬಿ ಮಡಗಿಬುಟ್ಕು
ಅಲ್ಲಿಗ ಅರಿಸಿಣದ ಎಳಯು ಮುಂದ ಬುಡುತಾರ
ಅರಿಸಿಣದ ಎಳಯು ಮುಂದ ಐದು ಬಗೆಯು

ಮರತು ಬಂದಾರು ಹೊಡದ ಒಂಬಾಳಯು
ಚಿಟ್ಟನ ಬೆಲ್ಲ ಚಿಪ್ಪಿನಬೆಲ್ಲ ಹೊಡದ ಒಂಬಾಳ
ತಕ್ಕಂಡು ಬಂದು ಜಗದೀಸ್ವರನಿಗ ಕೊಟ್ಟರು
ಪೂಜಿಗ ನಿಂದಾರ ಜಗದೀಸ್ವರ

ಹೊಡದ ಹೊಂಬಾಳ ತೆಂಗಿನಕಾಯಿ ಎರಡು ಹೋಳು ಆದವು
ಗುಂಭಾಕ ಒಂದು ಕೈಚೆಂಬಿಗ ಒಂದೆಂದು
ಆಗ ಎತ್ತಿ ಮಡುಗಿದರು.

ಕಾಯಿ ಮುಂದಕ ಹೊಡದೊಂಬಾಳ ತಂದು
ಕತ್ತರಿಸಿ ಚಿತ್ರೈಸಿ ಚಿತ್ತರಿಸುತಾರ
ಕತ್ತರಿಸಿ ಚಿತ್ತರಿಸುವಾಗ ವೈಕುಂಠವೆಲ್ಲ ಹಗಲಾದೊ

ಅಯ್ಯ ಇಕ್ಕೇರಿ ಹೊರುವ ಹೊರಗುಂಭವ
ಹಣವ ಒಂದಕಬುಟ್ಟು ಅಡ್ವ ಒಂದಕಬುಟ್ಟು
ದುಡ್ಡು ಕಾಣಿಕೆಯು ಒಂದಕ ಬುಟ್ಟು ಬುಟ್ಟು

ಅಯ್ಯ ಚಿತ್ತೈಸಿ ದೇವುರು ಗಡುಗಾಯ
ನಿಮ್ಮ ಪಾದಪವುಮಾಂಗವ ತೊಳಿರಯ್ಯ

ಪಾದಪದು ಮಾಂಗವ ತೊಳಕೊಂಡು
ಹರಸಿಕೈಯೆತ್ತಿ ಮುಗಿದಾರು
ಹರಸಿ ಕೈಯೆತ್ತಿ ವೈಕುಂಠಕ ಮುಗಿದ್ಬುಟ್ಟು
ದೇವರ ಗಡಿಗೆಯ ಈಸೆಕಂಡ್ರು
ದೇವರ ಗಡಿಗೆಯ ನಾರಾಯಣನಿಗಕೊಟ್ಟುಬುಟ್ಟು
ಪಟ್ಟದ ಅರಸ್ಡಿ ಪಾರ್ವತಿ ನೆತ್ತಿವ್ಯಾಲ ಎತ್ತಿಮಡಗಿದರು
ಪಟ್ಟದ ಅರಸ್ಡಿ ಪಾರ್ವತಿ ನೆತ್ತಿವ್ಯಾಲ ಹೊತ್ತುಕೊಂಡು
ಹಂತಪ ವ್ಯಾಲ ನಿಂದಳಲ್ಲ
ಮಿಕ್ಕಾದ ಗುಂಭವಯಾರಮ್ಮ ಹೊತ್ತವರು
ಸಣ್ಣ ಎಳಿಯ ಮಡದಿ ತೊಳಸಮ್ಮ
ಕನ್ನಡಿ ಕಳಸವ ಲಕ್ಷ್ಮಿದೇವಿ ಹಿಡಕೊಂಡು
ಅವ್ರು ಹಂತಾವ ಹತ್ತಿ ಬರುತಾರ
ಅವ್ರು ಹಂತಾವ ಹತ್ತಿ ಬರುವಂತ ಕಾಲದಲ್ಲಿ
ಅವ್ರು ಚೆಲು ಚಪ್ಪರದ ಕೆಳಗ ನಿಂದರಲ್ಲ
ಚೆಲು ಚಪ್ಪರದ ಕೆಳಗ ನಿತ್ಕಂಡು ಪಾರ್ವತಿ
ನಡುಮುಡಿ ವ್ಯಾಲ ಕಾಲು ಮಡುಗವರ
ದೇವುರು ತಕ್ಕಂಡು ಬತ್ತಾರ
ನೀವು ಹಗಲು ಬತ್ತಿಯ ಉರಿಸಿ
ಹಗಲು ಬತ್ತಿ ಮುಂಬಾಣ ಉರಿಯಾಗ
ನಿಂದು ನ್ನೋಡವರ್ಗ ಅಳವಲ್ಲ
ದೇವರ ತಕ್ಕಂಡು ವೈಕುಂಠಕ ಬಂದರು
ಹೊಡಕಾಯಿ ಹೊಡದು ನಿಲ್ಲಿಸಿರಲ್ಲ
ಹೊಡಕಾಯ ಹೊಡದುರು ಹಿಡುಕಾಯ ಇಟ್ಟರು
ದೇವರ ಇಳುಕಿ ಮಡುಗಿದರು
ದೇವರ ಇಳುಕಿ ಮಡುಗಿಬುಟ್ಟು
ಅವು ಸೂತ್ರದ ಗಳುಗಯ ನೋಡುತಾರ
ಸೂತ್ರದ ಗಳುಗಯ ನೋಡುಬುಟ್ಟು
ಗುರುಸ್ವಾಮಿ
ಅವು ತೆರಯಮರೆಯಲ್ಲಿ ಕರಯೂಸಿಗುರುಸ್ವಾಮಿ

ಅವು ಚಪ್ಪರದಡಿಯಲ್ಲಿ ನಿಲಸೀರು
ಆವು ಚಪ್ಪರದಡಿಯಲ್ಲಿ ಮುತ್ತಿನಮೂವ್ಯಾಲ ನಿಲ್ಲಿಸಿಬುಟ್ಟು
ತೆರೆಯ ಮರಯಲ್ಲಿ ನಾರಾಯಣನ ನಿಲ್ಲಿಸಿಬುಟ್ಟು
ನಮ್ಮ ಎಳೆಯ ಕುಸುಮಾಲ್ಯ ಕರತಂದ್ರು
ಎದ್ದು ನೆನಸಿದ ಮುದ್ದು ಮೊಕದ ಚೆಲುವಯ್ಯನ
ಅವರೂ ವಜ್ರದ ಪಲ್ಲಕ್ಕಿ ಎಡಎಡಗ ಚಿನ್ನಮಲ್ಲು
ಆವು ಎದ್ದು ತೇರ್ತ್ತುಕ ತೆರಳಿರು
ತೇರ್ತ್ತುಕ ಹೋಗಾಗ ತೆರಳಿವು ನಿಮ್ಮ ಮಂಡ
ಗಾಜಿನುಪ್ಪುರಕ ಆರತಿ ತುಂಬಳ ಬೊರಮ್ಮ ಅರಮಲ್ಲಿ
ಅಂಗೈಲಿ ಆರುತಿ ಮುಂಗೈಲಿ ಪದುಮಿರುಳು
ಅವ ಇಂಬಿಹಣ್ಣಿನಂತ ನಿಜುಗೆಂಪಿ ಸ್ವಾಲುಗನ ಮಗ
ಅವ ಅಂಗೈಲಿ ಆರುತಿಯ ಹಿಡಿದಾಳ
ಅಂಗೈಲಿ ಆರುತಿಯ ಹಿಡಕಂಡು ಸ್ವಾಲಿಗನ ಮಗ
ಸ್ವಾಮಿಯವರಿಗ ಐದು ಬಳಸ ಬರುತಾಳ
ಐದು ಬಳಸ ಸ್ವಾಲಿಗರ ಮಗ ಬರುವಾಗ
ನಮ್ಮ ಗುರುಸ್ವಾಮಿ ಏನಂದು ನುಡಿದಾರು
ಆಕಾಸತಿ ತೂಗಿರು ಭೂಮಿಯ ಅಳದಾರು
ಲೋಕಕ್ಕ ವರವಬೇಡಿರು ಋಷಿಗಳು
ಸೂತ್ರದ ಮಾಲಿಗ ತೆರಳಿರು
ಈ ಮಾಲ ಈ ಮಾಲ ದೇವಲೋಕದ ಮಾಲ
ದೇವೇಂದ್ರನಿಗ ಸಮ್ಮಂದಪಟ್ಟ ತೊಳಸಿಯ
ದೇವೇಂದ್ರನಿಗ ಸಮ್ಮಂದಪಟ್ಟ ತೊಳಸಿಯ ಹೂವಿನ ಮಾಲ್ಯ
ನಮ್ಮ ಸ್ವಾಲುಗನ ಮಗಳ ಕೈಗ ಕೊಡುತಾರ
ಆ ಮಾಲ ಈ ಮಾಲ ಚಂದ್ರದೇವರಿಗ
ಸಂಬಂಧ ಪಟ್ಟ ಹೂವಿನ ಮಾಲಯ
ಮಂತ್ರಿ ನಾರಾಯಣನ ಕೈಲಿ ಕೊಟ್ಟಾರಲ್ಲೊ
ಎಳ್ಳು ಜೀರಿಗ ಚಿಕ್ಕವಳ ಕೈತುಂಬ
ನೀ ಚೆಲ್ಲಮ್ಮ ಚಂತ್ರಿ ನಾರಾಯಣನಿಗ
ಎಲ್ಲ ಭಾಗ್ಯವು ಬರಲೆಂದು
ಅಕ್ಕಿ ಜೀರಿಗ ನಮ್ಮ ಹಸಿಯಮರಕೈತುಂಬ
ನೀವು ಕುಟ್ಟರಿ ಸ್ವಾಮಿ ಮಂಡ ಮ್ಯಾಲ
ಸೌಭಾಗ್ಯ ನಮಗ ಬಂತು ಎಂದು ಹೇಳಿ

ಅವ್ರು ಎಳ್ಳು ಜೀರಿಗೆಯ ಬುಡುತಾರ
ಒಂದಕ್ಕಿ ವನಗೂಡಿ ಒಂದಕ್ಕೆ ಧ್ವನಿಯಾಗಿ
ಒಂದಕ್ಕಿ ನಂದನ ವನದೊಳಗ
ಒಂದಕ್ಕಿ ನಂದನ ವನದೊಳಗ ಸೇರಿ ನಾರಾಯಣನ
ಬಾಸಿಂಗದ ವ್ಯಾಲ ಗೊನಭಾಗಿ
ಎರಡಕ್ಕಿ ಒನಗೂಡಿ ಎರಡಕ್ಕಿ ಧ್ವನಿಯಾಗಿ
ಎರಡಕ್ಕಿ ಏಯೋಧ್ಯದ ವನದಲ್ಲಿ ಸ್ವಾಲಿಗನ ಮಗಳಿಗ
ಆವಳ ಕಂಕಣದ ವ್ಯಾಲ ಗೊನಬಾಗಿ
ಒಂದು ಕಾಲಿಗ ಪಿಲ್ಲಿ ಒಂದು ಕಾಲಿಗ ಮಿಂಚು
ಒಂದಾನ ಎಳ್ಳ ಎಡಿಯುತ್ತ ಜಗದಿಸ್ವರ
ಅವ್ರು ಅಕ್ಕಿ ಸಾಸ್ತ್ರವ ಮಾಡುತಾರ
ಎರಡು ಕಾಲಿಗ ಪಿಲ್ಲಿ ಎರಡು ಕಾಲಿಗ ಮಿಂಚು
ಎರಡಾನ ಎಳ್ಳ ಎಡಿಯುತ್ತ ಜಗದೀಸ್ವರ
ಅವ್ರು ಅಕ್ಕಿ ಸಾಸ್ತ್ರವ ದೃಷ್ಟಿಸಿ ನೋಡುತಾರ
ಅವ್ರು ಅಕ್ಕಿ ಸಾಸ್ತ್ರವ ದೃಷ್ಟಿಸಿ ನೋಡಿದರ
ಎರಡಕ್ಕಿ ವನಗೂಡಿ ಕೂಡಿದ್ದ ಕಂಡು ಗುರುಸ್ವಾಮಿ
ದಾರ ಮೂರುತುಕ ಸುರು ಮಾಡುತಾರ
ಅಕ್ಕಿ ಕೂಡಿದ್ದ ಕಂಡು ಪಾರ್ವತಿ ತಾಯಿ
ಮುಂದೆದ್ದು ತೊಳನೆಯ ದಾರಯ
ಹೊರದ ಕೈಯಲ್ಲಿ ಹಿಡಕೊಂಡು
ತಟ್ಟಿಗ ಹಾಕಿ ಬುಟ್ಟು ಹಾಲು ತಪ್ಪ ಎರದಾಳು
ಗಂಗಮ್ಮ ಗೌರಮ್ಮ ಗಿರಿಜಮ್ಮ ಬೋರಮ್ಮ
ಸಯುವಾಗಿ ಥಾರೆ ಎರದರು ಧರೆಯಲ್ಲಿ
ಅಂಗೈಯಿಕೀಳಾಗಿ ಲಿಂಗದ ಕೈಮೇಲಾಗಿ
ಏಕಾಂಗದ ಕಿಂಡಿ ಎಡಎಡಕ
ಏಕಾಂಗದ ಕಿಂಡಿ ಎಡಎಡದ ವೈಕುಂಠವ
ನಾರಾಯಣನಿಗ ಥಾರ ಜಯುವಾದೊ
ಅಂಗೈಕೀಳಾಗಿ ಲಿಂಗದ ಕೈಮೇಲಾಗಿ
ಬಂಗಾರದ ಕಿಂಡಿ ಎಡ ಎಡ ವೈಕುಂಠದ
ನಾರಾಯಣನಿಗೆ ಥಾರ ಜಯುವಾದೊ
ಎಳಯ ತೊಳಸಮ್ಮ ಲಕ್ಷ್ಮಿದೇವಿ ಸಯುವಾಗಿ
ರಾಯರಿಗ ಥಾರೆಯ ಎರದುಬುಟ್ಟು

ಸುರು ಮುನ್ನೂರು ಕೋಟಿ ಶಿವಶರಣರು ಸಯುವಾಗಿ
ಥಾರ ಮಾಡಿದರು ಜಗದೊಡನೂ
ಥಾರಯ ಮಾಡಿದರು ಜಗದಲ್ಲಿ ನಾರಾಯಣನಿಗ
ಜಗವೆಲ್ಲ ಎದ್ದು ಜಯವೆಂದ್ರು
ಜಗವೆಲ್ಲ ಎದ್ದು ಜಯವಂದ ಕಾಲದಲ್ಲಿ
ಅವರು ಥಾರಯ ಕೈಯ ಬುಡುಸೀರು
ಅವರು ಥಾರಯ ಕೈಯ ಬುಡುಸ್ಬುಟ್ಟ್ರು
ಅವ್ರ ಚಪ್ಪರದಟ್ಟಿ ಒಳಗ ನಿಲ್ಲಿಸಿರು
ಅವ್ರ ಚಪ್ಪರದಟ್ಟಿ ಒಳಗ ನಿಲ್ಸಿಕಂಡು
ಅವರ್ಗ ಅನ್ನರುತಿಯ ನೋಡಿಸಿದರು
ಅವ್ರ ಹಸವ್ಯಾಲಕ ಕರತಂದ್ರು
ಹಸಿಗ ಅವರ ಕರತರುವಾಗ ಗುರುಸ್ವಾಮಿ
ಮಣಯ ಪೂಜಿಯ ಮಾಡುತಾರ
ಎಡದಲ್ಲಿ ನಾರಾಯಣ ಬಲದಲ್ಲಿ ಸ್ವಾಲಿಗನ ಮಗ
ಅವ್ರ ಹಸೆಯ ಮುಂದ ಕುಡ್ರಿಸೀರೊ
ಹತ್ತಿಮರ ನೂರು ಸುತ್ತ ದೀವಿಗ ನೂರು
ತಾವರಕ್ಕೆ ನೂರು ಗಿಣಿನೂರು ಬರದಾವ
ಸ್ವಾಲಿಗರ ಮಗ ಕೂತಿರುವ ಹಸೆಯಲ್ಲಿ
ಆಲದ ಮರ ನೂರು ಸಾಲುಮರ ನೂರು
ತಿಂಗಳಮಾವ ನೂರು ಗಿಣುನೂರು ಬರದಾವ
ಮಂತ್ರಿ ನಾರಾಯಣ ಕೂತಿರುವ ಹಸಯಲ್ಲಿ
ಇಂಬಿಯ ಹಣ್ಣುನೂರು ತುಂಬ ದೀವಿಗನೂರು
ನಕ್ಷತ್ರ ನೂರು ಗಿಣಿನೂರು ಬರಹಾವ
ನಮ್ಮ ಕುಸುಮಾಲ ಕೂತಿರುವ ಹಸೆಯಲ್ಲಿ
ಮುತ್ತಿನು ಮೂನುಂದ ಕಳಸಾವ ಇರಿಸಾದ
ಅವ್ರು ಕಳಸಾಕ ಪೂಜೆಯ ಮಾಡುತಾರ
ಹಸಗೇಳಮ್ಮ ಋಷುಗಳು ಇಳಿದರ
ಅವರ ಹಸನಕ್ಕ ತುಂಬರ ಚಾಕಿಯ ನಾಲ್ಕು ಮೂಲಿಗ
ಋಷುಗಳು ಹಸೆಗ ಇಳಿದಾರು
ಮನಗೇಳಮ್ಮಯ್ಯ ಮುನುಗಳು ಇಳಿದಾರು
ಅವ್ರು ಹಸುವಾಗಿ ತುಂಬರ ಚಾಕಿಯ ನಾಲ್ಕು ಮೂಲಿಗ
ಮುನುಗಳು ಹಸೆಗ ಇಳಿದಾರು

ಹೆರಣನ ಮದುವೀಗ ಅರಗಿಣಿ ಇಳಿದಾವೊ
ಕಳವಂ ಸೂತ್ರಾದ ಅಡವಿಡಿತ
ಚಿಕ್ಕೊರಿ ಪಕ್ಷಿಗಳಿಗ ಸಾರಿ ಸವ್ಮ್ಯೇಳ ಹದಿನೈದು
ಸಾರಿ ಸವ್ಮ್ಯೇಳ ಹದಿನೈದು ನಾರಾಯಣನಿಗ
ಬೋನಾಸಿ ಕೊಳುವ ತವರಾಯ ಕೊಳದಲ್ಲಿ
ಸೂರ್ಯದೇವನಿಗ ನವಿಲು ಬಂದು ಕೊಡೆಯ ಹಿಡಿದಾದ
ತಟ್ಟಾಯ ಮುಂದ ಕೂತರು ಋಷಿಗಳು
ನಮ್ಮ ಗುರುಸ್ವಾಮಿ ಏನಂದು ನುಡಿದಾರು
ಕೈಲಾಸದ ವರುಗೋಳು ತಂದ್ರಲ್ಲ ಮುನಿಗಳು
ತಮ್ಮ ಗುರುಸ್ವಾಮಿ ಕೈಲಿ ಕೊಟ್ಟರಾಗ
ಅವ್ರ ಹೆಸರಿಕ್ಕಿವರಗೋಳ ಓದಿದರು
ಸುರುಮುನ್ನೂರು ಕೋಟಿ ಮುನಿಗಳು
ವರವತಕ್ಕಂಡು ವರವನ್ನಿ ಓದಿದರು
ನಾರಾಯಣನಿಗ ಮುಯ್ಯ ವೈಕುಂಠದಲ್ಲಿ ಆಯ್ತದಂದು
ನಮ್ಮ ಅಖಂಡ ಮಾಋಷಿಗಳು ಬಂದರಲ್ಲ
ಅಚ್ಛೈಡವನ್ನಿ ಕೊಟ್ಟು ಓದಿಸೀರು
ಅಚ್ಛೈಡವನ್ನಿ ಓದಿತ ತಟ್ಟಿಗ ಹೊನ್ನ ತುಂಬೀತ
ನಮ್ಮ ಸ್ವಾಮಿಗ ಮುಯ್ಯ ಮಾಡಿದರು
ಮುಯ್ಯ ವೈಕುಂಠದಲ್ಲಿ ನಾರಾಯಣನಿಗ ಆಗಿತು
ನೀವು ಮುಯ್ಯ ಪೂಜಮಾಡಿ
ಎದ್ರೀಸಿ ನಮ್ಮ ಸಿರ್ದರಿಯ
ಎದ್ರಿಸಿ ಸಿರ್ದರಿಯ ಬಾಗಲಲ್ಲಿ ನಿಲ್ಲಿಸಿಕೊಂಡು
ಬಾಗಲಿಗ ಬಂದ ನಾರಾಯಣನ
ಜಗದ ಈಸ್ವರ ತಡದನಲ್ಲ
ಬಾಗಲ ತಗ ತಡದ ಮಾಳಿವನೀಗ
ಬಣ್ಣ ದಾರತೀಯ ಹಿಡಿಯಿರಿ
ಅವನ ಕೈಯಲ್ಲಿ ಹಿಡಿಹೊನ್ನ ಕೊಡಿ
ಹಿಡಿ ಹೊನ್ನ ಹಿಡಿದು ಇಳ್ಯಾವ ಅವರ್ಶ ವಡುಗಿ
ಅವರು ಬಾಗಲ ಬುಟ್ಟು ಕಡದರು
ಬಾಗಲ ಬುಟ್ಟು ಗಂಧದ ಮಳುಗಲಿ ಕುಂತರು
ಏನಂದಾಳಾಗ ತೊಳುಸಮ್ಮ
ಅಯ್ಯ ಸಾಸ್ತ್ರದ ಮುಗಿಯಿತ್ತೆಂದು ತಿಳಿಯಬೇಡಿ

ಕೈಯೆ ಸಾಸ್ತ್ರವ ಮಾಡಬೇಕು
ನಿಮ್ಮ ಕಂಕಣದ ಕೈಯ ಬಿಚ್ಚಬೇಕು
ಗೋಪಸ್ತ್ರೀಯರ ಸಾಸ್ತ್ರಕ ಬನ್ನಿಯಮ್ಮ
ನಮ್ಮ ಸಿದ್ಧರಿ ಕಂಕಣವ ಹಿಡಕಂಡು
ಕೈಯಿಗ ಸಾಸ್ತ್ರವ ಮಾಡಿರಮ್ಮ
ಹರಳೆಣ್ಣಿ ಅರಿಸಿಣವ ತಕ್ಕಂಡು ಮುತ್ತೈದರು
ಅವನ ಕಂಕಣದ ಕೈಯಿಗ ಸವರುತಾರ
ಅವನ ಕಂಕಣದ ಕೈಯಿಗ ಸವರ್‍ಬುಟ್ಟ
ಅವರು ಅಕ್ಕಿ ಸಾಸ್ತ್ರಕ ನಿಂದರಲ್ಲ
ಅಕ್ಕಿ ಸಾಸ್ತ್ರವ ಮಾಡಿಬುಟ್ಟು ಜಗದೊಡನಿಗ
ಏನಂದು ಮಾತ ನುಡಿದರು
ಗಂಧದ ಮಳುಗಲ್ಲಿ ನಡುಮನ ಸಾಲಲ್ಲಿ
ನಂದದೀವಿಗ ಬೆಳಕಲ್ಲಿ ಗುರುಸ್ವಾಮಿ
ಅವ್ರು ಕಂಕಣವ ಬಿಚ್ಚಿ ಅಳಿದಾರು
ಪಟ್ಟ ನೂಲಲ್ಲಿ ಮುಟ್ಟಿದರು ಅವ್ರ ಕಂಕಣದ
ನಮ್ಮ ಮುದ್ದು ಮಲ್ಲಯ್ಯ ಗತಿಯೆಂದು
ಮುಟ್ಟಿ ಅಳಿದಾರು ಕಂಕಣವ
ಕುರಿಯ ನೂಲಲ್ಲಿ ನೆರ್‍ದುರು ಕಂಕಣದ
ನಮ್ಮ ಶಿವನು ಮಲ್ಲಯ್ಯ ಗತಿಯೆಂದು ಗುರುಸ್ವಾಮಿ
ಅವ್ರು ಕಟ್ಟಿದ ಕಂಕಣದ ಬಿಚ್ಚಿ ನೋಡುತಾರ
ಅವ್ರು ಕೊಡದ ಹೊಂಬಾಳಿಗ ಕಟ್ಟುತಾರ
ಅವ್ರು ಕೊಡದ ಹೊಂಬಾಳಿಗ ಕಟ್ಟುಬುಟ್ಟ
ನೀವು ಎತ್ತಿ ಕಟ್ಟಿರಯ್ಯ ಮೇಲುಗಡ
ಕಂಕಣ ಬಿಚ್ಚಿ ಕೈಸಾಸ್ತ್ರ ಆಗಿತು
ನಡೆಯಿರಿ ಇವ್ನ ಕರಕಂಡು ಸಾಸ್ತ್ರ ಉಂಟು
ಚಪ್ಪರದ್ಹಟ್ಟಿ ಒಳಗ ನಿಲ್ಲಿಸಿ ಹೋಕಳಿಗ
ಹೋಕಳಿಯ ನಾವು ಆಡಿಸಬೇಕು
ಹೋಕಳಿ ಕೊಳದಲ್ಲಿ ನಾಲ್ಕು ಚಿನ್ನದ ಕಂಬ
ಚೀ ಕೊಳ್ಳ ಕೈಲಿ ಚಿನ್ನದಂಡ ಹಿಡಕಂಡು
ಅವರು ಆಡಿತ ಹೋಕಳಿಯ ಮೊದರಲ್ಲ
ರನ್ನದ ಕೊಳದಲ್ಲಿ ನಾಲ್ಕು ಚಿನ್ನದ ಕಂಬ
ರನ್ನದ ಅಂಡ ಬಲಗೈಲಿ ಹಿಡಕೊಂಡು
ಅವ್ರು ಚೆಲ್ಲಿತ ಹೋಕಳಿಯ ಮೊದರಾಗ

ಗಂಧದ ಸೋದಲಿ ಒಲಕೊರದು
ಕಾದ ನೀರ ಎರದರು ಇಬ್ರುಗುವ
ಇಬ್ರುಗುವ ಅಗ್ನೇಯು ಎರದ್ಬುಟ್ಟುತೊಳಸನ್ಮಾ
ಚಪ್ಪರದ್ಹಟ್ಟೆ ಒಳಗ ನಿಲ್ಲಿಸಿ ಕಂಡು ನಾರಾಯಣಗ
ಆವನ ಪಾದ ಪೂಜಿಗ ಇಳಿದಾಳೊ ಕುಸುವಾಲ
ಅವ್ರು ಗಂಧ ಅಕ್ಷತುವ ತರುತಾರ
ಗಂಧ ಅಕ್ಷತುವ ಅವರ ಪಾದಕ ಇಕ್ಕುತಾರ
ಅಕ್ಷತ ಇಕ್ಕಾಳ ಈಭೂತಿ ಬರದಾಳ
ಮೊಗ್ಗು ಮುಗುಳುವ ಸುರಿದಾಳೊ
ಮೊಗ್ಗು ಮುಗುಳುವ ಸುರಿದು ಸ್ವಾಮಿಗನ ಮುಗ
ಅವ ಹತ್ತು ಬೆರಳಲ್ಲಿ ಕೈಯೆತ್ತಿಮುಗಿದಾಳೊ
ಕೈಯೆತ್ತಿ ಮುಗಿದ್ಬುಟ್ಟು
ಹವಳದ ಆರುತಿಯು ಅಂಗೈಲಿಹಿಡಕಂಡು
ಆವ ವರವ ಕೇಳಿದ ನಾರಾಯಣನ
ವರವ ಕೇಳಿದರ ಏನಂದ್ರು ವರಮುನಿ
ಅವ್ರು ಹಿಡಿಹೊನ್ನ ತಟ್ಟೆಗ ಬುಡುತಾರ
ಹಿಡಿಹೊನ್ನ ಇನ್ನೇನು ಹಾಕಿರು
ಹತ್ತು ವಾರವ ಹಾಕಿರು
ಹತ್ತು ವಾರವ ತಕ್ಕಂಡು ಕುಸುವಾಲ
ತೆರಳೀರೊ ಗಂಧದ ಅರಮಲ್ಲಿ
ಗಂಧದ ಅರಮಲ್ಲಿ ಮಡುಗುಬುಟ್ಟು
ಕುಂತಾಳೊ ಕುಸುವಾಲ
ಇಬ್ಬಾರು ಕುಂತಿರುವ ಗಳುಗಲಿ
ಮುನುಗಳು ಬಂದು ಏನೆಂದು ನುಡಿದಾರು
ಅಯ್ಯ ಎಲೆಯ ಕುಂದೂರ ಹೊಳೆಯ ಮಂಟಪದಲ್ಲಿ
ನಮ್ಮ ಸುರುಮುನ್ನೂರು ಕೋಟಿಶರಣಾರು
ಸಾಸ್ತ್ರವ ಓದಿತ ಸಿರಹರಿ ನಾರಾಯಣನಿಗೂ
ನಾರಾಯಣನಿಗೂ ಕುಸುಮಾಲಿಗೂ ಸರಿಯೆಂದು
ಜಯ ಜಯ ಎಂದು ಹೇಳುತಾರ
ಸಾಸ್ತ್ರವ ಆಗಿತು ಸೂಸ್ತಾವ ನಿಲ್ಸೆಕಂಡು
ನೀವು ಏಳಿರಯ್ಯ ಜಗದೊಳಗ
ನೀವು ಊಟ ಭೋಜುನಕ ತೆರಳಿರಯ್ಯ

ಊಟ ಭೋಜನವೆಲ್ಲ ಆಗಿರಲಿ
ಕರಸಿರಯ್ಯ ಸ್ವಾಲಿಗರನ್ನೆಲ್ಲ
ಪುರಾಣಿಬೊಮ್ಮಗೌಡನ ಹೆಂಡತಿ
ದಂಪತಿಗಳು ನೀವಿಬ್ಬರೂ ಬನ್ನಿ
ದೊಡ್ಡಾಕ್ಕಡಿ ಚಿಕ್ಕಾಡಿ ಗುಂಜು ಮೊರದ ಕಾಡಿ
ಬಲುಕಾಡಿ ಬನ್ನಿ ನೀವು ವೈಕುಂಠಕ
ದೊಡ್ಡಾಕ್ಕಡ ಚಿಕ್ಕಾಡ ಗುಂಜುಮೊರದ ಕಾಡ
ಬಲುಕಾಡ ನೀವು ಬನ್ನಿರಯ್ಯ
ಅರವನ್ನ ಕರೆಯಿಸಿ ಹೊಸ ಜವಳಿಯ ಕೊಡುತಾರ
ಒಬ್ಬಾರ ಮ್ಯಾಲ ಒಬ್ಬಾರು ಬಿದ್ದು
ಕೈ ನೀಡಿ ಜವಳಿಯ ಕೇಳುತಾರ
ಸ್ವಾಲಿಗರಿಗೆಲ್ಲ ಹೊಸ ಜವಳಿ ಕೊಟ್ಟುಬುಟ್ಟು
ಆಯ್ಯ ಊಟಕ ಕೂತುಕೊಳ್ಳಿ
ಸ್ವಾಲಿಗರ ಊಟಕ ಕುತ್ಕೊಳ್ಳಿ ಅಂದರ
ಹಿಂದು ಮುಂದನಾಗ ಕೂತುಕತ್ತಾರ
ಹಿಂದು ಮುಂದನಾಗ ಕುತುಕೊಂಡು ಸ್ವಾಲಿಗರು
ಊಟಕ ಎಲಿಯ ಕೇಳುತಾರ
ಎಷ್ಟು ಹೇಳಿದರೂ ಸಾಲಾಗಿ ಕೂರದಿಲ್ಲ
ನೀವು ಕೊಟ್ಟು ಬುಡಿರಯ್ಯ ಎಲೆಯ
ಎಲೆಯ ಈಸಿಕೊಂಡು ಸ್ವಾಲಿಗರು ಕೂರಾಗ
ಅವ ಗಂಧಾದ ಅರಮಲ್ಲಿ ನೋಡುತಾಳ
ಗಂಧದ ಅರಮಲ್ಲಿ ನಿಂತ್ಕಂಡು
ತಾಯಿತಂದಗಳ ನೋಡಿ ಅಳುತಾಳ
ತಾಯಮ್ಮನ ನೋಡಿ ಅಳುತಾಳ
ಅವ್ರ ತಾಯಿ ಗಕ್ಕಾನ ನೋಡಿದ
ಗಕ್ಕಾನ ಮಗಳ ನೋಡಿಬುಟ್ಟು
ಅವ ಕಣ್ಣೀರ ಅಗ್ನಿಯ ತೊಡಕಂಡು
ಭೋಜನಕ ಕೂತುಕೊಂಡರು
ಕೀಳುಗಡ ಸ್ವಾಲಿಗರ ಕುಂಡ್ರುಸು ಬುಟ್ಟು
ಮೇಲುಗಡ ಸುರು ಮುನ್ನೂರು ಕೋಟಿ ಮುನುಗಳು
ಊಟಕ ಕೂತುಕೊಂಡು
ಅಟ್ಟಂತ ಅಡುಗೆಯ ಸುಟ್ಟಂತ ಕಜ್ಜಾಯ

ಬಟ್ಟಲೀಗ ತಂಬಿ ಬಾಳ ಎಲೆಯು ಮುಸುಗಿಟ್ಟು
ಅವ್ರು ಮುನುಗಳಿಗ ಊಟನ ಪಡಸುತಾರ

ಕ್ಯಾಸುಲಕ್ಕಿ ಅನ್ನ ಕೆಂದವ್ಮು ನೊರಹಾಲ
ಸ್ವಾಲಿಗರಿಗ ಊಟಕ ಬದಸುತಾರ
ಅಪ್ಪಳ ಉಪ್ಪಿನಕಾಯಿ ನೊರ ಸಂಡಿಗ
ಸಯುವಾಗಿ ನೀಡುತಾರ

ನೊರಸಂಡಿಗ ಮುಂದ ಏನು ನೀಡಿದರು
ಆವರ್ಗ ತುಪ್ಪ ಸಯುವಾಗಿ ನೀಡುತಾರ
ಹಣ್ಣು ಸಕ್ಕರ ಅದು ಮಾಡಿರಲ್ಲ ಪಂಚಮೂರ್ತಾವ ನೀಡುತಾರ
ಪಂಚಮೂರ್ತಾವ ನೋಡಿ ಸ್ವಾಲಿಗರು
ಬಹು ಸಂತೋಷವ ಪಡುತಾರ

ಸಣ್ಣ ಗಿಡುವಿಗೆ ಗಿಣ್ಣೈದು ಎಸಳೈದು
ಅದು ಬಣ್ಣಿಸಿ ನೆಗೆಯು ದುಂಡು ಮಲ್ಲಿಗ ಹೂವ
ಅದು ತಂದು ನಮ್ಮ ಜಗದೊಡೆಯು ಧರಿಸೀರು

ಒಬ್ಬೊಬ್ಬಯು ಮ್ಯಾಲ ಬಿದ್ದು ಬಿದ್ದು ಬೇಡುವಳೆ
ನೀ ಗೊಬ್ಬುರುಕ ಬಾಯು ಬಿಡುವಳ
ಗೊಬ್ಬುರಕ ಬಾಯು ಬಿಡ ಪುಟ್ಟಮಲ್ಲಿಗೆಯು
ಅದು ತಂದು ದೇವುರಿಗ ರಾಜಸಿದರು

ಗಂಜಿಯು ಸೀರೆಯುವಳ ಎಂಭತ್ತಾರು ನರಿಯುವಳ
ನೀ ಗಂಡನಿಲ್ಲದ ಬಾಲ ಬಸುರಾದ ಸಾವಂತಿಗ ಹೂವ
ಅದ ತಂದು ಲಿಂಗಕ ರಾಜಸಿದರು

ಉತ್ತ್ರಾವ ಹೊಲದಲ್ಲಿ ಬಿತ್ತ್ರಲೆ ಬೆಳೆಯು
ನಿನ್ಗ ನರರಂಗು ಮೊದಲಿಲ್ಲದ ತುಂಬಿ ಪುಸ್ಮವ
ತಂದು ದೇವರು ಲಿಂಗಕ ರಾಜಸಿದರು

ಆಲಂಬೋಡಿ ಹೆಣ್ಣು ಮೂಗುನೇರಳ ಉಳ್ಳವಳೆ
ದಾಸ್ಗೋಳ ಪಂಚಿಗ ಮಡಿಯಾಡ ಮುತ್ತುಗದ ಹೂವ
ಅದು ತಂದು ದೇವರಿಗ ರಾಜಸಿದರು

ಅಂತರದಲ್ಲಿ ಆಡೋಳ ಬೆನ್ನೆಲ್ಲ ಬೊರೆಯುವಳ
ನೀಕಣ್ಣಿನೊಳಗ ನೀರ ತರುವ ಕೆಂದಿಗನ ಎಳನೀರ
ನಮ್ಮ ದೇವರ ಲಿಂಗಕ ಎಡೆಯಾಗು

ಕೆಂಡ ಹಾಕಿದರ ಭೂಮಂಡಲ ಕವಿದಾವು
ಅದು ಗಂಧುಕರ ಅಂಗಡಿಯಲ್ಲಿ ಇರುವಾದು
ಗಂಧುಕದ ಅಂಗಡಿಯಲ್ಲಿ ಗಂಧದ ಕಡ್ಡಿರು
ತಕ್ಕಂಡು ಪೂಜೆಯು ಮಾಡಿದರು

ಮಂಗಳಾರತಿಯು ಮಡುಬುಟ್ಟು ಮುನುಗಳು
ನೀವು ಕೈಯ ಬಿಡಿರಯ್ಯ ಊಟಕ ಅಂದರ
ಸ್ವಾಮಿಗರು ಊಟವ ಮಾಡುತಾರ

ಊಟಮಾಡಿರೋ ಕೋಟಿಮುನ್ನಯ್ಯನೋರು
ನೋಟದ ಸಾಲಿಗ ಕೂತಿರುವ ಮುನುಗಳಿಗ
ಉಂಡಡಕ ಬೆಳಿ ಎಲ ಕೊಡುತಾರ
ಇಳ್ಯಾ ಮಾಡಿರು ಮುನುಗಳು

ಆಗ ಸ್ವಾಮಿಗರು ಎದ್ದು ಏನಂದಾರು
ಸ್ವಾಮಿ ತೇರಿನ ಬೀದಿಲಿ ಕುಂತಿವಿ ಅಂದರು
ಮುನುಗಳು ರಥವ ಸುಂಗಾರ ಮಾಡಾಗ
ವೈಕುಂಠದಲ್ಲಿ ವರಮುನಿಗಳು ತಾವು ಸುಂಗಾರ ಆಯ್ತಾರ

ಸಿದ್ಧರಿ ನಾರಾಯಣ ಸುಂಗಾರ ಆಗಾಗ
ಎಳೆಯ ಕುಸುಮಾಲ್ಯ ಸುಂಗಾರ ಮಾಡುತಾರ
ದುತ್ತಾರಿ ರವಿಕ ದುಂಬರದ ರವಿಕ
ಕುಸುಮಾಲಿಗ ಆಗ ಉಡಸೀರು

ಬಾಚಿ ಬೈತಲ ತಗದು ಕೀಚಿ ಎಣಗಂಟೊಡಿ
ಮೊಗ್ಗ ಮಂಡೀಗ ಮುಡಸೀರೊ
ಬಟ್ಟಮೊಕಕ ಮುತ್ತಿನ ಹೊಕಟ್ಟೊಡಿ
ಸರ್ಪಾನಕಟ್ಟು ಗಜನಮುಲಕು ರಾಗುರತುನುವ
ನಮ್ಮ ಸ್ವಾಮಿಗನ ಮಗಳಿಗ ಧರಿಸೀರು

ಕಣ್ಣಿ ಸೋಗ ಬುಟ್ಟು ಹಣಿಗ ಬೆರುಚುನ ಇಕ್ಕಿ

ಸಾವುದ ತೇಪ ಕೆನ್ನಗಿನ್ನ ಬುಟ್ಟು
ಅವಳ ಅಂದ ನೋಡಿರು ಋಷುಗಳು

ಬಂಗಾರ ಬಂದಾವ ಸುಂಗಾರ ಆಗುಕುಸುವಾಲ
ನಮ್ಮ ಶಂಬುನಾರಾಯಣ ಬಂದರೆಂದು
ಸಂಬು ನಾರಾಯಣ ಬಿಸಲಲ್ಲಿ ನಿಂದರ
ರಂಭ ಸ್ವಾಲಿಗರ ಮಗಳ ದಯವಾಗು

ಬೆಟ್ಟಿನ ಉಂಗುರ ಮೆಟ್ಟಿತ ಜಾರೀತ
ಬಂಗಾರದ ವೈಯ ಬಾಗಿತ ಸ್ವಾಲು ಗನಮಗ
ಅವ ಸಂಬುಶಂಕರನ ಮಗಳಲ್ವ
ಗಿರಿಜಮ್ಮ ಪಾರ್ವತಿ ತಾಯಾಗ
ಅವ ಬಂದಳಲ್ಲಿ ಬಳಿಯ ಪಸುರಕ್ಕ
ಪಸರದಲ್ಲಿ ನಿತ್ಕಂಡು ಹಸುರು ಬಳಯು ನೋಡಿತ
ಅವಳಿಗ ಹೆಸರಿಗ ಬಂದ ಬಳಯು ಬೆಲಕೇಳ್ದು

ಹೊನ್ನಿನ ಬಳಗ ಒಂದೇ ನೂರು
ಚಿನ್ನದ ಬಳಿಗ ಇನ್ನೂರು
ಬಂಗಾರದ ಬಳಿಗ ಐನೂರು ಗಿರಿಜಮ್ಮ
ನಿಮ್ಗ ಒಪ್ಪಿದ ಬಳಯು ತೊಡಿಸಮ್ಮ
ಹೊನ್ನಿನ ಬಳ ನಮ್ಗ ಬ್ಯಾಡ
ಚಿನ್ನದ ಬಳ ನಮ್ಗ ಬ್ಯಾಡ
ಬಂಗಾರದ ಬಳ ನಮ್ಗ ಬ್ಯಾಡ ಸಟ್ಟಾರ್ಯ
ನಮಗ ರಂಗು ಮಾಣಿಕದ ನೀಲ ವಜ್ರದ ಬಳ
ಸಾವುರುಕ ಬಳ ಬೆಲೆಯಾದ್ರ ಸ್ವಾಲಿಗರ ಮಗಳಿಗ
ಅವ ಅಂದುಳ್ಕ ತೋಳ ಕೊಟ್ಟಳಲ್ಲಿ
ಅವಳಂದಿಕ ಚೆಂದಿಕ ನೀಲದ ಬಳ ತೊಟ್ಟು

ಅವಳ ಅಂದ ನೋಡಿರೋ ಋಷುಗಳು ವೈಕುಂಠದಲ್ಲಿ
ನಿನಗ ಬಂಗಾರ ಮೇಲು ಬಳಮೇಲು ಸ್ವಾಲಿಗರ ಮಗಳ
ನಿನ್ನ ಸುಂಗಾರ ಮೇಲು ಗಿರಿಯಲ್ಲಿ ಎನುತ್ತೇಳಿ
ಅವ್ರು ಒಪ್ಪಿ ಮೆಚ್ಚಿದರು ಮುನುಗೋಳು
ಸುಂಗಾರವಾದ ಸ್ವಾಲಿಗರ ಮಗಳ ಮಂದಿಗ ಕರಕಂಡು
ನನ್ನ ಸುಂಗಾರದ ನಾರಾಯಣಾಸ ಎಡಗಡ ನಿಲ್ಲಿಸಿಕಂಡು
ಬಲಗಡ ಸ್ವಾಲುಗರ ಮಗಳ ನಿಲಸ್ಕಂಡು

ವಂದಿಗ ಕರಕಂಡು ಬರುತಾರ
ಸ್ವಾಲಿಗರ ಮಗ ಸಯುವಾಗಿ ನಾರಾಯಣ ಸಯುವಾಗಿ
ಸುರುಮುನ್ನೂರು ಕೋಟಿ ಶರಣರು ಸಯುವಾಗಿ
ಸ್ವಾಲಿಗರ ಮಗಳ ಕರಕಂಡು ಬರುತಾರ
ಕಾವಿಯೋರು ಕಂತೋರು ಆರೇಳು ಸರದ
ರುದ್ರಾಕ್ಷಿ ಸರದವರು
ಒಂದು ಆರುನೂರುಕೋಟಿ ಬರುತಾರ
ಕಂಬಳಿಯವರು ಕಂತೆಯವರು

ಅವರು ಮ್ಯಾಲ ಜಂಭದವರು
ರುದ್ರಾಕ್ಷಿ ಸರದ ಮುನುಗಳು
ಅವರೊಂದು ಕೋಟಿ ಇಳಿದಾರು
ಜಗದೀಸ್ವರನ ಶಿವದಂಡು ಕೇಳಾಕ ಇಳಿಯಾಗ
ಭೂಮಂಡಲ ಹತ್ತಿ ಉರಿದಾವು
ಮಲ್ಲಯ್ಯನ ಶಿವದಂಡು ತೇರಿನ ಬೀದಿಗ ಬರುವಾಗ
ಕೆಂಧೂಳು ಕವಿದು ಮುಗಲೇರಿ ಬರುವಾಗ
ಅಂತು ನೋಡವರಿಗ ಅಳವಲ್ಲ
ತೇರಿನ ಬೀದಿಗ ನಡುಮುಡಿ ಮ್ಯಾಲ
ಇಳಿದಾರು ನಮ್ಮ ಜಗದೊಡೆಯ
ಅವ್ರು ರಥವ ನೋಡಿದರು ಜಗದೊಡಿಯ
ರಥವ ಅಂಚಾರ ರಸಮುದ್ದ್ರ ಇಟ್ಟ್ಯಾರ
ಅವರ್ಗ ಜಾಟಿ ಕಳುದ್ರು ನಾರಾಯಣ
ಅವ್ರು ಅಂತಿ ನೋಡಿದರು ಕಳಸಾವ
ವಂದನ ಮಾಡಿದರು ಅವ್ರು ಹಿಂದು ಮುಂದನಾಗ ನಿಂದರು
ಕಳಸಕ ಕೈಯ ಮುಗಿದರು ರಥವ ಏರಿದರು
ಎಡದಲ್ಲಿ ತೊಳಸಮ್ಮ ಬಲದಲ್ಲಿ ಲಕ್ಷ್ಮ್ಮದೇವಿ
ನಡುವ ರಂಗಯ್ಯ ವೈರುಮುಡಿ
ವೈರುಮುಡಿಯ ಪಾದದ ಮುಂದವಳ ಕುಸುಮಾಲ
ಪಾದದ ಮುಂದಿರುವ ಕುಸುಮಾಲ ಕಂಡು
ಮುನುಗಳು ಸರಿಯೆಂದು ನುಡಿದಾರು
ನಾಲ್ಕು ಲೋಕವ ತಿರುಗಾಗ ನಾರಾಯಣ
ಎಲ್ಲಿ ಕಂಡಿದ್ದ ಇಂಥ ಹುಡುಗೀಯ
ಇವ ಹುಟ್ಟು ಸ್ವಾಲಿಗನ ಮಗಳಲ್ಲ
ವೈಕುಂಠಕ ಈ ಹೆಣ್ಣು ಸರಿಯಂದು

ಒಪ್ಪುವನ್ರು ನುನುಗಳಿಲ್ಲ
ಹತ್ತುಗಳಿಗೆಯಾದೊ ಹತ್ತಾರ ತೇರಿಗ
ಇಟ್ಟಾಡಿ ಬಿದ್ದೊ ಹಣ್ಣು ಜವನ ಬಾಳಹಣ್ಣು
ದ್ವಾರುಪಾಲಕರ ಎಡಬಲಕ
ಆರುಗಳಿಗಾದೊ ಅವ್ರು ಹೇರಾರ ತೇರಿಗ
ಹಾರಾಡುತಾವ ಹಣ್ಣು ಜವನ ಬಾಳಹಣ್ಣು
ದ್ವಾರುಪಾಲಕರ ಎಡಬಲಕ
ಚಿತ್ತದ ಕುಕ್ಕಲಿ ಹೊತ್ತಿ ಬಂದ ಮೆಕ್ಕೆಹಣ್ಣು
ತಕ್ಕಳ್ಳಿರಯ್ಯ ತಲಗೊಂದು ಮೆಕ್ಕೆಹಣ್ಣು
ನಮ್ಮ ದಿಷ್ಟಿ ಬಾಲಾಕರ ಎಡಬಲಕ
ತೇರಿನ ಬೀದಿಲಿ ಮೆರೆಯಾಗ ಕುಸುಮಾಲ
ಅವಳ್ಗ ಊಬತ್ತಿ ಬಾಣ ಉದುರು ಬಾಣ
ತೊಳಸಮ್ಮನ ಮುಂದ ಸುರಿದಾವೊ
ಸಂಕು ನುಡಿದಾವೋ ಸನಿವಾರದ ಅಯ್ಯನಿಗ
ಎಣ್ಣೆ ಮಜ್ಜನದ ಒಡೆಯ ರಂಗಯ್ಯನಿಗ
ಸಂಕು ನುಡಿದಾವೊ ಸನಿವಾರ
ರಂಗಯ್ಯ ರಥವೇರ ತುಂಬದ ತೂಬೇರಿ
ನಾ ಇಟ್ಟ ಹಣ್ಣು ಜವನ ಕೊನಗೇರಿ ರಂಗಯ್ಯ
ನಿಮ್ಮ ಭಾರಿಯ ಸಂಕು ಹೆಗಲೇರಿ
ಎಲ್ಲರ ತೇರು ಮೆಲ್ಲಿಗ ಹರಿವಾರ
ಅವ ದಳ್ಳಾಳಿಕಾರ ಚಿಲುಮಯ್ಯ
ಉದ್ದಂಡಕಾರಿ ಚಿಲುಮಯ್ಯ
ನಿಮ್ಮ ತೇರು ಚೆಲ್ಲದಂಗಡಿಗ ಹರಿದಾವೊ
ಬೆಟ್ಟದ ರಂಗಯ್ಯ ಬಿಳಿಕಲ್ಲಿನ ಮ್ಯಾಲ
ಎಳಯ ತೊಳಸಮ್ಮ ಗುಡಲೂದು ಮಾರೀಳೊ
ತೇರಿಗ ತಕ್ಕಂತ ಹಣ್ಣು ಜವನ ಕೇಳೀರೂ ಕೋಟಿ ಶರಣರು
ಬೆಟ್ಟದ ರಂಗಯ್ಯ ಬಿಳಿಗಿರಿ ಹುಚ್ಚಯ
ಹರುಗಟ್ಟಾದ ಹನುಮಯ್ಯ ನಿಮತೇರು
ಹವಳದ ಅಂಗಡಿಗ ಹರಿದಾವೋ
ಉದ್ದವಾದೊ ನಿಮ್ಮ ಬಂಡಿ ಉದಯವಾದ ನಿಮ್ಮ ತೇರು
ಅವು ಮದ್ದಾನಕ್ಕೂ ಮೊದಲೆ ಹರಿದಾವೊ
ಅಕ್ಷಿಯಾಗ ಹಾರಿದೊ ಪಕ್ಷಿಯಾಗ ಕೂಗಿವೋ

ಗಿಣಿಯೂಗ ಗಿರಿಯು ಬಳಸಿದ ನಿಮ್ಮ ತೇರು
ಕವುರಿ ಹಳ್ಳಕ ಎದರಾಗಿ ನಿಂದಾಗ
ಕೀಳುಕ ಇಳಿದಾರು ಜಗದೊಡೆಯು
ಎಡದಲ್ಲಿ ತೊಳಸಮ್ಮ ಬಲದಲ್ಲಿ ಲಕ್ಷ್ಮಿದೇವಿ
ನಡುವ ನಮ್ಮ ರಂಗಯ್ಯ ವೈರುಮುಡಿ
ಸ್ವಾಲಿಗನ ಮಗ
ಕಲ್ಯಾಣಿ ಕೊಳದ ಪೂಜಿಗ ಬಂದರು
ಪಟ್ಟ ಪಾರ್ವತಿ ಎಳಯು ಗಿರಿಜಮ್ಮ ಸಯುಮಾಗಿ
ಸ್ವಾಲಿಗರ ಮಗಳಿಗ ಕಡುವ ಮೆಟ್ಟ ಸಕಕ ಕರತಂದ್ರು
ಐದುಕಲ್ಲು ಪೂಜಿಯು ಮಾಡಿಳು ಗಿರಿಜಮ್ಮ
ಅವ ಅಕ್ಷತ ಗಂಧವ ಮಡುಗುತಾಳ
ಅವ ಹಣ್ಣಿನ ಪೂಜ ಮಾಡಿ ತೀರ್ತದ ಚೆಂಬ ಹಿಡಕಂಡು
ಮಂದಿಗ ಅವರ ಕರಕಂಡು
ವೈಕುಂಠದ ಮ್ಯಾಲ ನಿಂದರಲ್ಲ
ವೈಕುಂಠದ ಮ್ಯಾಲ ನಿತ್ಕೊಂಡು ನಮ್ಮ ಮಲ್ಲು
ನಾರಾಯಣನಿಗ ಬುದ್ಧಿಯು ಹೇಳುತಾರ
ವೈಕಂಠದ ಒಡೆಯು ಭಾವನಾರಾಯಣ
ವೈಕುಂಠ ಜೋಕ ಮೇಲುಗಿರಿ ಜೋಕ
ಮೇಲುಗಿರಿ ಒಳಗ ಇರುರಯ್ಯ
ಆರಾಳ ಕೊಂದ ಹಾರಿಲಂಕ ಸುಟ್ಟ
ನೀ ಬಾಲದಲ್ಲಿ ಕಿಚ್ಚಿ ಹರಡಿದ ಹನುಮಯ್ಯ
ನಮ್ಮ ಸಿರ್ಧರಿಯ ಕಾವಲು ನಿನ್ನದಯ್ಯ
ಪಟ್ಟಕ ಸಲುವಂತ ಎಳಯು ತೊಳಸಮ್ಮ
ಈ ನಾರಾಯಣನ ಕಾವಲು ನಿಮದು ಎನುತ್ತೀಳಿ
ಅವರ ಮಡದೀಗ ಬುದ್ಧಿಯು ಹೇಳುಬುಟ್ಟ
ಜಗದೀಸ್ವರ ಹಣ್ಣು ಫಲಾರವ ಹಂಚುತಾರ
ಸಕ್ಕರ ಸಲಿದಂಥ ಇನಿಯು ಮಾವಿನ ಹಣ್ಣ ಹಂಚುತಾರ
ಅವರ್ಗ ಇಳ್ಯಾವ ತಂದು ಕೊಡುತಾರ
ಬೆಂಗಳೂರು ಬೆಳಿಯಡಕ ಮೈಸೂರು ಕಳಿಯಡಕ
ನಾಗುಮಂಗಲದ ಕೆನ ಸುಣ್ಣ ಸಯುಮಾಗಿ
ಮುನುಗಳುಗ ಇಳ್ಯಾ ಕೊಡುತಾರ
ಹಣ್ಣು ತೆಂಗಿನಕಾಯಿ ಚಿಪ್ಪಿನ ಬಾಳಹಣ್ಣು

ಹಂಚಿದರು ಕಾಣಯ್ಯ ಋಷಿಗಳ್ಗ
ಋಷಿಗಳಿಗ ಹಂಚುವ ಕಾಲದಲ್ಲಿ
ಪಟ್ಟದ ಪಾರ್ವತಿ ಏನೆಂದು ನುಡಿದಾಳು
ಎಳಯ ತೊಳಸಮ್ಮನ ಕರೆದಾಳೊ
ಎಳಯ ಲಕ್ಷ್ಮಿದೇವಿ ಸಯುವಾಗಿ
ಸ್ವಾಲುಗನ ಮಗ ಜ್ವೋಕ ಎಂದು
ಸ್ವಾಲುಗನ ಮಗಳಿಗ ಬುದ್ಧಿ ಹೇಳುಬುಟ್ಟು
ಹತ್ತೆಲ ಹತ್ತಡಕ ಕೈಯೊಳಗ ಹಿಡಕಂಡು
ಅವ ನಿಸ್ತ್ರ ತೊಳಸಮ್ಮನಿಗೂ ಲಕ್ಷ್ಮಿದೇವಿಗೂ
ಸ್ವಾಲಿಗರ ಮಗಳಿಗು ಇಳ್ಯಾವ ಕೊಟ್ಟು ಬುಟ್ಟು
ಪಟ್ಟದ ಪಾರ್ವತಿ ನಾವು ವೈಕುಂಠ ಬುಟ್ಟು ಹೋಯ್ತಿವಿ
ನೀವು ನಡಯಿರಿ ಸ್ವಾಮಿ ಜಗದೊಡೆಯ
ಮಲ್ಲಯ್ಯನ ಶಿವದಂಡು ಸುಂಗಾರವಾದೊ
ಅವು ಬೆಟ್ಟ ಬುಟ್ಟು ಇಳಿಯಾಗ
ಅವರೊಂದಿಗ ಬತ್ತಾರ ಮುನುಗಳು
ಋಷಿಗಳು ಎಡಎಡಕ ಮುನುಗಳು ಬಲಬಲಕ
ಮಧ್ಯ ಬರುತಾರ ಜಗದೊಡೆಯ
ಮಧ್ಯವೇ ಜಗದೀಸ್ವರ ಕೊತುಕೊಂಡು
ವಂದೀಗ ಮುನುಗಳ ಕರಕಂಡು ಜಗದೀಸ್ವರ
ಬಂದಾರು ಜಗದ ಕೈಲಾಸಕ್ಕ
ಜಗದ ಕೈಲಾಸಕ ಬಂದರ ಈಸ್ವರ
ಅವರಿಗ ಬೆಲ್ಲದಾರುತಿಯು ಬೆಳಗಿಳು ಮಲ್ಲಾ ಜಮ್ಮ
ಬೆಲ್ಲದಾರುತಿಯು ಬೆಳಗಿದರ ಮಲ್ಲಾ ಜಮ್ಮ
ಕೈಲಾಸವೆಲ್ಲ ಹಗಲಾದೊ
ಅಚ್ಚ ಬಿಳಿಯ ಸೀರ ನಿಟ್ಟ ಮಂಗಳಪೂಜ
ವರ್ತಕರ ಮಗ ವರನಂದಿ
ಬಡವಾರ ಮಗಳು ಸಿರುದೇವಿ
ಹವಳಾದ ಹಾರುತೀಯ ಹಿಡಿದಾಳೊ
ಅಲ್ಲೀಗ ಹರ ಹರ ಇಲ್ಲೀಗ ಶಿವ ಶಿವ

# ಅನುಬಂಧ

# ವಕ್ತೃಗಳ ಕಿರುಪರಿಚಯ

ಜನಪದ ಸಾಹಿತ್ಯ ಲೋಕದ ಜೀವನಾಡಿ ಈ ವಕ್ತೃಗಳು; ಇವರ ಅಪಾರವಾದ ಅನುಭವ, ಜಾಣ್ಮೆ, ಜೀವಜಾನಪದದ ಆಗರ.

ಹಲಗೆಯು ಹಿಡಿದಿಲ್ಲ ಬಳಪದಿ ಬರದಿಲ್ಲ
ಶ್ರೀಗುರುವು ನಮಗೆ ಕಲಿಸಿಲ್ಲ । ಕೇಳಿರಕ್ಕ
ಲೆಕ್ಕಣಿಕೆ ನಮಗೆ ಗೊತ್ತಿಲ್ಲ ॥

ಎಂದು ನಮ್ರವಾಗಿ ಹೇಳುತ್ತಲೇ ಯಾವ ಗುರು, ಬಳಪ, ಲೇಖನಿ ಮಿಡಿಯದಿರುವಷ್ಟು ಜ್ಞಾನಸಂಪತ್ತನ್ನು ಕರಗತ ಮಾಡಿಕೊಂಡ ಸಹನಾಜೀವಿಗಳು. ಪಾಂಡವಪುರ ತಾಲ್ಲೂಕಿನ ಸುತ್ತ ಮುತ್ತ ಕೆಲ ಹಳ್ಳಿಗಳ ಕಲಾವಿದರಿಂದ ಈ ಸಾಹಿತ್ಯ ಸಂಗ್ರಹ ಮಾಡಿರುತ್ತೇನೆ.

ಪಾಂಡವಪುರ ತಾಲ್ಲೂಕಿನ ಸೀತಾಪುರ ಗ್ರಾಮದ ಶ್ರೀಮತಿ ಗಾಡಿನಿಂಗಮ್ಮನೆಂದೇ ಹೆಸರಾಗಿ ಜಾನಪದ ಸಾಹಿತ್ಯಕ್ಕೆ ನೆಲೆ–ಬೆಲೆಯನ್ನು ನೀಡಿರುವ ಈಕೆ ವಿಶ್ವಕರ್ಮ ಜಾತಿಯವರು. ಯಜಮಾನರು ಮರದ ಗಾಡಿಯನ್ನು ಮಾಡುತ್ತಿದ್ದ ಬಡಗಿಯಾದುದರಿಂದ ಅವರನ್ನು ಗಾಡಿ ನಂಜಪ್ಪಾಚಾರ್ ಎಂದು, 'ಗಾಡಿ' ಎನ್ನುವುದು ಅನ್ವರ್ಥನಾಮವಾಗಿ ಉಳಿದು ಮಡದಿಯ ಹೆಸರಿನಲ್ಲೂ ರೂಢಿಯಾಯಿತು. ಕಥೆ, ಒಗಟು, ಗಾದೆ, ಕಾವ್ಯಗಳನ್ನು ಹಾಡುವ ಈಕೆಗೆ ಸಮಯಕ್ಕೆ ತಕ್ಕಹಾಗೆ ಹಾಸ್ಯಚಟಾಕಿಯನ್ನು ಹಾರಿಸುವ ಗುಣ ಹುಟ್ಟಿನಿಂದಲೇ ಬಂದುದು. ಸೂಲಗಿತ್ತಿಯ ಕಾರ್ಯವನ್ನು ನಿರ್ವಹಿಸುವ ಇವರು ಮಗು ಹುಟ್ಟಿದಾಗ, ತೊಟ್ಟಿಲಿಗೆ ಹಾಕಿದಾಗ, ಮೈನೆರೆದಾಗ, ಮದುವೆ ಮುಂಜಿ ಇತ್ಯಾದಿವರೆಗೂ ಹಾಡಿನ ಸುರಿಮಳೆಗರೆಯುತ್ತಾರೆ. ಬದುಕಿನ ಎಲ್ಲಾ ಮಜಲುಗಳಲ್ಲೂ ಹೊಂದಿಕೆಯಾಗುವ ಅಪೂರ್ವ ಸಾಹಿತ್ಯದ ಖನಿ ಈಕೆ. ನನ್ನ ಬಾಲ್ಯದಿಂದಲೂ ಇವರನ್ನು ಬಲ್ಲೆನಾದ್ದರಿಂದ ಪಕ್ಕದ ಮನೆಯವರೇ ಆದ ಈಕೆಯೊಡನೆ ನಮ್ಮ ತಂದೆತಾಯಿಗಳದು ನಿಕಟ ಸಂಬಂಧ. 15 ವರ್ಷಗಳ ಹಿಂದೆಯೇ ಈ ಸಂಗ್ರಹ ಕಾರ್ಯವನ್ನು ಕೈಗೂಡಿಸಿಕೊಳ್ಳಲು ಬಹುಶಃ ಇವರ ಕಲೆಗಾರಿಕೆಯೂ ಸಹಾಯವಾಯಿತು ಎಂದರೂ ತಪ್ಪಾಗಲಾರದು. ಕುಂತಲ್ಲಿ ನಿಂತಲ್ಲಿ ಹಾಡುಗಳನ್ನು ಬಿತ್ತರಿಸುವ ಇವರ ವೈಖರಿಯನ್ನು ನೋಡಿ ಸಹಜವಾಗಿಯೇ ಆ ಸಾರವನ್ನೆಲ್ಲಾ ಹೀರಲು ಕಾತರಪಡುತ್ತಿದ್ದೆ. ಅವರ ಎಲ್ಲಾ ಸಾಹಿತ್ಯವನ್ನು ನಾನು ಸಮಗ್ರವಾಗಿ ಸಂಗ್ರಹಿಸಲು ಹೊರಟವಳು. ದುರದೃಷ್ಟವಶಾತ್ ಅವರ ಸಾವಿನಿಂದಾಗಿ ಪೂರ್ಣವಾಗಿ ಸಂಗ್ರಹಿಸ

ಲಾಗಲಿಲ್ಲ. ನಮ್ಮ ನಡುವೆ ಇಲ್ಲದಿದ್ದರೂ ಹಾಸ್ಯ ಪ್ರವೃತ್ತಿಯುಳ್ಳ ಆಕೆ ಸದಾ ಹಸನ್ಮುಖಿಯಾಗಿದ್ದು ಇತರರನ್ನೂ ಖುಷಿಪಡಿಸುತ್ತಿದ್ದವರು. ಎಲೆ, ಅಡಿಕೆ, ಕಡ್ಡಿಪುಡಿ ಇದ್ದರಂತೂ ಸಂಗ್ರಹಿಸುವವರ ಕೈ ದಣಿಯಬೇಕೇ ಹೊರತು ಆಕೆ ಮಾತ್ರ ರಾತ್ರೋ ರಾತ್ರಿ ಎಚ್ಚರವಾಗಿದ್ದೇ ಹೇಳುವ ಕುತೂಹಲವನ್ನು ವ್ಯಕ್ತಪಡಿಸುತ್ತಿದ್ದರು. ಹಾಗೆಯೇ ಒಮ್ಮೆ "ನಾ ಮೂಡಾತ್ಮೆ, ಹೇಳಿದ್ದ ಹಿಂಗೆ ನಿದ್ಗೆಟ್ಕಂಡು ಬರ್ಕತ್ತಿಯಲಾ ಇದು ಉಪ್ಪಿಗೆ ಬಂದದೊ ಹುಣ್ಸೆಣ್ಗೆ ಬಂದದೊ" ಎಂದಿದ್ದ ಅವರಿಗೆ ಅವರ ಕಲೆಯ ಬೆಲೆ ಗೊತ್ತಿರಲಿಲ್ಲ. ಇವರು ಜನಪದ ವೈದ್ಯವನ್ನು ಅರಿತಿದ್ದವರು. ಈಚಲು ಚಾಪೆ ಹೆಣೆಯುವುದು ಒಂಟಣಿ ಜೋಡಣಿ ಚಾಪೆ ಹೆಣಿಕೆ ಇವರ ಹವ್ಯಾಸವಾಗಿತ್ತು. ಕೈಯನ್ನು ನೋಡದೆಯೆ ಮಾತುಮಾತನ್ನಾಡುತ್ತಾ ಹೆಣಿಕೆ ಮುಂದುವರಿಸುತ್ತಾ ಏಕಕಾಲದಲ್ಲಿ ಎರಡೂ ಕೆಲಸವನ್ನು ಮಾಡುವ ಚಮತ್ಕಾರಮತಿಯುಳ್ಳವರಾಗಿದ್ದರು. ಬಾಲ್ಯದಲ್ಲಿಯೇ ಇವರ ಈ ವೈಖರಿಯನ್ನು ನೋಡಿ ನನ್ನಲ್ಲಿ ಬೆರಗು ಮೂಡಿತ್ತು. ಮೊಗ್ಗಿನ ಜಡೆಯನ್ನು ಸುಂದರವಾಗಿ ಹೆಣೆಯುತ್ತಿದ್ದರು. ಅನೇಕ ಸಾರಿ ನನಗೂ ಮೊಗ್ಗಿನ ಜಡೆ ಹಾಕಿದ್ದರು.

ಶ್ರೀಮತಿ ಗಾಡಿನಿಂಗಮ್ಮ ಅವರಿಗೆ ಒಬ್ಬಳೇ ಹೆಣ್ಣು ಮಗಳು ಸುಶೀಲ. ಆಕೆಯನ್ನು ಮನೆವಾಳತನಕ್ಕೆ ಮದುವೆ ಮಾಡಿಕೊಂಡಿದ್ದರು. ಅಳಿಯ ಶ್ರೀ ನರಸಿಂಹಾಚಾರ್. ಈತ ಮಾವನ ಕಸುಬಾದ ಗಾಡಿ ಮಾಡುವುದನ್ನೇ ಮುಂದುವರಿಸಿದ್ದ. ನಿಂಗಮ್ಮ ತಮಗಿದ್ದ ಜಮೀನಿನಲ್ಲಿ ವ್ಯವಸಾಯದ ಕೈಂಕರ್ಯವನ್ನು ಸಮರ್ಥವಾಗಿ ನಿರ್ವಹಿಸಿ ಸಂಸಾರದ ಹೊಣೆಯನ್ನು ಹೊತ್ತವರು. ನಂತರದಲ್ಲಿ ಜೀವನೋಪಾಯಕ್ಕಾಗಿ ಪುಟ್ಟ ಅಂಗಡಿಯೊಂದನ್ನು ಇಟ್ಟುಕೊಂಡು ಸುಗ್ಗಿಯ ಕಾಲದಲ್ಲಿ ಅದನ್ನು ಸಂಚಾರಿ ಅಂಗಡಿಯಾಗಿ ಬಯಲಿನಲ್ಲಿ ಇಟ್ಟು ದವಸ ಧಾನ್ಯ ಸಂಗ್ರಹಿಸುತ್ತಿದ್ದರು.

ಒಟ್ಟಾರೆ ಅಪೂರ್ವವಾದ ಕಂಠಶ್ರೀಯನ್ನು ಪಡೆದಿದ್ದ ಶ್ರೀ ನಿಂಗಮ್ಮನವರು 80 ವರ್ಷ ಪರೋಪಕಾರಿಯಾಗಿಯೇ ಬದುಕಿದ ಜೀವ. ನಮ್ಮ ನೆನಪಿನಂಗಳದಲ್ಲಿ ಸದಾ ಉಳಿದಿರುವ ಇವರ ಅಪಾರ ಸಾಹಿತ್ಯ ಕಾಡುಮಲ್ಲಿಗೆಯಾಗಿಯೇ ಉಳಿಯಿತು. ಜಾನಪದ ಕಲ್ಪವೃಕ್ಷವಾಗಿದ್ದವರು ಇವರಿಂದ ಸುಮಾರು 12 ವರ್ಷಗಳ ಹಿಂದೆಯೇ ಸಂಗ್ರಹಿಸಿದ ಕಥನ ಗೀತೆಗಳಲ್ಲಿ (ಪ್ರಸ್ತುತ ಕೃತಿಯಲ್ಲಿ) 1) ಹೊನ್ನಮ್ಮ 2) ನೀಲಮ್ಮ 3) ಕಂಡೆಣ್ಣು ಬುಡೋರಲ್ಲ—ಗಿರಿವಾಸಕ್ಕೆ ಬರೋರಲ್ಲ. ಈ ಮೂರನೆಯ ಕಥನ ಗೀತೆಯ ಶೀರ್ಷಿಕೆಯನ್ನು ಬದಲಿಸಿ ನಾನು ಕೊಡುವ ಸ್ವಾತಂತ್ರ್ಯವನ್ನು ಮಾಡಿದ್ದೇನೆ.

ಮತ್ತೊಬ್ಬ ಕಲಾವಿದೆ ಇದೇ ಊರಿನ ಶ್ರೀಮತಿ ಪಾರ್ವತಮ್ಮ (ನಿಂಗಮ್ಮನ ಓರಗಿತ್ತಿ). ಈಕೆ ಈಗಲೂ ಬದುಕಿದ್ದು ಕಾರ್ಯಕಟ್ಟುಗಳಲ್ಲಿ ಹಾಡುತ್ತಾರೆ, ಈಗ ವಯಸ್ಸಾದ ಕಾರಣದಿಂದ ಸ್ವಲ್ಪ ಧ್ವನಿ ಕುಂದಿದೆ. 75 ವರ್ಷ ವಯಸ್ಸಾಗಿರುವ

ಇವರಿಂದ 'ಸತ್ಯವಂತೆ ಹಡವಪ್ಪ' ಕಥನಗೀತೆಯನ್ನು ಸಂಗ್ರಹಿಸಿದ್ದೇನೆ. ಇವರ ಯಜಮಾನರು ಚಿನ್ನ ಬೆಳ್ಳಿ ಕೆಲಸ ಮಾಡುತ್ತಿದ್ದವರು. ಈಗ ವಿಧವೆಯಾಗಿರುವ ಈಕೆ ಇರುವ ಅಲ್ಪ ಜಮೀನಿನಲ್ಲೇ ಅಚ್ಚುಕಟ್ಟಾದ ವ್ಯವಸಾಯವನ್ನು ಮಾಡಿಸುತ್ತಿದ್ದು ಶಕ್ತಿ ಸಾಲದ ಕಾರಣ ಕೂಲಿ ಕೆಲಸ ಮಾಡುವುದನ್ನು ನಿಲ್ಲಿಸಿದ್ದಾರೆ. ಇವರಿಗೆ ಒಬ್ಬ ಮಗ, ಇಬ್ಬರು ಹೆಣ್ಣು ಮಕ್ಕಳಿದ್ದು ಮೊಮ್ಮಕ್ಕಳಿರುತ್ತಾರೆ.

"ಕೆಂಚಮ್ಮ" ಎಂಬ ಕಥನಗೀತೆಯನ್ನು ಇದೇ ಊರಿನ ನನಗೆ ಜನ್ಮನೀಡಿದ ಮಾತೃಶ್ರೀಯವರಿಂದ ಸಂಗ್ರಹಿಸಿರುತ್ತೇನೆ. ಇವರ ಹೆಸರು ಶ್ರೀಮತಿ ಬೋರಮ್ಮ ಉರುಫ್ ಕೆಂಚಮ್ಮ. ಯಜಮಾನರು ಅರ್ಥಾತ್ ನಮ್ಮ ತಂದೆಯವರು ಶ್ರೀ ತಿಮ್ಮೇಗೌಡರು. ಸಾಮಾನ್ಯವಾಗಿ ಬಾಲ್ಯದಿಂದಲೂ ಇವರಿಂದ ಅನೇಕ ಹಾಡುಗಳನ್ನು ಕಲಿತಿದ್ದೇನೆ. ಅನೇಕ ಜನಪದ ವೈದ್ಯಪದ್ಧತಿಯನ್ನು ಅರಿತಿದ್ದೇನೆ. ಒಟ್ಟಾರೆ ಕಥೆ ಗೀತೆ, ಗಾದೆ, ಒಗಟು ಎಲ್ಲವೂ ಇವರಿಂದ ನನಗೆ ಬಳುವಳಿಯಾಗಿ ಬಂದಿವೆ. ಈ ಮೂವರು ಕಲಾವಿದೆಯರು ಯಾರೂ ವಿದ್ಯಾವಂತರಲ್ಲ, ಹೆಬ್ಬೆಟ್ಟಿನವರು. ಆದರೆ ಅವರ ವಿದ್ಯೆ ಅಮೂಲ್ಯವಾದದೇ ಸರಿ. ಈ ಮೂವರೂ ಸ್ನೇಹಿತರುಗಳು ಶ್ರೀಮತಿ ಬೋರಮ್ಮನವರಿಗೆ ಈಗ ವಯಸ್ಸಾಗಿದ್ದು ಆರೋಗ್ಯ ಕ್ಷೀಣಿಸಿದೆ.

—||—

ಪಾಂಡವಪುರ ತಾಲ್ಲೂಕು ಚಾಗಟಿ ಮನ್ನೇನಹಳ್ಳಿ ಗ್ರಾಮದ ಶ್ರೀಮತಿ ದೇವಮ್ಮ ಇವರು ಶ್ರೀ ಕುಳ್ಳೇಗೌಡರ ಹೆಂಡತಿ. ವೃತ್ತಿ ವ್ಯವಸಾಯ, ಹಾಡುವುದು ಹವ್ಯಾಸ. ಇವರಿಂದ "ಹೊನ್ನಾಲಿ" ಕಥನಗೀತೆಯನ್ನು ಸಂಗ್ರಹಿಸಿದ್ದೇನೆ. ಒಕ್ಕಲು ಮನೆತನದ ಇವರು ನಾನು ಅವರಲ್ಲಿಗೆ ಹೋಗಿದ್ದಾಗ ಬಹು ಆದರದಿಂದ ಬರಮಾಡಿಕೊಂಡು ಸಂತಸದಿಂದ ಅವರಿಗೆ ತಿಳಿದಿದ್ದ ಸಾಹಿತ್ಯಸಿರಿಯ ಸೊಗಡನ್ನು ತಿಳಿಸಿಕೊಟ್ಟರು. ಹೆಚ್ಚಿನ ವೇಳೆಯನ್ನು ಜಮೀನಿನಲ್ಲಿ ಕಳೆಯುವುದು, ಶ್ರಮ ಮರೆಯುವುದಕ್ಕೆ ಹಾಡುವುದು ಇವರ ಪರಿಪಾಠ. ಸ್ವತಃ ನನಗೆ ದೊಡ್ಡಮ್ಮನವರೇ ಆದ ಇವರಿಗೆ ದಾನಬುದ್ಧಿ. 'ಕೊಡುಗೈ ದೇವಮ್ಮನೆಂದೇ' ಹೆಸರುಪಡೆದಿದ್ದ ಇವರು ಬಡವರನ್ನು ಕಂಡರೆ ತುಂಬಾ ಅನುಕಂಪವುಳ್ಳವರಾಗಿದ್ದರು. ಈಗ ಇವರು ನಮ್ಮೊಡನೆ ಇಲ್ಲದಿರುವುದು ದುಃಖದ ಸಂಗತಿ.

ಪಾಂಡವಪುರ ತಾಲ್ಲೂಕಿನ ಲಕ್ಷ್ಮೀಸಾಗರ ಗ್ರಾಮದ ಶ್ರೀ ಕೃಷ್ಣೇಗೌಡರು ಸೋಬಾನೆ ಕೃಷ್ಣೇಗೌಡರೆಂದೇ ಪ್ರಸಿದ್ಧಿ ಪಡೆದವರು. ಇವರಿಂದ "ಕೇದಿಗೆ" ಕಥನಗೀತೆಯನ್ನು ಸಂಗ್ರಹಿಸಿದ್ದೇನೆ. ಅಪಾರವಾದ ಸಾಹಿತ್ಯ ಸಂಪತ್ತನ್ನು ತುಂಬಿಕೊಂಡು ನಿಂತ ಸುಗ್ಗಿಯ ಕಣಜ ಇವರು. ಗಾರುಡಿ ಗೊಂಬೆ ಮಾಡುವ ನಿಷ್ಣಾವಂತರು. ಕರಗದ ಕೋಲಾಟದಲ್ಲಿ ಹೆಸರು ಪಡೆದವರು. ಸುಮಾರು 45 ವರ್ಷ ವಯಸ್ಸಿನ ಇವರು ಈಗಾಗಲೇ ಜಾನಪದ ಅಕಾಡೆಮಿ ಪ್ರಶಸ್ತಿಯನ್ನು ಪಡೆದುಕೊಂಡವರು. ಇವರಿಂದ

ಸಂಗ್ರಹಿಸಿರುವ ಹೆಚ್ಚಿನ ಸಾಹಿತ್ಯ ಬೆಳಕು ಕಾಣಬೇಕಾಗಿದೆ. ಒಕ್ಕಲಿಗರಾದ ಇವರ ಮುಖ್ಯ ಕಸುಬು ಬೇಸಾಯ. ಶ್ರದ್ಧೆಯಿಂದ ಬೇಸಾಯದ ಜೊತೆಗೆ ಜಾನಪದ ಕೃಷಿಯನ್ನೂ ಸಮರ್ಥವಾಗಿ ನಿರ್ವಹಿಸುತ್ತಾ ಬರುತ್ತಿದ್ದಾರೆ. ಯಾವುದೇ ಸಂದರ್ಭಕ್ಕೆ ತಕ್ಷಣವೇ ಹಾಡುವ ನೈಪುಣ್ಯತೆಯನ್ನು ಕರತಲಾಮಲಕವಾಗಿಸಿಕೊಂಡಿದ್ದಾರೆ. ಜನಪದ ಮಣ್ಣಿನ ವಾಸನೆ ಅವರ ಸುತ್ತಮುತ್ತ ಕಂಪಿಸುತ್ತಲೇ ಇರುತ್ತದೆ. ಸರಳ ಸ್ವಭಾವದ ಇವರು ಸೌಜನ್ಯದಿಂದ ನಡೆಯುವ ವಿನಯವಂತರು. ದಸರಾ ಉತ್ಸವಗಳಲ್ಲಿ ಆಕಾಶವಾಣಿ, ದೂರದರ್ಶನ ಇತ್ಯಾದಿಗಳಲ್ಲಿ ಕಾರ್ಯಕ್ರಮಗಳನ್ನು ಬಹು ಯಶಸ್ವಿಯಾಗಿ ನೀಡುತ್ತಾ ಬಂದಿದ್ದಾರೆ. ಇವರನ್ನು ಜಾನಪದ 'ಗರುಡಗಂಭ' ಎಂದರೆ ತಪ್ಪಾಗಲಾರದು. ಇವರು ನನ್ನ ಸಂಗ್ರಹಕಾರ್ಯದಲ್ಲಿ ಅಪಾರವಾಗಿ ಸಹಕರಿಸಿದ್ದಾರೆ. ಒಟ್ಟಾರೆ ಈ ಐದು ಜನ ಕಲಾವಿದರಿಗೂ ನನ್ನ ಕೃತಜ್ಞತೆಗಳನ್ನು ಈ ಮೂಲಕ ಸಲ್ಲಿಸುತ್ತೇನೆ.

—0—